Swabhimani Sahakari
Pages - 28, ₹12
Volume -14
Issue - 07
July - 2017

# ಸ್ವಾಭಿಮಾನಿ ಸಹಕಾರಿ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ



G GOODS — Good
S SERVICE — Simple
T TAX — Tax

## ದೇಶಕ್ಕೆ ಒಂದು ತೆರಿಗೆ ನೀತಿ: ರಾಷ್ಟ್ರಪತಿ, ಪ್ರಧಾನಿಯಿಂದ ಚಾಲನೆ

'ಜಿಎಸ್‌ಟಿ ಕೇವಲ ಆರ್ಥಿಕ ಬದಲಾವಣೆಗೆ ಸೀಮಿತವಾಗಿಲ್ಲ. ಸಾಮಾಜಿಕ ಬದಲಾವಣೆಗೂ ನಾಂದಿ ಹಾಡಲಿದೆ. ಅತ್ಯಂತ ಸಂಕೀರ್ಣ ಸ್ವರೂಪದ ತೆರಿಗೆ ವ್ಯವಸ್ಥೆಯಿಂದ ಭಾರತಕ್ಕೆ ಆರ್ಥಿಕ ವಿಮೋಚನೆ ಸಿಗಲಿದೆ. ಕಪ್ಪುಹಣ, ತಪ್ಪುಲೆಕ್ಕಗಳಿಗೆ ಕಡಿವಾಣ ಬೀಳಲಿದೆ'

-ಪ್ರಧಾನಿ ಮೋದಿ

International day · 2017 · of co-operatives
Co-operatives ensure
coop
no one is left behind

1 ಜುಲೈ 2017 ಅಂತರರಾಷ್ಟ್ರೀಯ ಸಹಕಾರ ದಿನ

▸▸ ಸೌಹಾರ್ದ ಸಹಕಾರಿಗಳ ಸಂಖ್ಯೆ : 4068 ▸▸ 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1048

# ತರಬೇತಿಯಿಂದ ಕ್ರಿಯಾಶೀಲತೆ ಅಭಿವೃದ್ಧಿ ಸಾಧ್ಯ



ರಾಜ್ಯದ ಸೌಹಾರ್ದ ಸಹಕಾರಿಗಳಿಗೆಲ್ಲ ಹಾರ್ಧಿಕ ಶುಭಾಷಯಗಳು. ಸೌಹಾರ್ದ ಸಹಕಾರಿ ಕ್ಷೇತ್ರದ 16 ವರ್ಷಗಳ ಪ್ರಯಾಣದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಸಾಧನೆ ಶ್ಲಾಘನೀಯ. ಈ ದೇಶದ ಹಾಗೂ ಈ ರಾಜ್ಯದ ಹಿರಿಯ ಸಹಕಾರಿಗಳ ಗಮನ ಸೆಳೆದಿದೆ. ಸರಕಾರದಲ್ಲಿ ಹಾಗೂ ದೇಶದ ಮತ್ತು ರಾಜ್ಯದ ಉನ್ನತ ಮಟ್ಟದ ಸಹಕಾರಿ ಸಂಸ್ಥೆಗಳಲ್ಲಿ ಈ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಚರ್ಚೆ ಹಾಗೂ ಸಮಾಲೋಚನೆ ಮತ್ತು ಸಮಾಧಾನಕರ ಮಾತುಗಳು ಕೇಳಿಬರುತ್ತಿವೆ. ಇದಕ್ಕೆಲ್ಲ ಕಾರಣ ರಾಜ್ಯದ ಸೌಹಾರ್ದ ಸಹಕಾರಿಗಳ ಆಸಕ್ತಿ ಮತ್ತು ಸೇವಾ ಕ್ರಿಯಾಶೀಲ ಮನೋಭಾವ, ಇವುಗಳ ಜೊತೆಗೆ ಈ ಸೌಹಾರ್ದ ಸಹಕಾರಿಗಳ ನೇತೃತ್ವ ವಹಿಸಿರುವ ಸಂಯುಕ್ತ ಸಹಕಾರಿಯ ಶಾಸನಬದ್ಧ ಕಾರ್ಯಚಟುವಟಿಕೆಗಳ ಜೊತೆಗೆ ಪರಿಣಾಮಕಾರಿ ತರಬೇತಿ ಕಾರ್ಯಚಟುವಟಿಕೆಗಳು.

ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳ ವೈಶಿಷ್ಟ್ಯತೆಗಳ ಹಾಗೂ ಪರಿಣಾಮಕಾರಿ ನಿರ್ವಹಣೆಯ ಬಗ್ಗೆ ಸಹಕಾರ ಕ್ಷೇತ್ರದಲ್ಲಿ ತೃಪ್ತಿದಾಯಕ ಮಾತುಗಳು ಕೇಳಿಬರುತ್ತಿರುವುದು ಸಂತೋಷದಾಯಕವಾದದ್ದು. ಈ ತರಬೇತಿಯಿಂದ ಸಹಕಾರಿಗಳಲ್ಲಿ ಹಾಗೂ ಸಹಕಾರಿಗಳ ಸಿಬ್ಬಂದಿಗಳಲ್ಲಿ ಕ್ರಿಯಾಶೀಲತೆಯ ಅಭಿವೃದ್ಧಿ ಸಾಧ್ಯವಾಗುತ್ತಿರುವುದನ್ನು ಗಮನಿಸಬಹುದಾಗಿದೆ. ವಿಶೇಷವಾಗಿ ನಿರ್ದೇಶಕರುಗಳ ಪರಿಣಿತಿ ಅಭಿವೃದ್ಧಿ ತರಬೇತಿ ಇರಬಹುದು ಅಥವಾ ಸಿಬ್ಬಂದಿಯವರುಗಳ ವ್ಯಕ್ತಿತ್ವ ವಿಕಸನ ತರಬೇತಿ ಇರಬಹುದು ಸಹಕಾರಿಗಳ ಭಾಗವಹಿಸುವಿಕೆಯ ಪ್ರಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವುದನ್ನು ಗಮನಿಸಬಹುದು. ತರಬೇತಿ ಅವಧಿಯಲ್ಲಿ ಉಪನ್ಯಾಸಕರುಗಳ ಉಪನ್ಯಾಸದ ಅವಧಿಯಲ್ಲಿ ಶಿಬಿರಾರ್ಥಿಗಳ ಭಾಗವಹಿಸುವಿಕೆಯನ್ನು ಗಮನಿಸಿದಾಗ ಅವರುಗಳಿಗೆ ಹೆಚ್ಚಿನ ವಿಷಯಗಳನ್ನು ತಿಳಿದುಕೊಳ್ಳುವ ಹಂಬಲ ಹಾಗೂ ತಾವುಗಳು ಇಂದಿನ ಪ್ರಸ್ತುತ ವಿಷಯಗಳ ಬಗ್ಗೆ ಸಂಪೂರ್ಣ ಜ್ಞಾನ ಹೊಂದುವ ಆಸಕ್ತಿ ಶ್ಲಾಘನೀಯವಾದುದಾಗಿದೆ.

ಇತ್ತೀಚಿಗೆ ನಡೆದ ನಿರ್ದೇಶಕರ ಆಡಳಿತ ಪರಿಣಿತಿ ತರಬೇತಿಯಲ್ಲಿ ಭಾಗವಹಿಸಿದ ಈ ರಾಜ್ಯದ ಸಹಕಾರ ಇಲಾಖೆಯ ಕಾರ್ಯದರ್ಶಿಯವರಾದ ಶ್ರೀ ಪಟ್ಟಣಶೆಟ್ಟಿಯವರು ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿಯನ್ನು ಮೆಚ್ಚಿ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಸರಕಾರ ಪ್ರೋತ್ಸಾಹಿಸಲು ಬದ್ಧ ಎಂದು ಹೇಳಿರುವುದು, 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿಯ ಉದ್ಘಾಟನೆ ಸಮಯದಲ್ಲಿ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ರಾಜ್ಯದ ಅಭಿವೃದ್ಧಿ ಆಯುಕ್ತರಾದ ಶ್ರೀ ಟಿ.ಎಂ.ವಿಜಯ ಭಾಸ್ಕರರವರು ರಾಜ್ಯದ ಒಟ್ಟು ಮತದಾರರ 1/8 ಭಾಗದಷ್ಟು ಜನರು ಈ ಸೌಹಾರ್ದ ಸಹಕಾರಿ ಕ್ಷೇತ್ರದಡಿಯಲ್ಲಿ ಬಂದಿರುವುದು ನಿಮ್ಮ ಪ್ರಗತಿ, ಈ ಕ್ಷೇತ್ರದ ಬಗ್ಗೆ ಜನರ ಆಸಕ್ತಿಯನ್ನು ತೋರಿಸುತ್ತದೆ ಎಂದು ಹೇಳಿರುವುದು, ಮುಕ್ತಾಯ ಸಮಾರಂಭದಲ್ಲಿ ಸಮಾರೋಪ ಭಾಷಣ ಮಾಡಿದ ಸಹಕಾರಿಗಳ ಜಂಟಿ ನಿಬಂಧಕರಾದ (ಕಾನೂನು ಕೋಶ) ಶ್ರೀ ಹೆಚ್.ಬಾಲಶೇಖರರವರು ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಯನ್ನು ಶ್ಲಾಘನೆ ಮಾಡುವುದರ ಜೊತೆಗೆ ಕಾನೂನು ನಿಯಮ ಹಾಗೂ ಉಪವಿಧಿಗಳ ವ್ಯಾಪ್ತಿಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಲು ಕಿವಿಮಾತು ಹೇಳಿರುವುದು ಸೌಹಾರ್ದ ಸಹಕಾರಿಗಳಲ್ಲಿ ಹೆಚ್ಚಿನ ಆಸಕ್ತಿ ಮೂಡಿಸಿದೆ ಮತ್ತು ಕ್ರಿಯಾಶೀಲತೆಯನ್ನು ಹೆಚ್ಚಿಸಲು ಸಹಕಾರಿಯಾಗಿದೆ.

ಈ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸುತ್ತಿರುವ ಹಾಗೂ ಪ್ರಯೋಜನ ಪಡೆಯುತ್ತಿರುವ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಅಭಿನಂದನೆಗಳು.

"ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳ ವೈಶಿಷ್ಟ್ಯತೆಗಳ ಹಾಗೂ ಪರಿಣಾಮಕಾರಿ ನಿರ್ವಹಣೆಯ ಬಗ್ಗೆ ಸಹಕಾರ ಕ್ಷೇತ್ರದಲ್ಲಿ ತೃಪ್ತಿದಾಯಕ ಮಾತುಗಳು ಕೇಳಿಬರುತ್ತಿರುವುದು ಸಂತೋಷದಾಯಕವಾದದ್ದು. ಈ ತರಬೇತಿಯಿಂದ ಸಹಕಾರಿಗಳಲ್ಲಿ ಹಾಗೂ ಸಹಕಾರಿಗಳ ಸಿಬ್ಬಂದಿಗಳಲ್ಲಿ ಕ್ರಿಯಾಶೀಲತೆಯ ಅಭಿವೃದ್ಧಿ ಸಾಧ್ಯವಾಗುತ್ತಿರುವುದನ್ನು ಗಮನಿಸಬಹುದಾಗಿದೆ."

▶▶ **ಹೆಚ್.ವಿ.ರಾಜೀವ,** ಉಪಾಧ್ಯಕ್ಷರು

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಹೆಚ್.ವಿ.ರಾಜೀವ
ಗೌರವ ಅಧ್ಯಕ್ಷರು

ಶ್ರೀ ಎಸ್.ಆರ್.ಸತೀಶಚಂದ್ರ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ್
ಸಂಪಾದಕರು

ಶ್ರೀ ವಿ.ಜೆ.ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾಣ ಭವನ", ಡಾ.ರಾಜಕುಮಾರ್ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ : 080-23378375-80, 23474408, 23573291
ಇ-ಮೇಲ್ : souharda@souharda.coop
ವೆಬ್‌ಸೈಟ್ : www.souharda.coop

## ಒಳಪುಟಗಳಲ್ಲಿ . . .

ಹೊಸ ತೆರಿಗೆ ವ್ಯವಸ್ಥೆ ದೇಶದಲ್ಲಿ ಭಾರೀ ಬದಲಾವಣೆಗೆ ಕಾರಣವಾಗಲಿದೆ : ರಾಷ್ಟ್ರಪತಿ ಪ್ರಣಬ್ ಮುಖರ್ಜಿ ............ 5

ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ಬೆಂಗಳೂರಿನಲ್ಲಿ 17ನೇ ತಂಡದ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮ ............ 7

ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ 7 ದಿನಗಳ ಬ್ಯಾಂಕಿಂಗ್ ಮೂಲ ಮಾಹಿತಿ ತರಬೇತಿ ..... 12

ಬೆಂಗಳೂರು ವಿಭಾಗದ ನೂತನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಪ್ರವೇಶ ತರಬೇತಿ ............ 14

ಸೌಹಾರ್ದ ಸಹಕಾರಿ ಸಮಾಚಾರಗಳು ............ 17

ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಕಾಯ್ದೆ ನಿರ್ವಹಣೆ ಸೌಹಾರ್ದ ಸಹಕಾರಿಗಳ ಜವಾಬ್ದಾರಿ ............ 20

ಕರ್ನಾಟಕ ಸೌಹಾರ್ದ ಕಾಯಿದೆಯಲ್ಲಿ ಆಡಳಿತ ಮಂಡಳಿಯ ನಿರ್ದೇಶಕರು ನಿರ್ವಹಿಸಬೇಕಾದ/ ತಿಳಿಯಬೇಕಾದ ಹಕ್ಕು ಕರ್ತವ್ಯ ಮತ್ತು ಜವಾಬ್ದಾರಿಗಳು ............ 22

ದಿವಾಳಿತನ ಮತ್ತು ಪಾಪರಿಕೆ ಸಂಹಿತೆ-2016 ಒಂದು ಪಕ್ಷಿನೋಟ ............ 23

# ಸಂಪಾದಕೀಯ

## ಸೌಹಾರ್ದ ಸಹಕಾರಿಗಳಲ್ಲಿ ಗ್ರಾಹಕ ಸೇವೆಗೆ ಅಗತ್ಯ ಕ್ರಮ

ಆಧುನಿಕ ಪೈಪೋಟಿ ಯುಗದಲ್ಲಿ ಅದರಲ್ಲೂ ಜಾಗತೀಕರಣ, ಖಾಸಗೀಕರಣ ಹಾಗೂ ಉದಾರೀಕರಣಗಳಿಂದಾಗಿ ಗ್ರಾಹಕ ಆದ್ಯತೆಯ ಸೇವೆಗಳಿಗೆ ಹೆಚ್ಚಿನ ಮಹತ್ವ ಬಂದಿದೆ. ಗ್ರಾಹಕನ ಬೇಕು ಬೇಡಿಕೆಗಳನ್ನು ಗ್ರಾಹಕ ವಸ್ತುಗಳ ಆಯ್ಕೆ ವಿಧಾನಗಳನ್ನು ಆಧರಿಸಿ ಗುಣಮಟ್ಟದ ವಸ್ತುಗಳ ಉತ್ಪಾದನೆ, ರೂಪಾಂತರ ಹಾಗೂ ಮಾರಾಟ ವ್ಯವಸ್ಥೆ ಬೆಳೆಯುತ್ತಿದೆ. ದಿನದಿಂದ ದಿನಕ್ಕೆ ಹೊಸ ಆಯಾಮಗಳು ಈ ಕ್ಷೇತ್ರದಲ್ಲಿ ಕಾಣಬರುತ್ತಿವೆ. ಹೀಗಾಗಿ ಗುಣಮಟ್ಟದ ವಸ್ತುಗಳ ಉತ್ಪಾದನೆ, ಪೈಪೋಟಿಯ ದರ ನಿರ್ವಹಣೆ ಹಾಗೂ ಸೇವೆ ಮತ್ತು ಅತ್ಯಾಕರ್ಷಕ ಪ್ರಚಾರಗಳಿಲ್ಲದೇ ಯಾವ ಕಂಪನಿಯವರು ಕಾರ್ಯನಿರ್ವಹಿಸಲು ಸಾಧ್ಯವಿಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ.

ಸಹಕಾರ ಕ್ಷೇತ್ರಕ್ಕೆ ಇದು ಸವಾಲು. ಸಹಕಾರ ಕ್ಷೇತ್ರಕ್ಕೆ 113 ವರ್ಷಗಳ ಇತಿಹಾಸ ಇದೆ. ಅನೇಕ ಏರು-ಪೇರುಗಳನ್ನು ಕಂಡಿದೆ. ಜನರಿಗೆ ಉತ್ತಮ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಾ ಬಂದಿದೆ. ಸರಕಾರದ ಅನೇಕ ಕಾರ್ಯಕ್ರಮಗಳ ನಿರ್ವಹಣೆಗೆ ಸಹಕಾರ ಕ್ಷೇತ್ರಕ್ಕೆ ಪರ್ಯಾಯವಾಗಿ ಮತ್ತೊಂದು ವ್ಯವಸ್ಥೆ ಹುಟ್ಟಿಕೊಂಡಿರುವುದಿಲ್ಲ. ಹತ್ತು ಹಲವು ವಿಧವಾದ ಸಹಕಾರಿ ಸಂಸ್ಥೆಗಳು ಹಲವಾರು ವಿಧವಾದ ಚಟುವಟಿಕೆಗಳು ಈ ಕ್ಷೇತ್ರದಲ್ಲಿದ್ದು, ಸಹಕಾರಿ ಚಳುವಳಿ ಜನರ ಜೀವನ ಪದ್ಧತಿಯಾಗಿದೆ. ಈ ಕ್ಷೇತ್ರವನ್ನು ನಿರ್ಲಕ್ಷಿಸುವಂತಿಲ್ಲ. ಹೀಗಾಗಿ ಸಹಕಾರ ಕ್ಷೇತ್ರ ಸರಕಾರಕ್ಕೆ ಮತ್ತು ಜನರಿಗೆ ಬೇಕು. ಆದರೆ, ಸಾಂಪ್ರದಾಯಿಕ ವ್ಯವಹಾರಗಳನ್ನು ಬದಿಗಿರಿಸಿ, ಉತ್ತಮ ಆಡಳಿತ ಹಾಗೂ ಕಾರ್ಯನಿರ್ವಹಣೆಯನ್ನು ಮತ್ತು ಆಧುನಿಕತೆಯನ್ನು ಮೈಗೂಡಿಸಿಕೊಂಡು ಸದಸ್ಯರಿಗೆ ಮತ್ತು ಗ್ರಾಹಕರಿಗೆ ಉತ್ತಮ ಸೇವೆಗಳನ್ನು ಒದಗಿಸುವ ಕಾರ್ಯಗಳನ್ನು ಹಮ್ಮಿಕೊಂಡರೆ ಮಾತ್ರ ಈ ಕ್ಷೇತ್ರ ಉಳಿದು ಬೆಳೆಯುತ್ತದೆ.

ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ 16 ವರ್ಷಗಳ ಇತಿಹಾಸ. ಪೈಪೋಟಿ ಯುಗದಲ್ಲಿಯೇ ಈ ಕ್ಷೇತ್ರ ಕಾರ್ಯಾಚರಣೆ ಪ್ರಾರಂಭಿಸಿದೆ. ಸದಸ್ಯರ ಹಾಗೂ ಗ್ರಾಹಕರ ಸೇವೆಗಳನ್ನೇ ಪ್ರಧಾನವಾಗಿರಿಸಿಕೊಂಡು ಕಾರ್ಯನಿರ್ವಹಿಸುತ್ತಿರುವುದು, ಹಳೆಯ ಸಾಂಪ್ರದಾಯಿಕ ವ್ಯವಸ್ಥೆಯಲ್ಲಿರುವ ಸಹಕಾರಿ ಸಂಸ್ಥೆಗಳಿಗೆ ಹೊಸ ಚೈತನ್ಯ ತಂದಿರುವುದು ನಮ್ಮ ಹೆಗ್ಗಳಿಕೆಯಾದರೆ, ನಮ್ಮ ಅಸ್ತಿತ್ವವನ್ನು, ನಮ್ಮ ಬುನಾದಿಯನ್ನು ಇನ್ನೂ ಭದ್ರಪಡಿಸುವುದಕ್ಕಾಗಿ ನಾವು ಗ್ರಾಹಕ ಸೇವೆಯ ಹಲವು ವಿಧಾನಗಳನ್ನು ಅಧ್ಯಯನ ಮಾಡಿ ಕಾರ್ಯರೂಪಕ್ಕೆ ತರುವುದು ಅನಿವಾರ್ಯ. ಸಹಕಾರ ಕ್ಷೇತ್ರದ ಉತ್ತಮ ಕಾರ್ಯನಿರ್ವಹಣೆಯಿಂದಾಗಿಯೇ ವಸ್ತುಗಳ ಉತ್ಪಾದನೆ, ಗುಣಮಟ್ಟ ಮತ್ತು ದರಗಳ ನಿರ್ವಹಣೆಯಲ್ಲಿ ಒಂದು ನಿಯಂತ್ರಣವಾಗಿದೆ ಎಂಬುದರ ಬಗ್ಗೆ ಸಹಕಾರಿಗಳು ಹಾಗೂ ಸರಕಾರ ಹೆಮ್ಮೆಪಡುವ ವಿಷಯ.

ಆದ್ದರಿಂದ, ರಾಜ್ಯದ ಸೌಹಾರ್ದ ಸಹಕಾರಿಗಳು ತಮ್ಮ ಸದಸ್ಯರಿಗೆ ಮತ್ತು ಗ್ರಾಹಕರಿಗೆ ಅವಶ್ಯಕವೆನಿಸುವ ಸೇವೆಗಳನ್ನು ನೀಡುವುದು, ವಸ್ತುಗಳ ಉತ್ಪಾದನೆ, ಸರಬರಾಜು ಹಾಗೂ ಮಾರಾಟ ಹೀಗೆ ಹಲವು ವಿಧವಾದ ಸೇವೆಗಳಲ್ಲಿ ಪ್ರತಿಯೊಂದು ವಿಷಯದಲ್ಲಿ ಆಸಕ್ತಿ ವಹಿಸಿ ಧನಾತ್ಮಕ ಹಾಗೂ ಗುಣಾತ್ಮಕ ಸೇವೆಗಳನ್ನು ಒದಗಿಸುವುದರಲ್ಲಿ ಮುಂಚೂಣಿಯಲ್ಲಿರುವುದು ಅವಶ್ಯಕ.



## ಜ್ಞಾನ ಜ್ಯೋತಿ

ಶ್ರೀ ಸಿದ್ದೇಶ್ವರ ಸ್ವಾಮೀಜಿಯವರ ಉಪನ್ಯಾಸ ಸಂಗ್ರಹಗಳ ಆಯ್ದ ಭಾಗ

### ಸತ್ಯ–ದರ್ಶನ

ತುಳಸಿದಾಸನಿಗೆ ತನ್ನ ಸತಿಯ ಮೇಲೆ ಅಪಾರ ಮೋಹ, ಹೊಸದಾಗಿ ಲಗ್ನವಾಗಿತ್ತು. ಹೊಳೆಯ ಆಚೆಗೆ ಸತಿಯ ಮನೆ. ಹೊಳೆಯ ಈಚೆ ಈತನ ಮನೆ. ಒಂದು ದಿನ ಸತಿಯು ತವರು ಮನೆಗೆ ಅವಸರದಲ್ಲಿ ಈತನಿಗೆ ಹೇಳದೇ ಹೋದಳು. ಇವನಿಗಾದರೋ ಸತಿಯು ಒಂದು ಕ್ಷಣ ಎದುರಿಗೆ ಇರದಿದ್ದರೆ ಜೀವನವೇ ಬೇಸರವೆನಿಸುತ್ತಿತ್ತು. ತುಳಸಿದಾಸ ತಕ್ಷಣ ನಿರ್ಣಯಿಸಿದ "ಈ ದಿನ ರಾತ್ರಿ ಎಷ್ಟೊತ್ತಾದರೂ ಸತಿಯ ಮನೆ ತಲುಪಬೇಕು.

ಅದೇ ದಿನ ಹೊಳೆಗೆ ಮಹಾಪೂರ ಬಂದಿತ್ತು. ಸುತ್ತಮುತ್ತಲಿನ ಕಸ–ಕಡ್ಡಿ, ಎಡ–ಬಲ ದಂಡೆಯ ತಿಪ್ಪೆ, ಜಗದ ಕೊಳೆಯಲ್ಲ ಹೊಳೆಯೊಳಗೆ ತುಂಬಿಕೊಂಡಿತ್ತು. ತುಳಸೀದಾಸನಿಗೆ ಅದಾವುದೂ ಕಾಣಿಸಲಿಲ್ಲ. ಈತನ ಕಣ್ಣಲ್ಲಿ ಸತಿಯ ರೂಪ, ಮನದಲ್ಲಿ ಸತಿಯ ನೆನಹು ತುಂಬಿತ್ತು. ಸತಿಯ ಮೋಹ ಹೆಚ್ಚಾಗಿ ಮೈಯಲ್ಲಿ ಹೊಸ ಶಕ್ತಿ ಮೂಡಿತ್ತು. ಹೊಳೆಗೆ ಧುಮುಕಿದ. ನೋಡು ನೋಡುವುದರಲ್ಲಿ ಆಚೆಯ ದಡ ತಲುಪಿದ. ಮೈಮೇಲೆಲ್ಲ ಕಣ್ಣಿನಿಂದ ನೋಡಬಾರದ ಕೊಳೆಯೆಲ್ಲ ಹೊತ್ತು ಹೊರ ಬಂದ!

ಅದೇ ಅವಸ್ಥೆಯಲ್ಲಿ ಸತಿಯ ಮನೆ ತಲುಪಿದ. ಮೋಹದ ಮಡದಿ ಹೊರಗೆ ಬಂದು ನೋಡಿದಳು. ಆತನ ಮೈಯೆಲ್ಲಾ ಕೊಳೆ. ಕಣ್ಣಲ್ಲಿ ಮಾತ್ರ ಬರಿ ಪ್ರೇಮದ ಕಳೆ! ಸತಿಯು ಕೇಳಿದಳು "ಇದೇನಿದು, ಇಷ್ಟು ರಾತ್ರಿ ಹೇಗೆ ಬಂದಿರಿ?" "ಹೌದು, ನಿನ್ನನ್ನು ಕಾಣದೇ ಇರಲಾಗಲಿಲ್ಲ ಬಂದೆ!" ಎಂದ ಪತಿ. ಜಾಣ ಸತಿ ಒಂದೇ ಮಾತನ್ನು ಹೇಳಿದಳು "ಇಷ್ಟೇ ಪ್ರೇಮ ನೀವು ದೇವರ ಮೇಲೆ ಇಟ್ಟಿದ್ದರೆ ನಿಮಗೆ ದೇವರ ದರ್ಶನ ಆಗುತ್ತಿತ್ತಲ್ಲ!". ಸತಿಯ ಈ ಮಾತು ಕೇಳುತ್ತಲೇ ಪತಿಗೆ ಒಮ್ಮೆಲೇ ಸತ್ಯವು ಹೊಳೆಯಿತು! ಮೋಹದ ಕತ್ತಲೆ ಕಳೆದು ಆತನ ಮನದಲ್ಲಿ ಜ್ಞಾನದ ಜ್ಯೋತಿ ಬೆಳಗಿತು. "ಹಾಗಾದರೆ ಈ ಕ್ಷಣದಿಂದ ದೇವರ ದಾರಿ ತೋರಿದ ನೀನೇ ನನಗೆ ಗುರು. ನಿನ್ನ ಮಾತೇ ನನಗೆ ಮಂತ್ರ. ನೀನು ತುಳಸೀ ನಾನು ದಾಸ ತುಳಸೀದಾಸ!" ಎಂದವನೇ ಆತನು ಮಡದಿಯ ಮಹಡಿಯ ಮನೆಯಿಂದ ಕೆಳಗಿಳಿದು ಬಂದ. ಸಂಸಾರ ವಿಷಯದ ವ್ಯಾಮೋಹವನ್ನು ಕಳೆದುಕೊಂಡು ಸತ್ಯದರ್ಶನ ಮಾಡಿಕೊಂಡು ಮಹಾಸಂತನಾದ.

## ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತ್ ನ್ಯಾಯಾಲಯದ ಸಮಾಚಾರ

### ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತ್ ನ್ಯಾಯಾಲಯದ ಸಮಾಚಾರ

**ದಾವಾ ದಾಖಲಾತಿಗಳು :** ಬೆಳಗಾವಿ ವಿಭಾಗದಿಂದ 1862 ಮತ್ತು ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ವಿಭಾಗಗಳಿಂದ 785 ಪ್ರಕರಣಗಳು ಸೇರಿದಂತೆ ಒಟ್ಟು 2647 ದಾವಾ ಪ್ರಕರಣಗಳು ದಾಖಲಾಗಿವೆ. ಇವುಗಳ ಪೈಕಿ 1575 ಪ್ರಕರಣಗಳು ಇತ್ಯರ್ಥಗೊಂಡಿವೆ.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 271 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 05 ಪ್ರಕರಣ ಇತ್ಯರ್ಥಗೊಂಡಿದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 231 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತ್ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು, 03 ಪ್ರಕರಣ ಇತ್ಯರ್ಥಗೊಂಡಿದೆ.

### ಅಮಲ್ಜಾರಿ ಪ್ರಕರಣಗಳ ಶುಲ್ಕ ಪಾವತಿಗೆ ಪ್ರತ್ಯೇಕ ಖಾತೆ

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತ್ ನ್ಯಾಯಾಲಯದಲ್ಲಿ ಅಮಲ್ಜಾರಿ ಪ್ರಕರಣ ದಾಖಲಿಸುವುದಕ್ಕೆ ಸಂಬಂಧಿಸಿದಂತೆ ಅಮಲ್ಜಾರಿ ಶುಲ್ಕ ಪಾವತಿಸಲು ಪ್ರತ್ಯೇಕ ಬ್ಯಾಂಕ್ ಖಾತೆ ತೆರೆಯಲಾಗಿದ್ದು, ಸದರಿ ಬ್ಯಾಂಕ್ ಖಾತೆಗೆ ಅಮಲ್ಜಾರಿ ಶುಲ್ಕ ಪಾವತಿಸಲು ತಿಳಿಸಿದೆ. ಬ್ಯಾಂಕಿನ ಖಾತೆಯ ವಿವರ ಈ ರೀತಿ ಇದೆ.

ಬ್ಯಾಂಕ್ ಖಾತೆ ಸಂಖ್ಯೆ : 04242010123239, ಬ್ಯಾಂಕಿನ ಹೆಸರು : ಸಿಂಡಿಕೇಟ್ ಬ್ಯಾಂಕ್, ಶಾಖೆ : ಮಲ್ಲೇಶ್ವರಂ, ಬೆಂಗಳೂರು–55, IFCS Code : synb0000424

### ಸಂಯುಕ್ತ ಸಹಕಾರಿಯ ಶಾಸನಬದ್ಧ ಕರ್ತವ್ಯಗಳು

ಗಂಗಾಕಾವೇರಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ತಿಪಟೂರು ಇದರ ಆಡಳಿತ ಮಂಡಲಿಯ 07 (ಏಳು) ಜನ ನಿರ್ದೇಶಕರುಗಳು ತಮ್ಮ ಸ್ಥಾನಗಳಿಗೆ ರಾಜೀನಾಮೆಯನ್ನು ಸಲ್ಲಿಸಿರುವ ಹಿನ್ನೆಲೆಯಲ್ಲಿ ಸಹಕಾರಿಯ ಆಡಳಿತ ಮಂಡಲಿಯ ಸದಸ್ಯರ ಸಂಖ್ಯೆಯು ಕೋರಂಗೆ ಅಗತ್ಯ ಸಂಖ್ಯೆಕ್ಕಿಂತ ಕಡಿಮೆಯಾಗಿ ಸಾಂವಿಧಾನಿಕ ಬಿಕ್ಕಟ್ಟು ಉಂಟಾಗಿರುವ ಕಾರಣದಿಂದಾಗಿ ಶ್ರೀ ಶಶಿಕುಮಾರ್ ಎಸ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಬೆಂಗಳೂರು ವಿಭಾಗ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇವರನ್ನು ವಿಶೇಷಾಧಿಕಾರಿಯಾಗಿ ನೇಮಿಸಿ ದಿನಾಂಕ 03 ಜೂನ್ 2017ರಂದು ಆದೇಶ ಹೊರಡಿಸಲಾಗಿದೆ.

### ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು

ರಾಜ್ಯದ ಸೌಹಾರ್ದ ಸಹಕಾರಿಗಳಿಗಾಗಿ ಸರಕು ಮತ್ತು ಸೇವಾ ತೆರಿಗೆ (GST)ಗೆ ಸಂಬಂಧಿಸಿದಂತೆ ತರಬೇತಿ ಕಾರ್ಯಾಗಾರಗಳನ್ನು ರಾಜ್ಯದಾದ್ಯಂತ ವಿಭಾಗವಾರು ಆಯೋಜಿಸಲು ಉದ್ದೇಶಿಸಲಾಗಿದ್ದು, ತರಬೇತಿಯ ದಿನಾಂಕ, ಸ್ಥಳಗಳ ವಿವರಗಳನ್ನು ಮುಂಬರುವ ದಿನಗಳಲ್ಲಿ ತಿಳಿಸಲಾಗುವುದು.

# ಹೊಸ ತೆರಿಗೆ ವ್ಯವಸ್ಥೆ ದೇಶದಲ್ಲಿ ಭಾರೀ ಬದಲಾವಣೆಗೆ ಕಾರಣವಾಗಲಿದೆ : ರಾಷ್ಟ್ರಪತಿ ಪ್ರಣಬ್ ಮುಖರ್ಜಿ

# ಜಿಎಸ್‌ಟಿ ಜಾರಿಯಿಂದ ದೇಶದಲ್ಲಿ ಹೊಸ ಆರ್ಥಿಕ ಶಕೆ ಆರಂಭವಾಗಿದೆ : ಪ್ರಧಾನಿ ಮೋದಿ

**ಜಿಎಸ್‌ಟಿ ಜಾರಿ ಮೂಲಕ ಈ ಹಿಂದೆ ಇದ್ದ ಹತ್ತಕ್ಕೂ ಹೆಚ್ಚು ಕೇಂದ್ರ ಮತ್ತು ರಾಜ್ಯ ತೆರಿಗೆಗಳು ವಿಲೀನವಾಗಿದ್ದು, ತೆರಿಗೆಗಳ ಮೇಲಿನ ತೆರಿಗೆಗಳು ಹಾಗೂ ಗ್ರಾಹಕರು ತಿಳಿಯದೇ ನೀಡುತ್ತಿದ್ದ ಪರೋಕ್ಷ ತೆರಿಗೆಗಳಿಗೂ ಕೂಡ ಕಡಿವಾಣ ಬಿದ್ದಂತಾಗಿದೆ. ಇನ್ನು ನಿತ್ಯ ಬಳಕೆಯ ಅನೇಕ ಅಗತ್ಯ ಸರಕುಗಳ ಬೆಲೆ ಇಳಿಕೆಯಾಗಲಿದ್ದು, ಮಾಲ್, ಶಾಪಿಂಗ್, ಬ್ಯಾಕಿಂಗ್ ನಂತಹ ಕೆಲ ಆರ್ಥಿಕ ಸೇವೆಗಳು ಕೊಂಚ ದುಬಾರಿಯಾಗಲಿವೆ.**

**ನವದೆಹಲಿ :** ಜೂ.30 ರ ಮಧ್ಯರಾತ್ರಿ ನಡೆದ ಸಂಸತ್ ವಿಶೇಷ ಅಧಿವೇಶನ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಗಿದ್ದು, ಭಾರತ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಜಾರಿಗೊಂಡಿದೆ.

ವಿಶೇಷ ಅಧಿವೇಶನದಲ್ಲಿ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಹಾಗೂ ಪ್ರಧಾನಿ ನರೇಂದ್ರ ಮೋದಿ ಸರಕು ಮತ್ತು ಸೇವಾ ತೆರಿಗೆಗೆ (ಜಿಎಸ್‌ಟಿ) ಗೆ ಚಾಲನೆ ನೀಡಿದ ಸಂದರ್ಭದಲ್ಲಿ, ಉಪರಾಷ್ಟ್ರಪತಿ ಹಮೀದ್ ಅನ್ಸಾರಿ, ಲೋಕಸಭಾ ಸ್ಪೀಕರ್ ಸುಮಿತ್ರಾ ಮಹಾಜನ್, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಹಣಕಾಸು ಸಚಿವರಾದ ಅರುಣ್ ಜೇಟ್ಲಿ ಅವರುಗಳು ವೇದಿಕೆಯಲ್ಲಿದ್ದರು.

ಹೊಸ ತೆರಿಗೆ ವ್ಯವಸ್ಥೆ ದೇಶದಲ್ಲಿ ಭಾರಿ ಬದಲಾವಣೆಗೆ ಕಾರಣವಾಗಲಿದ್ದು, ಡಿಜಿಟಲ್ ಮತ್ತು ಮಾಹಿತಿ ತಂತ್ರಜ್ಞಾನದಿಂದಾಗಿ ಜಿಎಸ್‌ಟಿ ಜಾರಿ ಸುಲಭವಾಗಲಿದೆ ಎಂದು ಪ್ರಣವ್ ಮುಖರ್ಜಿ ಆಶಿಸಿದರು.

ಮೌಲ್ಯ ವರ್ಧಿತ ತೆರಿಗೆ (ವ್ಯಾಟ್) ಜಾರಿಯಾದ ಹೊಸದರಲ್ಲಿ ಎದುರಾದ ತೊಂದರೆಯೇ ಈಗಲೂ ಆಗಬಹುದು. ಹೊಸ ವ್ಯವಸ್ಥೆಗೆ ಒಗ್ಗಿಕೊಳ್ಳಲು ಸ್ವಲ್ಪ ಸಮಯ ಬೇಕಾಗುತ್ತದೆ ಎಂದರು.

'ನಾನು ಕೂಡ ಜಿಎಸ್‌ಟಿ ಯಾತ್ರೆಯ ಭಾಗವಾದ ಕಾರಣ ಎಲ್ಲ ಘಟನೆಗಳನ್ನು ಹತ್ತಿರದಿಂದ ಕಾಣುವ ಅವಕಾಶ ದೊರೆಯಿತು. ದೇಶದ ಖ್ಯಾತ ಆರ್ಥಿಕ ತಜ್ಞರು, ಹಣಕಾಸು ಸಚಿವರ ಒಡನಾಟ ಲಭಿಸಿತು' ಎಂದು ಮುಖರ್ಜಿ ಅವರು ಹಳೆಯ ನೆನಪುಗಳನ್ನು ಮೆಲುಕು ಹಾಕಿದರು.

ಜಿಎಸ್‌ಟಿಗೆ ಚಾಲನೆ ನೀಡುವುದಕ್ಕೂ ಮುನ್ನ ಜಂಟಿ ವಿಶೇಷ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ಜಿಎಸ್‌ಟಿ ಯಾವುದೇ ಒಂದು ಸರ್ಕಾರ ಅಥವಾ ಪಕ್ಷದ ಸಾಧನೆಯಲ್ಲ, ಇದು ಎಲ್ಲರ ಒಗ್ಗಟ್ಟಿನ ಶ್ರಮದ ಫಲವಾಗಿದೆ. ಹಲವು ತಜ್ಞರ ಮಾರ್ಗದರ್ಶನದಲ್ಲಿ ಜಿಎಸ್‌ಟಿ ರೂಪುಗೊಂಡಿರುವ ಜಿಎಸ್‌ಟಿ ಜಾರಿಯ ಮೂಲಕ ಭಾರತಕ್ಕೆ ಆರ್ಥಿಕ ಸ್ವಾತಂತ್ರ್ಯ ದೊರೆತಿದೆ ಎಂದು ಹೇಳಿದ್ದಾರೆ.

ಜಿಎಸ್‌ಟಿ ಕೇವಲ ಅರ್ಥವ್ಯವಸ್ಥೆಯ ಕ್ರಾಂತಿಯಷ್ಟೇ ಅಲ್ಲದೇ ಲೋಕತಂತ್ರ ವ್ಯವಸ್ಥೆಯ ದೊಡ್ಡ ಕ್ರಾಂತಿಯೂ ಆಗಿದೆ. ಜಿಎಸ್‌ಟಿ ಜಾರಿ ಮೂಲಕ ಭಾರತದ ಅಭಿವೃದ್ಧಿಯಲ್ಲಿ ಹೊಸ ಅಧ್ಯಾಯ ಪ್ರಾರಂಭವಾಗಲಿದ್ದು, ಭಾರತ ಹೊಸ ದಿಕ್ಕಿನತ್ತ ಸಾಗಲಿದೆ. ಸ್ವಾತಂತ್ರ್ಯ ಬಂದಾಗ ಸಂಸತ್ ನಲ್ಲಿ ಮಧ್ಯರಾತ್ರಿ ವಿಶೇಷ ಅಧಿವೇಶನ ನಡೆದಿತ್ತು, ಸ್ವಾತಂತ್ರ್ಯ ನಂತರ ವಲ್ಲಭ ಭಾಯ್ ಪಟೇಲ್ ಅವರು ದೇಶವನ್ನು ಒಗ್ಗೂಡಿಸಿದ್ದರು, ಈಗ ಜಿಎಸ್‌ಟಿಯಿಂದ ಆರ್ಥಿಕ ಸ್ವಾತಂತ್ರ್ಯ ದೊರೆತಿದ್ದು,



ಜಿಎಸ್‌ಟಿ ಆರ್ಥಿಕ ಏಕೀಕರಣದ ಮಹತ್ವದ ಘಟ್ಟವಾಗಿದೆ ಎಂದಿದ್ದಾರೆ.

ಇದೇ ವೇಳೆ ಪ್ರಧಾನಿ ನರೇಂದ್ರ ಮೋದಿ ಜಿಎಸ್‌ಟಿಗೆ ಹೊಸ ವ್ಯಾಖ್ಯಾನ ನೀಡಿದ್ದು, ಕಾನೂನಿನ ಭಾಷೆಯಲ್ಲಿ ಜಿಎಸ್‌ಟಿ ಅಂದ್ರೆ ಸರಕು ಮತ್ತು ಸೇವಾ ತೆರಿಗೆ ಎಂದು ಹೇಳಲಾಗುತ್ತದೆ. ಆದರೆ ಸರಳವಾಗಿ ಹೇಳಬೇಕೆಂದರೆ ಜಿಎಸ್‌ಟಿ ಅಂದ್ರೆ ಗುಡ್ ಆಂಡ್ ಸಿಂಪಲ್ ಟ್ಯಾಕ್ಸ್ ಎಂದು ಹೇಳಿದ್ದಾರೆ.

ಯಾವುದೇ ವಸ್ತು ಎಷ್ಟೇ ದೂರದಲ್ಲಿರಲಿ, ಕಠಿಣ ಪರಿಶ್ರಮದಿಂದ ಪಡೆಯಬಹುದು ಎಂದು ಚಾಣಕ್ಯ ಹೇಳಿದ್ದಾರೆ. ಅಂತೆಯೇ ಜಿಎಸ್‌ಟಿ ಹಲವು ವರ್ಷಗಳ ಪರಿಶ್ರಮದ ಫಲವಾಗಿದೆ ಎಂದು ಹೇಳುವ ಮೂಲಕ ಮೋದಿ ತಮ್ಮ ಭಾಷಣದಲ್ಲಿ ಚಾಣಕ್ಯನನ್ನು ಸ್ಮರಿಸಿದ್ದಾರೆ.

ಹೊಸ ತೆರಿಗೆ ವ್ಯವಸ್ಥೆ ಭಾರತದ ಆರ್ಥಿಕ ದಿಗಂತವನ್ನು ವಿಸ್ತರಿಸಲಿದ್ದು, ಆರ್ಥಿಕ ಪ್ರಗತಿ (ಜಿಡಿಪಿ) ಹೆಚ್ಚಲಿದೆ ಎಂದು ಹಣಕಾಸು ಸಚಿವರಾದ ಅರುಣ್ ಜೇಟ್ಲಿ ಹೇಳಿದರು.

ಜಿಎಸ್‌ಟಿ ಜಾರಿ ಮೂಲಕ ಈ ಹಿಂದೆ ಇದ್ದ ಹತ್ತಕ್ಕೂ ಹೆಚ್ಚು ಕೇಂದ್ರ ಮತ್ತು ರಾಜ್ಯ ತೆರಿಗೆಗಳು ವಿಲೀನವಾಗಿದ್ದು, ತೆರಿಗೆಗಳ ಮೇಲಿನ ತೆರಿಗೆಗಳು ಹಾಗೂ ಗ್ರಾಹಕರು ತಿಳಿಯದೇ ನೀಡುತ್ತಿದ್ದ ಪರೋಕ್ಷ ತೆರಿಗೆಗಳಿಗೂ ಕೂಡ ಕಡಿವಾಣ ಬಿದ್ದಂತಾಗಿದೆ. ಇನ್ನು ನಿತ್ಯ ಬಳಕೆಯ ಅನೇಕ ಅಗತ್ಯ ಸರಕುಗಳ ಬೆಲೆ ಇಳಿಕೆಯಾಗಲಿದ್ದು, ಮಾಲ್, ಶಾಪಿಂಗ್, ಬ್ಯಾಕಿಂಗ್ ನಂತಹ ಕೆಲ ಆರ್ಥಿಕ ಸೇವೆಗಳು ಕೊಂಚ ದುಬಾರಿಯಾಗಲಿವೆ.

## ಸಹಕಾರಿಯು ಬ್ಯಾಂಕಿನಲ್ಲಿ ಇಟ್ಟಿರುವ ಠೇವಣಿಯಿಂದ ಗಳಿಸಿರುವ ಆದಾಯಕ್ಕೆ ಆದಾಯ ತೆರಿಗೆಯ ಕಡಿತವನ್ನು ಪಡೆಯಲು ಅರ್ಹವಾಗಿರುತ್ತದೆ : ಆದಾಯ ತೆರಿಗೆ ಮೇಲ್ಮನವಿ ಪ್ರಾಧಿಕಾರದ ಮಹತ್ವದ ತೀರ್ಪು

ಆದಾಯ ತೆರಿಗೆ ಮೇಲ್ಮನವಿ ಪ್ರಾಧಿಕಾರವು ಸಿದ್ಧಿವಿನಾಯಕ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ ವಿರುದ್ಧ ಆದಾಯ ತೆರಿಗೆ ಅಧಿಕಾರಿ ವಾರ್ಡ್ ಸಂಖ್ಯೆ:01, ಕಲಬುರಗಿ ಇದರ ಪ್ರಕರಣ ಸಂಖ್ಯೆ:ಐಟಿಎ ನಂ.580/ಬಿಎನ್‌ಜಿ/2017 ಪ್ರಕರಣದಲ್ಲಿ ತೀರ್ಪನ್ನು ನೀಡಿದ್ದು, ಈ ತೀರ್ಪಿನಲ್ಲಿ ಸಹಕಾರಿಯು ಬ್ಯಾಂಕಿನಲ್ಲಿ ಇಟ್ಟಿರುವ ಠೇವಣಿಗೆ ಗಳಿಸುವ ಬಡ್ಡಿಯು ಸಹಕಾರಿಯು ತನ್ನ ಸದಸ್ಯರೊಂದಿಗೆ ನಡೆಸಿರುವ ವ್ಯವಹಾರದಿಂದ ಗಳಿಸಿರುವ ಆದಾಯವಾಗಿರುವುದರಿಂದ ಆದಾಯ ತೆರಿಗೆಯಿಂದ ಕಡಿತವನ್ನು ಪಡೆಯಲು ಅರ್ಹವಾಗಿರುತ್ತದೆ ಎಂದು ತಿಳಿಸಿ ಮೇಲ್ಮನವಿಯನ್ನು ಪುರಸ್ಕರಿಸಿರುತ್ತದೆ. ಈಗಾಗಲೇ ಇಂತಹ ಹಲವಾರು ಪ್ರಕರಣಗಳು ಹಲವು ಸೌಹಾರ್ದ ಸಹಕಾರಿಗಳ ವಿರುದ್ಧ ರಾಜ್ಯಾದ್ಯಾಂತ ದಾಖಲಾಗಿದ್ದು, ಅಂತಹ ಸಹಕಾರಿಗಳು ಈ ಪ್ರಕರಣವನ್ನು ಪೂರ್ವ ನಿರ್ಧರಿತ ಪ್ರಕರಣವಾಗಿ ಪರಿಗಣಿಸಬಹುದಾಗಿರುತ್ತದೆ.

## ಇ-ಸ್ಟ್ಯಾಂಪಿಂಗ್ ಎಸಿಸಿಗಳೇ ಎಚ್ಚರ

ಎಲ್ಲಾ ಇ–ಸ್ಟ್ಯಾಂಪಿಂಗ್ ಎಸಿಸಿ ಕೇಂದ್ರಗಳು ಇ–ಸ್ಟ್ಯಾಂಪಿಂಗ್ ಪೇಪರನ್ನು ಮುದ್ರಿಸುವಾಗ ಮೊದಲ ಮತ್ತು ಎರಡನೇ ಪಕ್ಷಗಾರರ ವಿವರಗಳನ್ನು ಗ್ರಾಹಕರ ಅರ್ಜಿಯಲ್ಲಿ ಕಡ್ಡಾಯವಾಗಿ ನಮೂದಿಸಬೇಕು. ಆದರೆ, ಕೆಲವು ಎಸಿಸಿಗಳು ಎ ಬಿ ಸಿ ಡಿ ಮತ್ತು ಇತರೇ ಆಂಗ್ಲ ಅಕ್ಷರಗಳನ್ನು ಮೊದಲ ಮತ್ತು ಎರಡನೇ ಪಕ್ಷಗಾರನ ಸ್ಥಳದಲ್ಲಿ ನಮೂದಿಸಿ, ಅವುಗಳನ್ನು ತಿದ್ದುಪಡಿ ಮಾಡಿ, ಬೇರೆ ಹೆಸರಿಗೆ ನೀಡಿರುತ್ತಾರೆ. ಈ ರೀತಿಯ ಪ್ರಕರಣಗಳು ಮಾನ್ಯ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಯವರು ಮತ್ತು ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರ ಕಛೇರಿಯ ಗಮನಕ್ಕೂ ಬಂದಿರುತ್ತದೆ. ಈ ಕುರಿತಾಗಿ ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರ ಕಛೇರಿಯು ಈ ರೀತಿ ಇ–ಸ್ಟ್ಯಾಂಪ್ ಪೇಪರ್ ವಿತರಿಸುವ ಎಸಿಸಿಯವರ ವಿರುದ್ಧ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿ, ಕಾನೂನು ಕ್ರಮ ಕೈಗೊಳ್ಳಲು ಮತ್ತು ಕರ್ನಾಟಕ ಸ್ಟ್ಯಾಂಪ್ ಅಧಿನಿಯಮ,1957ರ ಪ್ರಕಾರ ನಿಮ್ಮ ಎಸಿಸಿಗಳ ಅನುಮತಿಯನ್ನು ನೇರವಾಗಿ ರದ್ದುಪಡಿಸಲು ಸೂಚನೆಯನ್ನು ನೀಡಿರುತ್ತಾರೆ.

ಆದ್ದರಿಂದ, ರಾಜ್ಯದ ಎಲ್ಲಾ ಎಸಿಸಿಗಳು ತಾವು ಪೇಪರ್ ವಿತರಿಸುವ ಮುನ್ನ ಗ್ರಾಹಕರ ಅರ್ಜಿಯನ್ನು ಮತ್ತು ವಿವರಗಳನ್ನು ಕಡ್ಡಾಯವಾಗಿ ಪಡೆದುಕೊಳ್ಳಬೇಕು ಹಾಗೂ ಸಂಯುಕ್ತ ಸಹಕಾರಿಯು ತಿಳಿಸಿರುವ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಒಂದು ವೇಳೆ ಪಾಲಿಸದ ಸೌಹಾರ್ದ ಸಹಕಾರಿಗಳಿಂದಾಗಿ ಇಡೀ ಸಹಕಾರ ಕ್ಷೇತ್ರಕ್ಕೆ ಈ ಒಂದು ಇ-ಸ್ಟ್ಯಾಂಪ್ ವ್ಯವಸ್ಥೆ ಕೈಬಿಟ್ಟು ಹೋಗುವ ಸಾಧ್ಯತೆ ಇರುತ್ತದೆ. ಆದ್ದರಿಂದ, ಎ ಬಿ ಸಿ ಡಿ ಮತ್ತು ಇತರೇ ಆಂಗ್ಲ ಅಕ್ಷರಗಳನ್ನು ಮೊದಲ ಮತ್ತು ಎರಡನೇ ಪಕ್ಷಗಾರನ ಸ್ಥಳದಲ್ಲಿ ನಮೂದಿಸಿ ಇ-ಸ್ಟ್ಯಾಂಪ್ ಪೇಪರ್ ಮುದ್ರಿಸುವುದನ್ನು ನಿಷೇಧಿಸಲಾಗಿದೆ. ಈ ವಿಧವಾದ ಯಾವುದೇ ಪ್ರಕರಣಗಳು ತಮ್ಮ ಊರಿನಲ್ಲಿ ಯಾವುದೇ ಇ–ಸ್ಟ್ಯಾಂಪಿಂಗ್ ಕೇಂದ್ರದಿಂದ ಕಂಡುಬಂದರೆ ಸಂಯುಕ್ತ ಸಹಕಾರಿ ಗಮನಕ್ಕೆ ತರಲು ಕೋರಿದೆ. ಅಂತಹ ಕೇಂದ್ರಗಳ ಮೇಲೆ ಕಾನೂನು ಕ್ರಮಗಳನ್ನು ನೇರವಾಗಿ ಕೈಗೊಳ್ಳಲಾಗುವುದು.

**ನೋಡಲ್ ಆಫೀಸರ್**
**ಇ–ಸ್ಟ್ಯಾಂಪಿಂಗ್ ವಿಭಾಗ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.**

## 95ನೇ ಅಂತರರಾಷ್ಟ್ರೀಯ ಸಹಕಾರಿ ದಿನ ಹಾಗೂ ವಿಶ್ವ ಸಂಸ್ಥೆಯ 23ನೇ ಅಂತರ ರಾಷ್ಟ್ರೀಯ ಸಹಕಾರಿಗಳ ದಿನ (95th International Cooperative Day and 23rd United Nations International Day of Cooperatives)

ಸಹಕಾರ ಕ್ಷೇತ್ರದ ಪ್ರಗತಿಯನ್ನು ಹಾಗೂ ಈ ಕ್ಷೇತ್ರದ ಬಗ್ಗೆ ಜಾಗೃತಿಯನ್ನು ಮೂಡಿಸುವ ನಿಟ್ಟಿನಲ್ಲಿ ಸಹಕಾರ ದಿನವನ್ನು ಆಚರಿಸುವ ಉದ್ದೇಶದಿಂದ ಅಂತರ ರಾಷ್ಟ್ರೀಯ ಕೋ ಆಪರೇಟೀವ್ ಅಲೈನ್ಸ್ ಮೂಲಕ 1923ರಿಂದ ಜುಲೈ ಮಾಹೆಯ ಮೊದಲ ಶನಿವಾರವನ್ನು ಅಂತರ ರಾಷ್ಟ್ರೀಯ ಸಹಕಾರ ದಿನವನ್ನಾಗಿ ಆಚರಿಸುತ್ತಾ ಬರಲಾಗುತ್ತಿದೆ. 1992ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ, ವಿಶ್ವ ಸಂಸ್ಥೆಯ ಮೂಲಕ ಕೂಡ ಅಂತರರಾಷ್ಟ್ರೀಯ ಸಹಕಾರ ದಿನವನ್ನು ಆಚರಿಸುವ ಬಗ್ಗೆ ನಿರ್ಣಯಿಸಲಾಗಿದೆ. ಅಂತರರಾಷ್ಟ್ರೀಯ ಕೋ–ಆಪರೇಟಿವ್ ಅಲೈನ್ಸ್ (ಐಸಿಎ) ಇದರ ಸ್ಥಾಪನೆಯ ಶತಮಾನೋತ್ಸವ ವರ್ಷವಾದ 1995 ರಿಂದ ವಿಶ್ವ ಸಂಸ್ಥೆಯು ಅಂತರರಾಷ್ಟ್ರೀಯ ಸಹಕಾರಿಗಳ ದಿನವನ್ನು ಆಚರಿಸಲು ಆರಂಭಿಸಲಾಗಿದೆ. ಅಂದಿನಿಂದ ಐಸಿಎ ಹಾಗೂ ವಿಶ್ವ ಸಂಸ್ಥೆಯ ಅಂತರರಾಷ್ಟ್ರೀಯ ಸಹಕಾರಿಗಳ ದಿನವನ್ನು ಒಟ್ಟಿಗೆ ಜುಲೈ ಮಾಹೆಯ ಮೊದಲ ಶನಿವಾರದಂದು ಆಚರಿಸುತ್ತಾ ಬರಲಾಗಿದೆ.

ಪ್ರಸ್ತುತ 95ನೇ ಅಂತರರಾಷ್ಟ್ರೀಯ ಸಹಕಾರಿ ದಿನ ಹಾಗೂ ವಿಶ್ವ ಸಂಸ್ಥೆಯ 23ನೇ ಅಂತರರಾಷ್ಟ್ರೀಯ ಸಹಕಾರಿಗಳ ದಿನವನ್ನು ಜುಲೈ 01ರಂದು ವಿಶ್ವದಾದ್ಯಂತ ಆಚರಿಸಲಾಗಿದೆ. ಈ ಸಂದರ್ಭದಲ್ಲಿ ಅಂತರರಾಷ್ಟ್ರೀಯ ಕೋ–ಆಪರೇಟಿವ್ ಅಲೈನ್ಸ್ (ಐಸಿಎ) ಮತ್ತು ವಿಶ್ವ ಸಂಸ್ಥೆಗಳು ಸಂದೇಶವನ್ನು ಪ್ರಕಟಿಸಿದ್ದು, "ಸಹಕಾರಿಗಳ ಬಲವರ್ಧನೆಯ ಕುರಿತು ಅರಿವನ್ನು ಹೆಚ್ಚಿಸುವುದು, ರಾಷ್ಟ್ರೀಯ & ಅಂತರರಾಷ್ಟ್ರೀಯ ಮಟ್ಟದಲ್ಲಿ ಸಹಕಾರಿ ಚಳುವಳಿ ಮತ್ತು ಸ್ಥಳೀಯ ಮಟ್ಟದಲ್ಲಿ ಸರ್ಕಾರವನ್ನೊಳಗೊಂಡಂತೆ ಇತರೆ ಮಧ್ಯಸ್ಥಗಾರರೊಂದಿಗೆ ಪಾಲುಗಾರಿಕೆಯನ್ನು ವಿಸ್ತರಿಸುವುದು" ಈ ವರ್ಷದ ಸಹಕಾರ ದಿನದ ಆಶಯವೆಂದು ಹೇಳಲಾಗಿದೆ.

ಸಹಕಾರ ಕ್ಷೇತ್ರದ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಪೂರಕವಾಗಿ ಪ್ರತಿ ವರ್ಷವೂ ಒಂದೊಂದು ಧ್ಯೇಯದೊಂದಿಗೆ ಅಂತರರಾಷ್ಟ್ರೀಯ ಸಹಕಾರಿ ದಿನಾಚರಣೆಯನ್ನು ಆಚರಿಸಲಾಗುತ್ತಿದ್ದು, 2017ರ ಅಂತರರಾಷ್ಟ್ರೀಯ ಸಹಕಾರಿ ದಿನಾಚರಣೆಯ ಧ್ಯೇಯವೆಂದರೆ "ಸಹಕಾರಿಗಳು ಯಾರನ್ನೂ ಹಿಂದುಳಿಯಲು ಬಿಡದಿರುವುದನ್ನು ಖಚಿತಪಡಿಸಿಕೊಳ್ಳುವುದಾಗಿದೆ" (Cooperatives ensure no-one is left behind). ಈ ಧ್ಯೇಯದ ಉದ್ದೇಶವೆಂದರೆ ಪ್ರಪಂಚದಾದ್ಯಂತ ಪ್ರತಿಬಿಂಬಿಸುತ್ತಿರುವ ವಿಪತ್ತುಗಳ ಕಾರಣದಿಂದಾಗಿ ಉಂಟಾಗಿರುವ ಅಸಮಾನತೆಯನ್ನು ಹೋಗಲಾಡಿಸಿ, ಸಮುದಾಯಗಳನ್ನು ಲೆಕ್ಕಿಸದೇ ಸ್ಪರ್ಧೆ, ಲಿಂಗ, ಸಂಸ್ಕೃತಿ, ಸಾಮಾಜಿಕ ಹಿನ್ನೆಲೆ ಅಥವಾ ಆರ್ಥಿಕ ಸ್ಥಿತಿಗಳಲ್ಲಿ ಸಹಕಾರಿಗಳ ಮೂಲಕ ಸಮಾನತೆಯನ್ನು ಪುನರ್ ಸ್ಥಾಪಿಸುವುದು ಹಾಗೂ ಪ್ರಪಂಚವನ್ನು ಉತ್ತಮ ಸ್ಥಳವನ್ನಾಗಿಸುವಲ್ಲಿ ಸಹಕಾರಿಗಳ ಕೊಡುಗೆಯನ್ನು ಶ್ಲಾಘಿಸುವುದರೊಂದಿಗೆ ಉತ್ಕೃಷ್ಟಗೊಳಿಸುವುದಾಗಿದೆ.

**– ಮಾಹಿತಿ ಸಂಗ್ರಹ : ದಿವ್ಯ ಟಿ., ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.**

## ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ಬೆಂಗಳೂರಿನಲ್ಲಿ 17ನೇ ತಂಡದ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮ

## ಸೌಹಾರ್ದ ಸಹಕಾರಿ ಕ್ಷೇತ್ರದ ವ್ಯಾಪ್ತಿ ಹಾಗೂ ಬೆಳವಣಿಗೆ ಶ್ಲಾಘನೀಯ – ಶ್ರೀ ಟಿ.ಎಂ. ವಿಜಯ ಭಾಸ್ಕರ



ತರಬೇತಿ ಕಾರ್ಯಕ್ರಮವನ್ನು ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರಾದ ಶ್ರೀ ಟಿ.ಎಂ.ವಿಜಯಭಾಸ್ಕರ ರವರು ಉದ್ಘಾಟಿಸಿದರು.



ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರಾದ ಶ್ರೀ ಟಿ.ಎಂ.ವಿಜಯಭಾಸ್ಕರ ರವರಿಗೆ ಸಂಯುಕ್ತ ಸಹಕಾರಿಯ ವತಿಯಿಂದ ಸನ್ಮಾನ.

**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಬೆಂಗಳೂರಿನ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಸಭಾಂಗಣದಲ್ಲಿ ದಿನಾಂಕ 19 ರಿಂದ 28 ಜೂನ್ 2017ರವರೆಗೆ ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ದಿನಾಂಕ : 19.06.2017ರಂದು ಕಾರ್ಯಕ್ರಮದ ಉದ್ಘಾಟನೆಯನ್ನು ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರಾದ ಶ್ರೀ ಟಿ.ಎಂ.ವಿಜಯಭಾಸ್ಕರ, ಭಾ.ಆ.ಸೇ. ರವರು ಉದ್ಘಾಟಿಸಿ ಮಾತನಾಡುತ್ತಾ ನಾನು ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಕೇಳಿದ್ದೆ. ಇವತ್ತು ಅದರ ಅಧ್ಯಯನವನ್ನು ಮಾಡಬೇಕೆಂದು ಇಲ್ಲಿಗೆ ಬಂದೆ. ಈ ಕ್ಷೇತ್ರದ ವ್ಯಾಪ್ತಿ ಹಾಗೂ ಸಾಧನೆಯನ್ನು ನೋಡಿ ಸಂತೋಷವಾಗಿದೆ. ರಾಜ್ಯದ ಒಟ್ಟು ಮತದಾರರ ಶೇಕಡಾ 1/8ರಷ್ಟು ಜನರು ಈ ಕ್ಷೇತ್ರದ ವ್ಯಾಪ್ತಿಯಲ್ಲಿರುವುದು ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಉಜ್ವಲ ಭವಿಷ್ಯವಿದೆ ಎಂಬುದನ್ನು ರೂಪಿಸುತ್ತದೆ. ಸೌಹಾರ್ದ ಸಹಕಾರಿಗಳ ವಿವಿಧ ರೀತಿಯ ಚಟುವಟಿಕೆಗಳು ಸಹ ಮೆಚ್ಚುವಂತಹದ್ದಾಗಿದೆ. ಸೌಹಾರ್ದ ಸಹಕಾರಿಗಳ ಉತ್ತಮ ಕಾರ್ಯನಿರ್ವಹಣೆಗೆ ಈ ರೀತಿಯ ತರಬೇತಿ ಕಾರ್ಯಕ್ರಮಗಳು ನೆರವಾಗುತ್ತವೆ. ಇಂತಹ ತರಬೇತಿ ಕಾರ್ಯಕ್ರಮಗಳನ್ನು ನಿರಂತರವಾಗಿ ಮತ್ತು ಉತ್ತಮವಾಗಿ ಹಮ್ಮಿಕೊಳ್ಳುತ್ತಿರುವ ಸಂಯುಕ್ತ ಸಹಕಾರಿಯವರನ್ನು ಅಭಿನಂದಿಸುತ್ತೇನೆ ಎಂದು ತಿಳಿಸಿದರು.

## ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆ ತೃಪ್ತಿಕರ – ಶ್ರೀ ಎ.ಸಿ.ದಿವಾಕರ್

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಅಪರ ನಿಬಂಧಕರು ಹಾಗೂ ಕ್ಯಾಸ್‌ಕಾರ್ಡ್ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಎ.ಸಿ.ದಿವಾಕರ್ ರವರು ಮಾತನಾಡಿ ರಾಜ್ಯದ ಸಹಕಾರ ಕ್ಷೇತ್ರಕ್ಕೆ ಈ ಸೌಹಾರ್ದ ಸಹಕಾರಿ ಕ್ಷೇತ್ರ ಒಂದು ಹೊಸ ದಿಕ್ಸೂಚಿಯನ್ನು ತೋರಿಸಿದೆ. ಸಾಂಪ್ರಾದಾಯಿಕತೆಯಿಂದ ಹೊರಬಂದು ವೈವಿಧ್ಯಮಯ ಚಟುವಟಿಕೆಗಳನ್ನು ಹಮ್ಮಿಕೊಂಡು ಸದಸ್ಯರ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುವಂತೆ ಪ್ರೇರೇಪಿಸಿದೆ. ರಾಜ್ಯದ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆ ತೃಪ್ತಿಕರವಾಗಿದೆ ಎಂದು ತಿಳಿಸಿದರು.

## ಸಹಕಾರಿ ಕಾನೂನು ಅಭಿವೃದ್ಧಿಗೆ ಪೂರಕವಾಗಿರಬೇಕು - ಶ್ರೀ ಅರುಣ ಶಹಾಪೂರ



ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಧಾನ ಪರಿಷತ್ ಸದಸ್ಯರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಅರುಣ ಶಹಾಪೂರರವರು ವಹಿಸಿ, ಮಾತನಾಡುತ್ತಾ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿ ಸಂತೋಷದಾಯಕವಾಗಿದೆ. ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳು ಹಳೆಯ ಸಾಂಪ್ರದಾಯಿಕ ಸಹಕಾರಿ ಸಂಸ್ಥೆಗಳಿಗಿಂತ ವಿಭಿನ್ನವಾಗಿವೆ. ರಾಷ್ಟ್ರ ಹಾಗೂ ರಾಜ್ಯಮಟ್ಟದಲ್ಲಿ ಈ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ತೃಪ್ತಿ ಇದೆ. ಆದರೆ, ಸೌಹಾರ್ದ ಸಹಕಾರಿ ಕಾನೂನು ನಿಯಮಗಳ ಇತ್ತೀಚಿನ ತಿದ್ದುಪಡಿಗಳು ಸೌಹಾರ್ದ ಸಹಕಾರಿ ಕಾನೂನಿನ ಆಶಯಕ್ಕೆ ವ್ಯತಿರಿಕ್ತವಾಗಿವೆ. ತಪ್ಪು ಮಾಡುವ ಸೌಹಾರ್ದ ಸಹಕಾರಿಗಳ ಮೇಲೆ ನಿರ್ದಾಕ್ಷಿಣ್ಯ ಕಾನೂನು ಕ್ರಮ ಜರುಗಿಸಲು ಯಾರದು ಅಭ್ಯಂತರವಿಲ್ಲ. ಆದರೆ, ಒಬ್ಬರು ಮಾಡಿರುವ ತಪ್ಪಿಗೆ ಇಡೀ ಸೌಹಾರ್ದ ಸಹಕಾರಿ ಕ್ಷೇತ್ರವನ್ನು ದಂಡಿಸುವುದು ತಪ್ಪು. ಇದರ ಬಗ್ಗೆ ಸರಕಾರ ಗಮನ ಹರಿಸಬೇಕು ಎಂದು ಒತ್ತಾಯಿಸಿದರು.

ಮುಖ್ಯ ಅತಿಥಿಯಾಗಿ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಡಾ. ಕಿಶೋರರವರು ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಸ್ವಾಗತ ಹಾಗೂ ಪ್ರಾಸ್ತಾವಿಕ ಭಾಷಣ ಮಾಡಿದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಅಧಿಕಾರಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ರಾಜ್ಯದ 19 ಜಿಲ್ಲೆಗಳ 62 ಸೌಹಾರ್ದ ಸಹಕಾರಿಗಳಿಂದ 76 ಸಿಬ್ಬಂದಿಯವರು ಭಾಗವಹಿಸಿದ್ದರು.

## ಸಂಯುಕ್ತ ಸಹಕಾರಿಯಿಂದ ಅಂತರಾಷ್ಟ್ರೀಯ ಯೋಗ ದಿನಾಚರಣೆ





**ಬೆಂಗಳೂರು :** ಸಂಯುಕ್ತ ಸಹಕಾರಿಯ ವತಿಯಿಂದ ದಿನಾಂಕ 21 ಜೂನ್ 2017ರಂದು ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಆವರಣದಲ್ಲಿ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಆರ್‌ಐಸಿಎಂನ ಪ್ರಾದೇಶಿಕ ನಿರ್ದೇಶಕರಾದ ಶ್ರೀ ವಸಂತ ನಾಯಕ್, ಕೆಐಸಿಎಂನ ಪ್ರಾಂಶುಪಾಲರಾದ ಶ್ರೀ ಶಿವಕುಮಾರ್ ಮತ್ತು 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿಯ ಶಿಬಿರಾರ್ಥಿಗಳು, ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಹಾಗೂ ಸಂಯುಕ್ತ ಸಹಕಾರಿಯ ಅಧಿಕಾರಿಗಳು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಡಾ. ಹರೀಶ್‌ರವರು ನಡೆಸಿಕೊಟ್ಟರು.

## 10 ದಿನಗಳ ವ್ಯಕ್ತಿತ್ವ ವಿಕಸನದ ಚಟುವಟಿಕೆಗಳು – ವಿಷಯಗಳು ಹಾಗೂ ಉಪನ್ಯಾಸಗಳು

**ತರಬೇತಿ ಕಾರ್ಯಕ್ರಮ :** ತರಬೇತಿಯಲ್ಲಿ 25 ವಿಷಯಗಳನ್ನು ಅಳವಡಿಸಲಾಗಿತ್ತು. ಸಂಯುಕ್ತ ಸಹಕಾರಿಯ 10 ಅಧಿಕಾರಿಗಳು ಹಾಗೂ 5 ಸಹಕಾರಿ ತಜ್ಞರುಗಳು ಮತ್ತು 5 ಬ್ಯಾಂಕಿಂಗ್ ಕ್ಷೇತ್ರದ ಅನುಭವವಿರುವ ಕಾರ್ಪೋರೇಟ್ ತರಬೇತಿದಾರರು ಭಾಗವಹಿಸಿ, ತರಬೇತಿ ನೀಡಿದರು.

**ಪ್ರಾಯೋಗಿಕಗಳು :**

1. ವಿವಿಧ ತಂಡಗಳನ್ನು ರಚಿಸಿ, ಪ್ರತಿನಿತ್ಯದ ಕಾರ್ಯಕ್ರಮಗಳ ನಿರ್ವಹಣೆ ಮಾಡುವುದು, ಪ್ರಾರ್ಥನೆ, ದಿನದ ಸುವಿಚಾರ ಹೇಳಿಸುವುದು, ಹಿಂದಿನ ದಿನದ ತರಬೇತಿ ಕಾರ್ಯಕ್ರಮದ ಸಾರಾಂಶ ಮಿಲಿ ಹೇಳುವುದು, ಪ್ರತಿದಿನದ ವರದಿಗಳನ್ನು ಪ್ರತಿ ತಂಡದವರು ಸಾಮೂಹಿಕವಾಗಿ ಕುಳಿತು ಸಿದ್ಧಪಡಿಸಿ ಸಲ್ಲಿಸುವುದು.
2. ಸಭೆಗಳನ್ನು ನಡೆಸುವುದು, ಆಡಳಿತ ಮಂಡಲಿ ಸಭೆಯ ನೋಟೀಸು ಸಿದ್ಧಪಡಿಸುವುದು, ನಡವಳಿಕೆಗಳನ್ನು ಬರೆಯುವುದು, ವಾರ್ಷಿಕ ಸಾಮಾನ್ಯ ಸಭೆಯ ನೋಟೀಸು ಸಿದ್ಧಪಡಿಸುವುದು.
3. ಕ್ರಿಯಾ ಯೋಜನೆ ಸಿದ್ಧಪಡಿಸುವುದು.
4. ಲಾಭ-ನಷ್ಟ ತಃಖ್ತೆ, ವ್ಯಾಪಾರಿ ತಃಖ್ತೆ ಹಾಗೂ ಆಸ್ತಿ-ಜವಾಬ್ದಾರಿ ತಃಖ್ತೆಗಳನ್ನು ಸಿದ್ಧಪಡಿಸುವುದು.
5. ಸಾಲ ವಸೂಲಾತಿ, ದಾವಾ ದಾಖಲಾತಿಗಳ ನಿರ್ವಹಣೆ.
6. ಶಕ್ತಿ, ಸಾಮರ್ಥ್ಯ, ದೌರ್ಬಲ್ಯಗಳು, ಅವಕಾಶಗಳು ಹಾಗೂ ಸವಾಲುಗಳ ನಿರ್ವಹಣೆಯ ಪ್ರಾಯೋಗಿಕಗಳನ್ನು ನಡೆಸಲಾಯಿತು. ಎಲ್ಲಾ ಪ್ರಾಯೋಗಿಕಗಳಲ್ಲಿ ಶಿಬಿರಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿ, ಮಾಹಿತಿ ಪಡೆಯುವಂತೆ ಮಾಡಲಾಯಿತು.

## ಯಶಸ್ವಿ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳ ಜೊತೆಗೆ ಸಂವಾದ

ರಾಜ್ಯದಲ್ಲಿ ವಿಶಿಷ್ಟ ರೀತಿಯ ಕಾರ್ಯನಿರ್ವಹಿಸುತ್ತಿರುವ ಕದಂಬ ಮಾರ್ಕೆಟಿಂಗ್ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಶಂಭುಲಿಂಗ ಹೆಗಡೆ, ಚನ್ನಪಟ್ಟಣದ ಧಾನ್ವಿ ಕರಕುಶಲ ಸೌಹಾರ್ದ ಸಹಕಾರಿಯ ಶ್ರೀ ಕೆಂಚಯ್ಯ ಹಾಗೂ ಶ್ರೀ ರಮೇಶ, ಶಿವಶ್ರೀ ಸೌಹಾರ್ದ ಪತ್ತಿನ ಸಹಕಾರಿಯ ಶ್ರೀ ಮಲ್ಲಿಕಾರ್ಜುನ, ಯಶಸ್ವಿನಿ ಮಹಿಳಾ ಸೌಹಾರ್ದ ಕ್ರೆಡಿಟ್ ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಬಿ.ಎನ್.ನಾಗಮಣಿ ಹಾಗೂ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಎ.ವಿ.ಎಲ್. ರಾವ್, ಹಿರೇಕೆರೂರಿನ ತಾಲೂಕು ವಿದ್ಯಾವರ್ಧಕ ಸೌಹಾರ್ದ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಕೋರಿಗೌಡ್ರ ಇವರುಗಳೆಲ್ಲ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ, ತಮ್ಮ ಸೌಹಾರ್ದ ಸಹಕಾರಿಗಳ ಪ್ರಾರಂಭದಿಂದ ಇಲ್ಲಿಯವರೆಗಿನ ಚಟುವಟಿಕೆಗಳ ಬಗ್ಗೆ ಶಿಬಿರಾರ್ಥಿಗಳಿಗೆ ಮಾಹಿತಿ ನೀಡಿದರು ಮತ್ತು ಶಿಬಿರಾರ್ಥಿಗಳ ಜೊತೆಗೆ ಪ್ರಶ್ನೋತ್ತರಗಳಿಗೆ ಸ್ಪಂದಿಸಿದರು.



ಯಶಸ್ವಿ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರೊಂದಿಗೆ ಸಂವಾದ

## ತರಬೇತಿಯೇತರ ಚಟುವಟಿಕೆಗಳು :

ಶಿಬಿರಾರ್ಥಿಗಳ ಪ್ರತಿದಿನದ ಆಹಾರ ಸೇವನೆಯ ವಿಧಾನಗಳ ಬಗ್ಗೆ ಉಪನ್ಯಾಸವನ್ನು ಶ್ರೀ ಬಿ.ಹೆಚ್. ಪ್ರಕಾಶರೆಡ್ಡಿಯವರು ನೆರವೇರಿಸಿಕೊಟ್ಟರು. ಸಹಕಾರಿ ಸಂಸ್ಥೆಗಳು ಮಾಧ್ಯಮದವರೊಡನೆ ಹೇಗೆ ಸಂಬಂಧಗಳನ್ನು ನಿರ್ವಹಿಸಬೇಕು ಎಂಬ ವಿಷಯದ ಬಗ್ಗೆ ಶ್ರೀ ಶಾಂತಾರಾಮರವರು ಚರ್ಚೆ ಮೂಲಕ ವಿಷಯಗಳನ್ನು ತಿಳಿಸಿದರು.

ದಿನಾಂಕ 21.06.2017ರಂದು ಅಂತರರಾಷ್ಟ್ರೀಯ ಯೋಗ ದಿನಾಚರಣೆ ಹಾಗೂ ಪರಿಸರ ಪ್ರಜ್ಞೆ ಮತ್ತು ಸ್ವಚ್ಛ ಭಾರತ ಕಾರ್ಯಕ್ರಮಗಳ ಬಗ್ಗೆ ತಿಳುವಳಿಕೆ ನೀಡಲಾಯಿತು. ದಿನಾಂಕ 26.06.2017ರಂದು ರಾತ್ರಿ 8.30ಕ್ಕೆ ಶಿಬಿರಾರ್ಥಿಗಳೆಲ್ಲಾ ಸೇರಿ ಮೌನ ಭೋಜನ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಈ ಕಾರ್ಯಕ್ರಮದ ಚಾಲನೆಯನ್ನು ಆರ್‌ಐಸಿಎಂನ ನಿರ್ದೇಶಕರಾದ ಶ್ರೀ ವಸಂತ ನಾಯಕರವರು ನೀಡಿದರು. ಕನ್ನಡ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ ಇತ್ಯಾದಿಗಳ ಬಗ್ಗೆ ಕ್ವಿಜ್ ಕಾರ್ಯಕ್ರಮವನ್ನು ಶ್ರೀ ಬಿ.ಎಸ್.ಚಂದ್ರಶೇಖರ್‌ರವರು ನಡೆಸಿಕೊಟ್ಟರು.

**ಆರೋಗ್ಯ ತಪಾಸಣೆ :** ಶಿಬಿರಾರ್ಥಿಗಳ ಆರೋಗ್ಯ ತಪಾಸಣೆಯನ್ನು ಸ್ಫೂರ್ತಿ ಆಸ್ಪತ್ರೆಯ ಡಾ. ಬಿ.ಹೆಚ್. ಪ್ರಕಾಶ್ ರೆಡ್ಡಿ, ಡಾ. ಶೈಲಜಾ, ಡಾ. ಅಶೋಕ ಹಾಗೂ ಡಾ. ಆನಂದ ಮತ್ತು ಅವರ ಸಹಾಯಕರುಗಳು ನೆರವೇರಿಸಿಕೊಟ್ಟರು.

**ಸಾಂಸ್ಕೃತಿಕ ಕಾರ್ಯಕ್ರಮ :** ತರಬೇತಿ ಅವಧಿಯಲ್ಲಿ ಶಿಬಿರಾರ್ಥಿಗಳಿಗಾಗಿ ಕುಮಾರಿ ಪೂರ್ಣಿಮಾರವರಿಂದ ಭರತನಾಟ್ಯ, ಶ್ರೀಮತಿ ಶಾಂತಲಾ ತಂಡದವರಿಂದ ಸುಗಮ ಸಂಗೀತ, ಶ್ರೀ ಅಮ್ಮ ರಾಮಚಂದ್ರರವರಿಂದ ಜಾನಪದ ಗೀತೆಗಳ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಸೌಹಾರ್ದ ಸಹಕಾರಿ ಚಟುವಟಿಕೆಗಳ ಕುರಿತು ಒಂದು ಪ್ರಹಸನವನ್ನು ಸ್ವಾಮಿ ವಿವೇಕಾನಂದ ತಂಡದವರು ನೆರವೇರಿಸಿಕೊಟ್ಟರು.

**ಯೋಗ ಕಾರ್ಯಕ್ರಮ :** ಶಿಬಿರಾರ್ಥಿಗಳಲ್ಲಿ ಆರೋಗ್ಯದ ಬಗ್ಗೆ ಅರಿವು ಮೂಡಿಸುವುದಕ್ಕಾಗಿ ಮತ್ತು ಅವರುಗಳು ನಿರಂತರ ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸುವಂತೆ ಪೂರಕವಾಗಲು ಪ್ರತಿದಿನ ಬೆಳಗ್ಗೆ 6.00 ರಿಂದ 7.00ರವರೆಗೆ ಯೋಗ ತರಬೇತಿಯ ವ್ಯವಸ್ಥೆ ಮಾಡಲಾಗಿತ್ತು. ಈ ಕಾರ್ಯಕ್ರಮವನ್ನು ಡಾ. ಹರೀಶರವರು ನಡೆಸಿಕೊಟ್ಟರು.

### ಬೆಂಗಳೂರಿನ ಶುಶ್ರುತಿ ಸೌಹಾರ್ದ ಸಹಕಾರಿ ಬ್ಯಾಂಕಿಗೆ ಭೇಟಿ

ಶಿಬಿರಾರ್ಥಿಗಳಿಗೆ ಉತ್ತಮ ಸೌಹಾರ್ದ ಸಹಕಾರಿಗಳನ್ನು ಪರಿಚಯಿಸುವ ದೃಷ್ಟಿಯಿಂದ ದಿನಾಂಕ 27.06.2017ರಂದು ಬೆಂಗಳೂರಿನ ಶುಶ್ರುತಿ ಸೌಹಾರ್ದ ಸಹಕಾರಿ ಬ್ಯಾಂಕಿಗೆ ಭೇಟಿ ನೀಡಲಾಯಿತು. ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಶ್ರೀನಿವಾಸಮೂರ್ತಿ ಯವರು ಬ್ಯಾಂಕಿನ ಕಾರ್ಯ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು. ಬ್ಯಾಂಕಿನ ಆಡಳಿತ ಮಂಡಲಿ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದು, ವಿವರ ನೀಡಿದರು.

### ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಭೇಟಿ

ನಂತರದಲ್ಲಿ ಶಿಬಿರಾರ್ಥಿಗಳು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಭೇಟಿ ನೀಡಿದರು. ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ವಿವರ ನೀಡಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಅಧಿಕಾರಿಗಳು ಉಪಸ್ಥಿತರಿದ್ದರು. ನಂತರದಲ್ಲಿ ಶಿಬಿರಾರ್ಥಿಗಳು ಇಸ್ಕಾನ್ ದೇವಸ್ಥಾನ ಹಾಗೂ ಮಾರ್ಕೆಟಿಂಗ್ ಸ್ಥಳಗಳಿಗೆ ಭೇಟಿ ನೀಡಿದರು.



ಅಧ್ಯಯನ ಪ್ರವಾಸ

**ರೈತ ಸೇವಾ ಸಹಕಾರಿ ಸಂಘಕ್ಕೆ ಭೇಟಿ :** ಹೆಸರುಘಟ್ಟದಲ್ಲಿರುವ ರೈತ ಸೇವಾ ಸಹಕಾರಿ ಸಂಘಕ್ಕೆ ಭೇಟಿ ನೀಡಿದಾಗ ಸಹಕಾರಿ ಸಂಘದ ಕಾರ್ಯದರ್ಶಿಗಳಾದ ಶ್ರೀ ಶ್ರೀನಿವಾಸಮೂರ್ತಿ ಹಾಗೂ ನಿರ್ದೇಶಕರುಗಳಾದ ಶ್ರೀ ಹೆಚ್.ಎನ್. ನಾಗರಾಜು, ಶ್ರೀ ಟಿ.ಆರ್.ನಾಗರಾಜು, ಶ್ರೀ ಚಂದ್ರಪ್ಪ, ಶ್ರೀಮತಿ ವನಜಾಕ್ಷಮ್ಮ ಮತ್ತು ಸಿಬ್ಬಂದಿಯವರಾದ ಶ್ರೀ ಶ್ರೀನಿವಾಸಯ್ಯ ಮುಂತಾದವರು ಉಪಸ್ಥಿತರಿದ್ದು, ಮಾಹಿತಿ ನೀಡಿದರು.

ಹೆಸರಘಟ್ಟ ಹಾಲು ಉತ್ಪಾದಕರ ಸಹಕಾರಿ ಸಂಘಕ್ಕೆ ಭೇಟಿ ನೀಡಿದಾಗ ಸಂಘದ ಅಧ್ಯಕ್ಷರಾದ ಶ್ರೀ ಗಂಗಾಧರ ಕಾರ್ಯದರ್ಶಿಗಳಾದ ಶ್ರೀ ದೇವರಾಜ, ನಿರ್ದೇಶಕರಾದ ಶ್ರೀಮತಿ ವನಜಾಕ್ಷಮ್ಮ ಮುಂತಾದವರು ಉಪಸ್ಥಿತರಿದ್ದರು. ಸಹಕಾರಿಯ ಕಾರ್ಯಚಟುವಟಿಕೆಗಳ ಅಧ್ಯಯನ ಮಾಡಲಾಯಿತು.

### ಯಶಸ್ವಿನಿ ಮಹಿಳಾ ಸೌಹಾರ್ದ ಕ್ರೆಡಿಟ್ ಸಹಕಾರಿಗೆ ಭೇಟಿ

ಯಶಸ್ವಿನಿ ಮಹಿಳಾ ಸೌಹಾರ್ದ ಕ್ರೆಡಿಟ್ ಸಹಕಾರಿಗೆ ಭೇಟಿ ನೀಡಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಬಿ.ಎನ್.ನಾಗಮಣಿ, ಆಡಳಿತ ಮಂಡಲಿಯ ಸದಸ್ಯರು ಹಾಗೂ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಎ.ವಿ.ಎಲ್. ರಾವ್‌ರವರು ಉಪಸ್ಥಿತರಿದ್ದು, ಸಹಕಾರಿಯ ಕಾರ್ಯಚಟುವಟಿಕೆಗಳ ವಿವರ ನೀಡಿದರು.



**ಮೌಲ್ಯಮಾಪನ :** ದಿನಾಂಕ 28.06.2017ರಂದು ಶಿಬಿರಾರ್ಥಿಗಳಿಗೆ ನೀಡಿದ ತರಬೇತಿಯ ಮೌಲ್ಯಮಾಪನವನ್ನು ನಡೆಸಲಾಯಿತು. ಶ್ರೀಮತಿ ಲಲಿತಾ, ಸಹಜನ್ಯ ಸೌಹಾರ್ದ ಸಹಕಾರಿ, ಬೆಂಗಳೂರು – ಪ್ರಥಮ, ಶ್ರೀ ಆರ್ ವೀರೇಶ, ವಿಜಯ ಭಾರತ ಸೌಹಾರ್ದ ಸಹಕಾರಿ, ಬಳ್ಳಾರಿ – ದ್ವಿತೀಯ, ಶ್ರೀ ಕೆ.ವಿ.ನಾಗರಾಜ, ಕುಮಟಾ ಅಡಿಕೆ ಮಾರಾಟಗಾರರ ಸೌಹಾರ್ದ ಸಹಕಾರಿ – ತೃತೀಯ ಬಹುಮಾನಗಳನ್ನು ಪಡೆದುಕೊಂಡರು.

## ಸಮಾರೋಪ ಕಾರ್ಯಕ್ರಮ : ತರಬೇತಿ ವಿಭಿನ್ನ ಹಾಗೂ ಉತ್ತಮ ಗುಣಮಟ್ಟದ್ದಾಗಿದೆ – ಶ್ರೀ ಹೆಚ್.ಬಾಲಶೇಖರ



ಸಮಾರೋಪ ಕಾರ್ಯಕ್ರಮದ ಉದ್ಘಾಟನೆ



ಸಮಾರೋಪ ಕಾರ್ಯಕ್ರಮವನ್ನು ದಿನಾಂಕ : 28.06.2017ರಂದು ಏರ್ಪಡಿಸಲಾಗಿತ್ತು. ಶಿಬಿರಾರ್ಥಿಗಳೇ ಈ ಸಮಾರೋಪ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿದ ಶ್ರೀ ಹೆಚ್. ಬಾಲಶೇಖರ್, ಸಹಕಾರಿಗಳ ಜಂಟಿ ನಿಬಂಧಕರು, ಕಾನೂನು ಕೋಶ ಇವರು ಇದೊಂದು ಉತ್ತಮ ಗುಣಮಟ್ಟದ ತರಬೇತಿಯಾಗಿದೆ. ತರಬೇತಿಯಲ್ಲಿ ಎಲ್ಲಾ ಶಿಬಿರಾರ್ಥಿಗಳ ಭಾಗವಹಿಸುವಿಕೆ ಶ್ಲಾಘನೀಯ.

ಇಂತಹ ಸಂಭ್ರಮದ ವಾತಾವರಣ ಬೇರೆ ತರಬೇತಿ ಕಾರ್ಯಕ್ರಮಗಳಲ್ಲಿ ಕಾಣಸಿಗುವುದಿಲ್ಲ. ಸಂಯುಕ್ತ ಸಹಕಾರಿಯವರು ಒಳ್ಳೆಯ ತರಬೇತಿಗಳನ್ನು ನಡೆಸುತ್ತಾರೆ ಎಂದು ತಿಳಿಸುತ್ತಾ ಸೌಹಾರ್ದ ಸಹಕಾರಿಗಳ ಕರ್ತವ್ಯ ಹಾಗೂ ಜವಾಬ್ದಾರಿಗಳ ಬಗ್ಗೆ ಒತ್ತು ಕೊಟ್ಟು ಮಾತನಾಡಿದರು. ವಿಶೇಷವಾಗಿ ಕಾರ್ಯದರ್ಶಿಯವರು ಹಾಗೂ ಸಿಬ್ಬಂದಿಯವರು ದಕ್ಷತೆಯಿಂದ ಹಾಗೂ ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸಿದರೆ ಮಾತ್ರ ಸಹಕಾರ ಕ್ಷೇತ್ರ ಬೆಳೆಯಲು ಸಾಧ್ಯವೆಂದು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಹೆಚ್.ಸಿ.ನಾಗರತ್ನರವರು ಭಾಗವಹಿಸಿ, ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ, ಶುಭ ಕೋರಿದರು. ಕೆಐಸಿಎಂನ ಪ್ರಾಂಶುಪಾಲರಾದ ಶ್ರೀ ಎನ್.ಎಂ.ಶಿವಕುಮಾರ್‌ರವರು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದರು.

## ತರಬೇತಿ ಕಾರ್ಯಕ್ಷಮತೆ ಹೆಚ್ಚಿಸುತ್ತದೆ – ಶ್ರೀ ಹೆಚ್.ವಿ.ರಾಜೀವ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಮಾತನಾಡಿದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವರವರು ಸಂಯುಕ್ತ ಸಹಕಾರಿ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ವಿವಿಧ ರೀತಿಯ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಲಿದೆ. ಅದರಲ್ಲೂ ವಿಶೇಷವಾಗಿ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿಗಳನ್ನು ಪ್ರತಿ 6 ತಿಂಗಳಿಗೆ ಒಂದು ಬಾರಿಯಂತೆ ಕಳೆದ 9 ವರ್ಷಗಳಿಂದ ರಾಜ್ಯದ ವಿವಿಧ ಉತ್ತಮ ಸ್ಥಳಗಳನ್ನು ಆಯ್ಕೆ ಮಾಡಿ, ಅಲ್ಲಿ ತರಬೇತಿಗಳನ್ನು ನೀಡಲಾಗುತ್ತಿದೆ. ಇದೊಂದು ಉತ್ತಮ ತರಬೇತಿ ಕಾರ್ಯಕ್ರಮ. ಇದು 17ನೇ ತಂಡವಾಗಿದೆ. ಈ ತಂಡ ಅತ್ಯಂತ ಕ್ರಿಯಾಶೀಲವಾಗಿರುವುದು ಸಂತೋಷದ ವಿಷಯ. ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಸಿಬ್ಬಂದಿಯವರ ಕಾರ್ಯಕ್ಷಮತೆ ಹೆಚ್ಚುತ್ತದೆ ಎಂದು ತಿಳಿಸಿದರು.

ಮುಂದುವರೆದು ಮಾತನಾಡಿದ ಶ್ರೀಯುತರು ಸೌಹಾರ್ದ ಸಹಕಾರಿ ಕಾಯ್ದೆಯಡಿ ಸಹಕಾರಿ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಎಲ್ಲೋ ಒಂದೆರಡು ಸಹಕಾರಿಗಳು ವಿಫಲವಾಗಿವೆ. ಸದಸ್ಯರಿಗೆ ವಂಚನೆ ಮಾಡಿವೆ. ನಿರೀಕ್ಷಿಸಿದಂತೆ ಕಾರ್ಯನಿರ್ವಹಿಸುತ್ತಿಲ್ಲ.

ಅವುಗಳನ್ನು ದಂಡಿಸಬೇಕು. ಆದರೆ, ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿ ಸಂಸ್ಥೆಗಳಿಗೆ ಪ್ರೋತ್ಸಾಹಿಸು ವಂತಹ ಕಾರ್ಯ ಸರಕಾರದಿಂದ ಆಗಬೇಕು. ಕಡಿಮೆ ಕಾರ್ಯವ್ಯಾಪ್ತಿಯ ಸಹಕಾರಿ ಸಂಸ್ಥೆಗಳು ಸದಸ್ಯರಿಗೆ ಮೋಸ ಮಾಡಲು ಸಾಧ್ಯವಾಗುವುದಿಲ್ಲ. ರಾಜ್ಯ ವ್ಯಾಪ್ತಿ ಪಡೆದಿರುವ ಸಹಕಾರಿ ಸಂಸ್ಥೆಗಳಿಂದಲೇ ಈ ಮೋಸದ ಕಾರ್ಯ ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತಿದೆ. ಸಹಕಾರಿಗಳ ನೋಂದಣಿ ಹಂತದಲ್ಲಿಯೇ ಸಹಕಾರಿಗಳ ಕಾರ್ಯವ್ಯಾಪ್ತಿಯನ್ನು, ಕಾರ್ಯಚಟುವಟಿಕೆಗಳ ಪರಿಶೀಲನೆ ನಡೆಸಬೇಕು, ಕ್ರಮವಿಡಬೇಕು ಎಂದು ತಿಳಿಸಿದರು. ಕಾರ್ಯಕ್ರಮದ ಶಿಬಿರಾರ್ಥಿಗಳು ತಮ್ಮ ಅನಿಸಿಕೆಗಳನ್ನು ತಿಳಿಸಿದರು. ಕಾರ್ಯಕ್ರಮದ ವರದಿಯನ್ನು ಬೆಂಗಳೂರು ವಿಭಾಗೀಯ ಅಧಿಕಾರಿಯಾದ ಶ್ರೀ ಸೂರ್ಯಕಾಂತ ರ‍್ಯಾಕಲೆರವರು ಓದಿದರು.

## ಶಿಬಿರಾರ್ಥಿಗಳ ಆಯ್ದ ಅನಿಸಿಕೆಗಳು

- **ಶ್ರೀ ವೀರೇಶ್ ವಿ. ವೋರಾಸ್** – ನಮ್ಮ ವ್ಯಕ್ತಿತ್ವ ವಿಕಸನದ ಜೊತೆಗೆ ನಮ್ಮ ಸೌಹಾರ್ದ ಸಹಕಾರಿಗಳ ಸರ್ವಾಂಗೀಣ ವಿಕಸನಕ್ಕೆ ಭದ್ರ ಬುನಾದಿ ಹಾಕಿ ಕೊಟ್ಟಿದೆ ಮಾತ್ರವಲ್ಲ ನಮ್ಮ ಸೌಹಾರ್ದ ಸಹಕಾರಿಗಳನ್ನು ಉತ್ತುಂಗಕ್ಕೆ ಕೊಂಡೊಯ್ಯುವ ಬಹು ದೊಡ್ಡ ಕನಸನ್ನು ಬಿತ್ತುವುದರಲ್ಲಿ ಯಶಸ್ವಿಯಾಗಿದೆ.
- **ಶ್ರೀ ಮಲ್ಲಿಕಾರ್ಜುನ್ ಜಗದೇವ** – ಈ ಶಿಬಿರವು ಶಿಬಿರಾರ್ಥಿಗಳಿಗೆ ತಮ್ಮ ಆಂತರಿಕವಾಗಿ ಸೌಹಾರ್ದದಲ್ಲಿ ಕೆಲಸ ಮಾಡಲು ಸ್ಫೂರ್ತಿ ನೀಡಿದೆ.
- **ಕು|| ಉಷ ಡಿ.** – ವ್ಯಕ್ತಿತ್ವ ವಿಕಸನ ತರಬೇತಿಯು ಅತ್ಯುತ್ತಮವಾಗಿತ್ತು.
- **ಶ್ರೀಮತಿ ಅನಿತಾ ಸ. ಚೌಗಲೆ** – ಸಹಕಾರದ ಅಂಧಕಾರವನ್ನು ಓಡಿಸಿ, ಜ್ಞಾನದ ಜ್ಯೋತಿಯ ಕಡೆಗೆ ಕರೆದೊಯ್ಯುವ ತರಬೇತಿ.
- **ಶ್ರೀ ಶಂಕ್ರಪ್ಪ ಮೇಟಿ** – ಪ್ರವೀಣತೆ ಪಡೆದುಕೊಳ್ಳುವ ಎಲ್ಲಾ ವಿಷಯಗಳನ್ನು ಒಂದೇ ಸ್ಥಳದಲ್ಲಿ ಒದಗಿಸುವ ಉತ್ತಮ ವ್ಯವಸ್ಥೆ.
- **ಶ್ರೀ ಸಾಕ್ಕಮ್ಮ ಕೆ.ವಿ.** – ಮುಖ್ಯಕಾರ್ಯನಿರ್ವಾಹಕರ ಜವಾಬ್ದಾರಿಗಳನ್ನು ತಿಳಿದುಕೊಂಡೆ.
- **ಶ್ರೀ ತಿಪ್ಪಣ್ಣಾ ರಾ. ಬೆಳವಿ** – ನನ್ನ ಜೀವನದ ಮಹತ್ವದ ತಿರುವು “ಅತ್ಯುತ್ತಮ ವಿಚಾರಗಳು”.
- **ಶ್ರೀಮತಿ ಲಲಿತಾ** – ಅರಿವು ಜ್ಞಾನ ಹೆಚ್ಚಿಸಿದೆ.
- **ಶ್ರೀ ಸುದರ್ಶನ್** – ಬಂದೇನು ನಾನು ಕತ್ತಲಿಂದ ಕಂಡೇನು ನಾನು ಬೆಳಕನ್ನು ತೋರಿಸುವೆನು ಇತರರಿಗೆ ದಾರಿಯನ್ನು.
- **ಶ್ರೀ ಎಸ್. ಕೃಷ್ಣ** – ಇದು ಒಂದು ಶಿಕ್ಷಣ ಸಂಸ್ಥೆಯಾಗಿದೆ, 10 ದಿನದ ಗ್ರಂಥಾಲಯ ಎಂದೂ ಕರೆಯಬಹುದು.
- **ಶ್ರೀ ಗೋವರ್ಧನ ಎಸ್. ಹೆಗಡೆ** – ಉತ್ತಮ ಪರಿಣಾಮಕಾರಿ ಹಾಗೂ ಜ್ಞಾನವನ್ನು ಹೆಚ್ಚಿಸುವ ಅತ್ಯುತ್ತಮ ವ್ಯಕಿತ್ವ ವಿಕಸನ ಶಿಬಿರ.
- **ಶ್ರೀ ಮಯುರ್ ಬಸವರಾಜ ಕೊಷ್ಟಿ** – ಸಹಕಾರಿಗಳ ಬಗ್ಗೆ ತುಂಬಾ ವಿಷಯಗಳನ್ನು ತಿಳಿದುಕೊಂಡಿದ್ದೇನೆ.
- **ಶ್ರೀ ರವಿಕುಮಾರ ಆರ್.ಎಸ್.** – ಈ ತರಬೇತಿಯು ಸೌಹಾರ್ದದ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಸಂಪೂರ್ಣವಾಗಿ ತಿಳಿದುಕೊಳ್ಳಲು ಸಾಧ್ಯವಾಯಿತು.
- **ಶ್ರೀಮತಿ ವಿಜಯಶಾಂತಿ** – ಮಣ್ಣಿನಲ್ಲಿ ಮಾಣಿಕ್ಯ.
- **ಶ್ರೀ ಹೆಚ್.ಟಿ.ರಮೇಶ** – ನಮ್ಮ ದೈನಂದಿನ ಜೀವನದ ಮುಂದಿನ ದಾರಿಯನ್ನು ಹಸನು ಮಾಡಿ ನಮ್ಮ ಗುರಿ ಸಾಧಿಸಲು ಸಹಾಯ ಮಾಡಿದೆ.
- **ಶ್ರೀಮತಿ ರೇವತಿ ಎ.** – ತರಬೇತಿಯು ಅದ್ಭುತವಾಗಿತ್ತು.
- **ಶ್ರೀಮತಿ ವಿರುಪಮ ಬಸವರಾಜ** – ನಾನು ತುಂಬಾ ವಿಷಯಗಳ ಬಗ್ಗೆ

ತಿಳಿದು ಕೊಳ್ಳಲು ಸಾಧ್ಯವಾಯಿತು.

- **ಶ್ರೀ ಮಲ್ಲಿಕಾರ್ಜುನ ವಿ.** – ಈ ತರಬೇತಿಯು ಒಂದು ಸಾಗರವಿದ್ದಂತೆ.
- **ಶ್ರೀ ಕೆ.ವಿ.ನಾಗರಾಜ** – ಚೈತನ್ಯಪೂರ್ಣ ಮನಸ್ಸು ಚಿಂತನೆಯನ್ನು ಹುಟ್ಟು ಹಾಕುವಂತೆ ನಮ್ಮ ವ್ಯಕ್ತಿತ್ವವನ್ನು ಪರಿಪೂರ್ಣತೆಯೆಡೆಗೆ ಸಾಗಲು ಈ ತರಬೇತಿಯು ಒಂದು ವೇದಿಕೆ.
- **ಶ್ರೀ ಮಹೇಶ.ವಿ.ಜಿ.** – ಹಸಿ ಗೋಡೆಯ ಮೇಲೆ ಹರಳು ಒಗೆದಂತೆ ಇತ್ತು.
- **ಶ್ರೀ ಮಲ್ಲಿಕಾರ್ಜುನ ಪಾಲ್ಕಿ** – ಸಹಕಾರಿಯ ಅಭಿವೃದ್ಧಿ ಬಗ್ಗೆ ಮತ್ತು ಅಳಿವು ಉಳಿವಿನ ಬಗ್ಗೆ ಪೂರ್ಣ ತರಬೇತಿ ನೀಡಲಾಯಿತು.
- **ಶ್ರೀ ಮಂಜು ಶಿರೋಳ** – ಸೌಹಾರ್ದ ಸಹಕಾರಿಗಳಿಗೆ ಒಂದು ರೀತಿ Boost-up ಮಾಡಿದಂತೆ.
- **ಶ್ರೀ ರಜತ ಡಿ.ಎನ್.** – ಸಹಕಾರಿಯ ಬಗ್ಗೆ ಸುವಿಸ್ತಾರವಾಗಿ ತಿಳಿದುಕೊಳ್ಳಲು ಸಹಕಾರಿ.
- **ಶ್ರೀ ನಂದಕುಮಾರ ಜಿ.** – ನಮ್ಮಲಿರುವ ಜವಾಬ್ದಾರಿಯನ್ನು ಎಚ್ಚರಿಸುವ ಒಂದು ಕರೆಯಾಗಿತ್ತು.
- **ಶ್ರೀ ಆನಂದ ಎಮ್.ಎ.** – ಈ ತರಬೇತಿಯು ಒಬ್ಬ ಮನುಷ್ಯನು ಪಾಲಿಸಬೇಕಾದ ಸಮಯ ಪಾಲನೆ, ಗ್ರಾಹಕರೊಂದಿಗೆ ಯಾವ ರೀತಿ ಮಾಡಬೇಕೆಂದು ತಿಳಿಸಿಕೊಟ್ಟಿದೆ.
- **ಕು|| ಅನುಷಾ ಹೆಚ್.ಕೆ.** – ನಾವು ಬೆಳೆದು ನಮ್ಮ ಸಮಾಜವನ್ನು ಬೆಳೆಸುವ ಒಂದು ಒಳ್ಳೆಯ ಅವಕಾಶ.
- **ಕು|| ದೀಪಿಕಾ ಡಿ.** – ವ್ಯಕ್ತಿ ಜೀವನ ಮತ್ತು ಜೀವನದ ಏಳಿಗೆಯನ್ನು ವೃದ್ಧಿಸುವ ಜ್ಞಾನದ ಕಣಜ.
- **ಶ್ರೀ ಮಲ್ಲಿಕಾರ್ಜುನ ಹುಗಾರ** – ಈ ತರಬೇತಿಯಿಂದ ತುಂಬ ವಿಷಯಗಳನ್ನು ತಿಳಿದು ಕೊಂಡಿರುತ್ತೇನೆ.
- **ಶ್ರೀ ಗೌತಮ್ ವಿ.** – ಜೀವನದಲ್ಲಿ ಎಲ್ಲರಿಗೂ ಗೆಲ್ಲಬೇಕೆಂದು ಬಯಕೆ ಇದ್ದೇ ಇರುತ್ತದೆ ಎಂಬುದನ್ನು ಈ ತರಬೇತಿಯಿಂದ ತಿಳಿದುಕೊಂಡೆ.
- **ಶ್ರೀ ಹರಿ** – ಹಾಡುವ ಕೋಗಿಲೆಗೆ ಕಂಠವೇ ಸ್ಫೂರ್ತಿ, ನರ್ತಿಸುವ ನವಿಲಿಗೆ ತುಂತುರು ಹನಿಯೇ ಸ್ಫೂರ್ತಿಯ ಹಾಗೇ ನನ್ನ ವ್ಯಕ್ತಿತ್ವ ವಿಕಸನಕ್ಕೆ ಈ ತರಬೇತಿಯು ಸ್ಫೂರ್ತಿ.
- **ಶ್ರೀ ಮೇಘನಾ ಎಸ್.ಎಂ.** – ಉತ್ತಮವಾಗಿತ್ತು.
- **ಶ್ರೀ ಮಂಜುನಾಥ ಹೆಚ್.ಎಲ್** – ನನ್ನ ವ್ಯಕ್ತಿತ್ವ ನನಗೆ ತಿಳಿಯಲು ಸಾಧ್ಯವಾಯಿತು.
- **ಶ್ರೀ ಅಕ್ಷತಾ ಎಸ್.ಬಿ.** – ಕಲಿಯುವುದು ಬದುಕಿನಲ್ಲಿ ಎಷ್ಟು ಮುಖ್ಯ ಎಂಬುದು ತಿಳಿದು ಬಂದಿತು.
- **ಶ್ರೀ ರುದ್ರೇಶ ಎಸ್.** – ನನ್ನ ಕೆಲಸದ ವೈಖರಿಯನ್ನು ವೃದ್ಧಿಸಿಕೊಂಡೆ.
- **ಶ್ರೀ ಸುಧಾಕರ ಆರ್.** – ಸಹಕಾರಿಯನ್ನು ಮುನ್ನಡೆಸುವ ಜವಾಬ್ದಾರಿಯ ಅರಿವು ಮೂಡಿಸಿದೆ.
- **ಶ್ರೀ ಕೃಷ್ಣ ಕುಮಾರ ಎಂ.ಸಿ.** – ಜೀವನದಲ್ಲಿ ಎತ್ತರಕ್ಕೆ ಬೆಳೆಯುವುದು ಹಾಗೂ ನಮ್ಮ ಜೀವನದ ಉತ್ತಮ ಶೈಲಿಯನ್ನು ರೂಪಿಸಿ ಕೊಳ್ಳುವಲ್ಲಿ ಈ ತರಬೇತಿಯು ಸಹಾಯಕ.
- **ಶ್ರೀ ಉಮೇಶ್ ಎಸ್. ಶೇಟ್** – ಕಳೆದು ಹೋದ ವಿಷಯಗಳನ್ನು ಮತ್ತೆ ಗಳಿಸಿ ಕೊಂಡಿದ್ದೇವೆ.
- **ಶ್ರೀ ಆರ್. ವೀರೇಶ** – ನಮ್ಮನ್ನು ಉಕ್ಕಿನಂತೆ ಪರಿವರ್ತಿಸಿದ ತಮ್ಮೆಲ್ಲರಿಗೂ ಧನ್ಯವಾದಗಳು.
- **ಶಿಲ್ಪಾ ಎಂ.ಎಸ್.** – ಬಾವಿಯಲ್ಲಿ ಇರುವ ಕಪ್ಪೆಗಳಾಗಿದ್ದ ನಮಗೆ ಸಮುದ್ರದ ದರ್ಶನವಾಯಿತು.
- **ಶ್ರೀ ಎನ್. ರಮೇಶ** – ಈ ತರಬೇತಿಯು ಒಂದು ಪ್ರವಾಸದಂತಿತ್ತು.
- **ಶ್ರೀ ಶ್ರೀಕಾಂತ ಜಿ.ಟಿ.** – ಜ್ಞಾನದ ದೇಗುಲ.
- **ಶ್ರೀ ತಿಪ್ಪರುದ್ರ ಗೌಡ** – ಅರ್ಥಪೂರ್ಣ ತರಬೇತಿ.
- **ಶ್ರೀ ಸತ್ಯನಾರಾಯಣ** – ನೂತನ ವಸ್ತುವನ್ನು ಮಾರುಕಟ್ಟೆಗೆ ಪರಿಚಯಿಸಿದಂತೆ ಹೊಸ ಜಗತ್ತಿಗೆ ಪರಿಚಯವಾದಂತಾಯಿತು.
- **ಶ್ರೀ ರುದ್ರಗೌಡ ಬಿರಾದಾರ** – ಅತ್ಯಂತ ಯಶಸ್ವಿಯಾಗಿತ್ತು.

**ಬಹುಮಾನ ಹಾಗೂ ಪ್ರಶಸ್ತಿ ಪತ್ರಗಳ ವಿತರಣೆ :** ಶಿಬಿರದಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಶಿಬಿರಾರ್ಥಿಗಳಿಗೆ ಸಂಯುಕ್ತ ಸಹಕಾರಿಯ ವತಿಯಿಂದ ಬಹುಮಾನಗಳನ್ನು ಮತ್ತು ಎಲ್ಲಾ ಶಿಬಿರಾರ್ಥಿಗಳಿಗೆ ಪ್ರಶಸ್ತಿ ಪತ್ರಗಳನ್ನು ನೀಡಲಾಯಿತು.

**ಉತ್ತಮ ಪ್ರಾರ್ಥನೆ :** ಶ್ರೀ ವಿಶ್ವನಾಥ ಶೆಟ್ಟಿ, ಮಾನ್ವಿ ಪಟ್ಟಣ ಸಹಕಾರ ಬ್ಯಾಂಕ್ ನಿ., ರಾಯಚೂರು.

**ಉತ್ತಮ ಸುವಿಚಾರ :** ಶ್ರೀ ವೀರೇಶ ಮಾರಿಸ್, ಸ್ತ್ರೀ ಬಂಧು ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ.

**ಉತ್ತಮ ಮಿಲಿ :** ಶ್ರೀಮತಿ ನಂದಕುಮಾರಿ, ಬಲಿಜ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ.

**ಉತ್ತಮ ಇನ್‌ಸ್ಟಂಟ್ ಮಿಲಿ :** ಶ್ರೀ ಉಮೇಶ ಶೇಟ್, ಸುವರ್ಣ ಸೌಹಾರ್ದ ಸಹಕಾರಿ ನಿ., ಅಕ್ಕಿ ಆಲೂರು.

**ಉತ್ತಮ ಶಿಬಿರಾರ್ಥಿ ಮಹಿಳಾ ವಿಭಾಗ :** ಶ್ರೀಮತಿ ಅನುಷಾ, ಆಶೀರ್ವಾದ ಸೌಹಾರ್ದ ಸಹಕಾರಿ ನಿ., ಗೌರಿಬಿದನೂರು.

**ಉತ್ತಮ ಶಿಬಿರಾರ್ಥಿ ಪುರುಷ ವಿಭಾಗ :** ಶ್ರೀ ಮಾಲತೇಶ, ಅರಿವಿನ ಮನೆ ಸೌಹಾರ್ದ ಸಹಕಾರಿ ನಿ., ಬೆಳ್ಳಾವಿ, ತುಮಕೂರು.



ಬಹುಮಾನ ಹಾಗೂ ಪ್ರಶಸ್ತಿ ಪತ್ರ ವಿತರಣೆ

**ಉತ್ತಮ ವರದಿ :** ಸ್ವಾಮಿ ವಿವೇಕಾನಂದ ತಂಡ ಹಾಗೂ ಸಾಲು ಮರದ ತಿಮ್ಮಕ್ಕ ತಂಡ.

**ವಿವಿಧ ಕಾರ್ಯಗಳನ್ನು ಉತ್ತಮವಾಗಿ ನಿರ್ವಹಿಸಿದ ತಂಡ :**

**ವ್ಯವಸ್ಥಾಪನಾ ತಂಡ – ವಿವೇಕಾನಂದ.**

**ಸಮಯ ಪಾಲನೆ ತಂಡ – ಸಾಲು ಮರದ ತಿಮ್ಮಕ್ಕ.**

**ಊಟೋಪಚಾರ ತಂಡ – ಅಬ್ದುಲ್ ಕಲಾಂ.**

**ಮನರಂಜನೆ ತಂಡ – ಭಗತಸಿಂಗ್.**



ನೆನಪಿನ ಕಾಣಿಕೆ ಸಲ್ಲಿಕೆ

**17ನೇ ತಂಡದ ನೆನಪಿನ ಕಾಣಿಕೆ :** ಶಿಬಿರಾರ್ಥಿಗಳು ತಮ್ಮ ತಂಡದ ನೆನಪಿನ ಕಾಣಿಕೆಯಾಗಿ ಮೈಸೂರು ಅರಮನೆಯ ಮಾದರಿಯ ಮೊಮೆಂಟೋವನ್ನು ಹಾಗೂ ಸಾಲು ಮರದ ತಿಮ್ಮಕ್ಕ ತಂಡದ ಶಿಬಿರಾರ್ಥಿಗಳು ಸಾಲು ಮರದ ತಿಮ್ಮಕ್ಕನವರ ವರ್ಣಚಿತ್ರವನ್ನು ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಿಗೆ ನೀಡಿದರು. ಶಾಂತಿ ಮಂತ್ರದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

# ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ 7 ದಿನಗಳ ಬ್ಯಾಂಕಿಂಗ್ ಮೂಲ ಮಾಹಿತಿ ತರಬೇತಿ

## ಸಹಕಾರಿ ಬ್ಯಾಂಕಿಂಗ್ ಕ್ಷೇತ್ರವು ಈಗಿನ ಜಗತ್ತಿಗೆ ಆರ್ಥಿಕ ಬೆನ್ನೆಲುಬಾಗಿದೆ - ಶ್ರೀಮತಿ ಕಲ್ಪನಾ ಮೋರೆ





**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ವತಿಯಿಂದ ದಿನಾಂಕ 01 ರಿಂದ 07 ಜುಲೈ 2017ರವರೆಗೆ ಬೆಂಗಳೂರಿನ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ ಇಲ್ಲಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್‌ಗಳ ಸಿಬ್ಬಂದಿಗಳಿಗಾಗಿ 7 ದಿನಗಳ "ಬ್ಯಾಂಕಿಂಗ್ ಮೂಲ ಮಾಹಿತಿ ತರಬೇತಿ"ಯನ್ನು ಹಮ್ಮಿಕೊಳ್ಳಲಾಗಿತ್ತು.

ದಿನಾಂಕ 01.07.2017ರಂದು ತರಬೇತಿಯ ಉದ್ಘಾಟನೆಯನ್ನು ಶ್ರೀಮತಿ ಕಲ್ಪನಾ ಮೋರೆ, ಪ್ರಧಾನ ವ್ಯವಸ್ಥಾಪಕರು, ಆರ್‌ಬಿಐ, ಬೆಂಗಳೂರು ಇವರು ನೆರವೇರಿಸಿ, ಸಹಕಾರಿ ಬ್ಯಾಂಕಿಂಗ್ ಕ್ಷೇತ್ರವು ಈಗಿನ ಜಗತ್ತಿಗೆ ಆರ್ಥಿಕ ಬೆನ್ನೆಲುಬಾಗಿದೆ. ಅದರಲ್ಲೂ ಸಹಕಾರಿ ಬ್ಯಾಂಕ್‌ಗಳು ಕರ್ನಾಟಕದಲ್ಲಿ ಹೆಚ್ಚು ಸದೃಢವಾಗಿದೆ ಎಂದು ಹೇಳಲು ಹೆಮ್ಮೆಯಾಗುತ್ತದೆ. ನೀವೆಲ್ಲಾ ಇಲ್ಲಿ ತರಬೇತಿಯನ್ನು ಪಡೆಯಲು ಬಂದಿದ್ದೀರಿ. ಅದರಂತೆ ನೀವು ಯೋಚಿಸಿ ನಮ್ಮ ಬ್ಯಾಂಕನ್ನು ಹೇಗೆ, ಯಾವ ರೀತಿ ಅಭಿವೃದ್ಧಿ ಪಡಿಸಬೇಕು ಎಂಬುದನ್ನು ತಿಳಿದುಕೊಳ್ಳಿ. ಹಿಂದುಳಿದ ಸಹಕಾರಿ ಬ್ಯಾಂಕ್‌ಗಳು ಮುಂದೆ ಬರಬೇಕು ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್.ಆರ್.ಲಕ್ಷ್ಮೀಕಾಂತರೆಡ್ಡಿರವರು ಮಾತನಾಡಿ ಇನ್ನೂ ಹೆಚ್ಚು ಹೆಚ್ಚು ಬ್ಯಾಂಕ್‌ಗಳು ಈ ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಬರಬೇಕು. ನೀವುಗಳು ಸಹಕಾರಿ ಬ್ಯಾಂಕ್‌ಗಳನ್ನು ಬೆಳೆಸಬೇಕು. ಅದಕ್ಕಾಗಿ ಇಂತಹ ತರಬೇತಿಗಳನ್ನು ಸಂಯುಕ್ತ ಸಹಕಾರಿ ನೀಡುತ್ತಿರುವುದು ಎಂದರು. ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಹಾಗೂ ಶ್ರೀಮತಿ ಹೆಚ್.ಸಿ.ನಾಗರತ್ನ ಮತ್ತು ಪ್ರಾದೇಶಿಕ ನಿರ್ದೇಶಕರಾದ ಶ್ರೀ ವಸಂತ ನಾಯಕ್, ಶ್ರೀಮತಿ ಅಂಬುಜಾ ಲಕ್ಷ್ಮೀನಾರಾಯಣ ಹಾಗೂ ಸಂಯುಕ್ತ ಸಹಕಾರಿಯ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಅಂತರರಾಷ್ಟ್ರೀಯ ಸಹಕಾರಿ ದಿನಾಚರಣೆ



**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮತ್ತು ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ ಇದರ ಸಹಯೋಗದೊಂದಿಗೆ ದಿನಾಂಕ 01 ಜುಲೈ 2017ರಂದು ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಬೆಂಗಳೂರು ಇಲ್ಲಿ ಅಂತರರಾಷ್ಟ್ರೀಯ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು.

ಶ್ರೀ ಪಿ.ವಿ.ಪ್ರಭು, ವಿಶ್ವಸ್ಥ ವ್ಯವಸ್ಥಾಪಕರು, ಎನ್.ಐ.ಆರ್.ಬಿ., ಬೆಂಗಳೂರು ಇವರು ಸಹಕಾರಿ ಧ್ವಜಾರೋಹಣ ಮಾಡುವ ಮೂಲಕ ಅಂತರರಾಷ್ಟ್ರೀಯ ಸಹಕಾರಿ ದಿನಾಚರಣೆಗೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಶ್ರೀ ವಸಂತ ನಾಯಕ್, ಪ್ರಾದೇಶಿಕ ನಿರ್ದೇಶಕರು, ಆರ್‌ಐಸಿಎಂ, ಬೆಂಗಳೂರು, ಶ್ರೀಮತಿ ಕಲ್ಪನಾ ಮೋರೆ, ಪ್ರಧಾನ ವ್ಯವಸ್ಥಾಪರು, ಆರ್‌ಬಿಐ, ಬೆಂಗಳೂರು ಹಾಗೂ ಶ್ರೀಮತಿ ಅಂಬುಜಾ ಲಕ್ಷ್ಮೀನಾರಾಯಣ, ಸಹಾಯಕ ಪ್ರಧಾನ ವ್ಯವಸ್ಥಾಪಕರು, ಆರ್‌ಬಿಐ, ಬೆಂಗಳೂರು ಮತ್ತು ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಎಸ್.ಆರ್.ಲಕ್ಷ್ಮಿ ಕಾಂತರೆಡ್ಡಿ, ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಶ್ರೀಮತಿ ಹೆಚ್.ಸಿ.ನಾಗರತ್ನ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಮತ್ತು ಕೆಐಸಿಎಂ, ಬೆಂಗಳೂರು ಇದರ ಉಪನ್ಯಾಸಕರುಗಳು, ಸಂಯುಕ್ತ ಸಹಕಾರಿಯ ಅಧಿಕಾರಿಗಳು ಹಾಗೂ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್‌ಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಶ್ರೀ ಪಿ.ವಿ. ಪ್ರಭುರವರು ತಾನು ಎಲ್ಲರಿಗಾಗಿ ಎಲ್ಲರೂ ತನಗಾಗಿ (ಧ್ಯೇಯ ಹಾಕಬೇಕು) ಎಂದು ಕರೆ ನೀಡಿದರು.

# ಸೌಹಾರ್ದ ಸಹಕಾರಿಗಳಿಗೆ ಸಂಬಂಧಿಸಿದಂತೆ ಭಾರತೀಯ ರಿಸರ್ವ್ ಬ್ಯಾಂಕಿನ ಅಧಿಕಾರಿಗಳೊಂದಿಗೆ ಸಭೆ : ಆಶಾದಾಯಕ ಬೆಳವಣಿಗೆ



ದಿನಾಂಕ : 29.06.2017ರಂದು ಭಾರತೀಯ ರಿಸರ್ವ್ ಬ್ಯಾಂಕಿನ ಯುಸಿಬಿಎಸ್ ವಿಭಾಗದಿಂದ ಆಯೋಜಿಸಿದ ಸಭೆಯಲ್ಲಿ ಭಾಗವಹಿಸಿ ಸೌಹಾರ್ದ ಸಹಕಾರಿಗಳು ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಇನ್ನೂ ಅನೇಕ ಉಪಯುಕ್ತ ವಿಷಯಗಳ ಕುರಿತು ಚರ್ಚೆಯನ್ನು ಮಾಡಲಾಗಿದೆ. ಸಭೆಯಲ್ಲಿ ಯುಸಿಬಿಎಸ್‌ನ ಜನರಲ್ ಮ್ಯಾನೇಜರ್ ಶ್ರೀ ತೋಟಗಂ ಜಮಾಂಗ್, ಶ್ರೀಮತಿ ಕಲ್ಪನಾ ಮೋರೆ, ಹಾಗೂ ಸಹಪ್ರಧಾನ ವ್ಯವಸ್ಥಾಪಕರು, ಅಧಿಕಾರಿಗಳು ಮತ್ತು ಸಹಕಾರಿಗಳ ಜಂಟಿ ನಿಬಂಧಕರಾದ ಶ್ರೀ ಹೆಚ್. ಬಾಲಶೇಖರ್, ಸಂಯುಕ್ತ ಸಹಕಾರಿಯ ಪರವಾಗಿ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ್, ನಿರ್ದೇಶಕರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ, ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ ಇವರುಗಳು ಭಾಗವಹಿಸಿದ್ದು, ಪ್ರಸ್ತುತ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಅವಶ್ಯಕವಾಗಿರುವ ಕೆಳಗಿನ ಅಂಶಗಳ ಕುರಿತು ಚರ್ಚಿಸಲಾಗಿದೆ.

1. ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿಗಳನ್ನು ಕೋ-ಆಪರೇಟಿವ್ ಬ್ಯಾಂಕ್ ಆಗಿ ಮಾರ್ಪಡಿಸುವ ಕುರಿತು.
2. ಸೌಹಾರ್ದ ಸಹಕಾರಿಗಳ ಅಪೆಕ್ಸ್ ಮಾದರಿ ಬ್ಯಾಂಕ್ ರಚನೆ ಕುರಿತು.
3. ಟ್ಯಾಫ್‌ಕ್ಯಾಬ್‌ನಲ್ಲಿ ಸಂಯುಕ್ತ ಸಹಕಾರಿಯನ್ನು ಪ್ರತಿನಿಧಿಯನ್ನಾಗಿಸುವ ಕುರಿತು.
4. ಸೌಹಾರ್ದ ಸಹಕಾರಿಗಳಿಗೆ RTGS, NEFT ಸೌಲಭ್ಯಗಳನ್ನು ಒದಗಿಸುವ ಕುರಿತು.
5. 3ನೇ ವ್ಯಕ್ತಿಯ ಚೆಕ್ ನಗದೀಕರಣ ಮೊತ್ತವನ್ನು ಹೆಚ್ಚಿಸುವ ಕುರಿತು.

ಮೇಲಿನ ಅಂಶಗಳ ಜೊತೆಗೆ, ಭಾರತೀಯ ರಿಸರ್ವ್ ಬ್ಯಾಂಕಿನ ಅಧಿಕಾರಿಗಳು ತಿಳಿಸಿರುವ/ ಸಲಹೆ ನೀಡಿರುವ ಅಂಶಗಳು ಈ ರೀತಿ ಇವೆ.

1. ಸೌಹಾರ್ದ ಸಹಕಾರಿಗಳನ್ನು ಕಾರ್ಯ ಚಟುವಟಿಕೆಗಳ ಆಧಾರದ ಮೇಲೆ ಶ್ರೇಣಿಗಳನ್ನು (A,B,C,D) ನಿಗದಿಪಡಿಸುವುದು.
2. ಸೌಹಾರ್ದ ಸಹಕಾರಿಗಳು ಆರ್ಥಿಕ ಶಿಸ್ತನ್ನು ಹಾಗೂ ಪಾರದರ್ಶಕತೆಯನ್ನು ಅಳವಡಿಸಿಕೊಂಡು ಬಡ್ಡಿದರಗಳ ನಿಗದಿಗೆ ಸಂಬಂಧಿಸಿದಂತೆ ವೈಜ್ಞಾನಿಕ ದರಗಳನ್ನು ನಿಗದಿಪಡಿಸುವುದು.
3. ಸೌಹಾರ್ದ ಸಹಕಾರಿ ಬ್ಯಾಂಕುಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಅದರ ಪ್ರಗತಿಯ ಬಗ್ಗೆ ನಿರಂತರ ಗಮನಹರಿಸುವುದು.

- ಸುದೀರ್ಘವಾದ ಚರ್ಚೆಯ ನಂತರ ಉತ್ತಮ ಸೌಹಾರ್ದ ಸಹಕಾರಿಗಳಿಗೆ ಬ್ಯಾಂಕಾಗಿ ಮಾರ್ಪಾಡು ಹೊಂದಲು ಅವಕಾಶಗಳಿವೆ. ಮಾಲೆಗಾಂ ಮತ್ತು ಗಾಂಧೀ ಕಮಿಟಿಯ ಶಿಫಾರಸ್ಸುಗಳು ಜಾರಿಯಾದಲ್ಲಿ ಇದಕ್ಕೆ ಪೂರಕವಾದ ವಾತಾವರಣ ಸೃಷ್ಟಿಯಾಗಲಿದೆ ಎಂದು ತಿಳಿಸಿರುತ್ತಾರೆ. ಪ್ರಸ್ತುತ ಸ್ಮಾಲ್ ಫೈನಾನ್ಸ್ ಬ್ಯಾಂಕುಗಳಾಗಲು ಇಚ್ಛಿಸುವವರು ಅರ್ಜಿ ಸಲ್ಲಿಸಬಹುದಾಗಿದೆ.
- ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಅಡಿಯಲ್ಲಿ 18 ಬ್ಯಾಂಕುಗಳ ಪರಿಣಾಮಕಾರಿ ಹಾಗೂ ತ್ವರಿತ ಕಾರ್ಯನಿರ್ವಹಣೆಗಾಗಿ ಸಂಯುಕ್ತ ಸಹಕಾರಿಯನ್ನು ಟ್ಯಾಫ್‌ಕ್ಯಾಬ್‌ನ ಸದಸ್ಯರನ್ನಾಗಿ ಸೇರಿಸಿಕೊಳ್ಳಲು ಈಗಿರುವ ಒಪ್ಪಂದಕ್ಕೆ ಅಗತ್ಯ ಮಾರ್ಪಾಡು ಮಾಡುವುದಾಗಿ ತಿಳಿಸಿ, ಸಕರಾತ್ಮಕವಾಗಿ ಪ್ರತಿಕ್ರಿಯಿಸಿರುತ್ತಾರೆ.
- ಸಂಯುಕ್ತ ಸಹಕಾರಿಯ ಮೂಲಕವೇ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ RTGS, NEFT ಸೌಲಭ್ಯವನ್ನು ಒದಗಿಸಲು ಭಾರತೀಯ ರಿಸರ್ವ್ ಬ್ಯಾಂಕ್ ಸಹಾಯ ಮಾಡುವುದಾಗಿ ತಿಳಿಸಿರುತ್ತಾರೆ.

## ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಹಾಗೂ ಪದಾಧಿಕಾರಿಗಳ ಚುನಾವಣೆಯ ಕುರಿತು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಆಡಳಿತ ಮಂಡಲಿ ಹಾಗೂ ಪದಾಧಿಕಾರಿಗಳ ಚುನಾವಣೆಯನ್ನು ಆದ್ಯತೆ ಮೇರೆಗೆ ನಡೆಸಿಕೊಡಲು ಮಾನ್ಯ ಪ್ರಾದೇಶಿಕ ಆಯುಕ್ತರು ಹಾಗೂ ಮಾನ್ಯ ಚುನಾವಣಾಧಿಕಾರಿಗಳಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಪರವಾಗಿ ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳು ಮನವಿ ಮಾಡಿರುತ್ತಾರೆ.

ಚುನಾವಣೆಗೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನೂ ಸಹ ದಾಖಲಿಸಿದ್ದು, ಸದರಿ ಅರ್ಜಿಯ ವಿಚಾರಣೆಯು ದಿನಾಂಕ : 14.06.2017 ಹಾಗೂ ದಿನಾಂಕ : 22.06.2017ರಂದು ನಡೆದಿರುತ್ತದೆ. ಸಂಯುಕ್ತ ಸಹಕಾರಿಯ ಚುನಾವಣೆಗೆ ಸಂಬಂಧಿಸಿದಂತೆ ಸಂಯುಕ್ತ ಸಹಕಾರಿಯ ವತಿಯಿಂದ ಎಲ್ಲಾ ರೀತಿಯ ನೆರವನ್ನು ಹಾಗೂ ಸಹಕಾರವನ್ನು ಚುನಾವಣಾಧಿಕಾರಿಗಳಿಗೆ ನೀಡಿರುತ್ತದೆ ಮತ್ತು ಇನ್ನೂ ಅವಶ್ಯಕವಿರುವ ಮಾಹಿತಿಯನ್ನು ನೀಡಲು ಸಿದ್ಧವಿರುತ್ತದೆ ಎಂದು ಸಂಯುಕ್ತ ಸಹಕಾರಿಯ ಪರವಾಗಿ ಹಿರಿಯ ನ್ಯಾಯವಾದಿಗಳಾದ ಶ್ರೀ ಜಯಕುಮಾರ್ ಎಸ್. ಪಾಟೀಲರವರು ವಾದಿಸಿರುತ್ತಾರೆ. ಜುಲೈ ತಿಂಗಳಿನಲ್ಲಿ ಚುನಾವಣಾ ವೇಳಾಪಟ್ಟಿಯನ್ನು ಹೊರಡಿಸುವ ನಿರೀಕ್ಷೆಯಲ್ಲಿದೆ. ಮಾನ್ಯ ಚುನಾವಣಾಧಿಕಾರಿಗಳಿಂದ ಅಧಿಕೃತವಾದ ಆದೇಶ ಹೊರಡಿಸಿದ ನಂತರ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಮಾಹಿತಿಯನ್ನು ತಿಳಿಸಲಾಗುವುದು. ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಹಾಗೂ ಪದಾಧಿಕಾರಿಗಳ ಚುನಾವಣೆಯ ದಿನಾಂಕವನ್ನು ತಿಳಿದುಕೊಂಡು ಸಂಯುಕ್ತ ಸಹಕಾರಿಯ 16ನೇ ಸಾಮಾನ್ಯ ಸಭೆಯ ದಿನಾಂಕವನ್ನು ನಿಗದಿಪಡಿಸಲಾಗುವುದು.

ಬೆಂಗಳೂರು ವಿಭಾಗ

# ಬೆಂಗಳೂರು ವಿಭಾಗದ ನೂತನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಪ್ರವೇಶ ತರಬೇತಿ

**ಬೆಂಗಳೂರು :** ದಿನಾಂಕ : 06.06.2017ರಂದು ಬೆಂಗಳೂರು ವಿಭಾಗದಲ್ಲಿ ಹೊಸದಾಗಿ ನೋಂದಣಿಯಾಗಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ "ಪ್ರವೇಶ ತರಬೇತಿ"ಯನ್ನು ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು.

ತರಬೇತಿಯನ್ನು ಉದ್ಘಾಟಿಸಿ, ಮಾತನಾಡಿದ ಶ್ರೀ ಹೆಚ್.ಬಾಲಶೇಖರ, ಜಂಟಿ ನಿಬಂಧಕರು, ಕಾನೂನು ಕೋಶ ಇವರು ಕರ್ನಾಟಕ ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಅತಿ ಹೆಚ್ಚು ಸೌಹಾರ್ದ ಸಹಕಾರಿಗಳು ನೋಂದಣಿಗೊಂಡಿರುತ್ತವೆ. ಸಹಕಾರಿಯ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರು ತಮ್ಮ ಜವಾಬ್ದಾರಿಗಳನ್ನು ಅರಿತು ಪ್ರಾಮಾಣಿಕತೆ, ದಕ್ಷತೆ, ಸಮಯ ಪ್ರಜ್ಞೆಯಿಂದ ಕಾರ್ಯನಿರ್ವಹಿಸಬೇಕು ಮತ್ತು ಕಾಯ್ದೆ ಕಾನೂನುಗಳ ತಿಳುವಳಿಕೆಯನ್ನು ಹೊಂದಿರಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಮಾತನಾಡಿ ಸಂಯುಕ್ತ ಸಹಕಾರಿಯು ವಿಶಿಷ್ಟವಾದ ತರಬೇತಿಗಳನ್ನು ಆಯೋಜಿಸುತ್ತಾ ಬಂದಿರುತ್ತದೆ. ನೂತನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗೆ ಪ್ರವೇಶ ತರಬೇತಿಯ ಮೂಲಕ ಸೌಹಾರ್ದ ಸಹಕಾರಿಗಳ ಸಮತೋಲನದ ಬಗ್ಗೆ ಹಾಗೂ ಕಾಯ್ದೆ, ಕಾನೂನುಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ ಎಂದರು.



ಶ್ರೀ ಎ.ಸಿ.ದಿವಾಕರ್, ಡಾ. ಎಸ್.ಎ.ಸಿದ್ಧಾಂತಿ ಇವರುಗಳು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದರು.

ಸಮಾರೋಪ ಸಮಾರಂಭದಲ್ಲಿ ಸಂಯುಕ್ತ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ವೈ.ಕುಮಾರ್‌ರವರು ಪ್ರಶ್ನೋತ್ತರ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಬೆಂಗಳೂರು ವಿಭಾಗೀಯ ಅಧಿಕಾರಿ ಶ್ರೀ ಸೂರ್ಯಕಾಂತ್ ರ‍್ಯಾಕಲೆರವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 27 ಸೌಹಾರ್ದ ಸಹಕಾರಿಗಳಿಂದ 45 ಪ್ರತಿನಿಧಿಗಳು ಸೇರಿದಂತೆ ಒಟ್ಟು 50 ಪ್ರತಿನಿಧಿಗಳು ಭಾಗವಹಿಸಿ, ತರಬೇತಿಯ ಲಾಭವನ್ನು ಪಡೆದರು.

# ಗುಣಮಟ್ಟ ನಿರ್ವಹಣೆ ಹಾಗೂ ಅಧಿಪ್ರೇರಣೆ ತರಬೇತಿ ಕಾರ್ಯಾಗಾರ

## ಗುಣಮಟ್ಟದ ಚಿಂತನೆ ಇಂದಿನ ಅಗತ್ಯತೆ - ಶ್ರೀ ಷಡಕ್ಷರಿ



**ಬೆಂಗಳೂರು :** ದಿನಾಂಕ 22.06.2017ರಂದು ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು ಇಲ್ಲಿ ಸಂಯುಕ್ತ ಸಹಕಾರಿಯ ಬೆಂಗಳೂರು ವಿಭಾಗದ ವತಿಯಿಂದ ಬೆಂಗಳೂರು ನಗರದಲ್ಲಿ 1959ರ ಸಹಕಾರಿ ಸಂಘಗಳ ಕಾಯ್ದೆಯಡಿ ನೋಂದಣಿಗೊಂಡು ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಘಗಳ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗಾಗಿ "ಗುಣಮಟ್ಟ ನಿರ್ವಹಣೆ ಹಾಗೂ ಅಧಿಪ್ರೇರಣೆ" ತರಬೇತಿ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

ತರಬೇತಿಯನ್ನು ಉದ್ಘಾಟಿಸಿ, ಮಾತನಾಡಿದ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಉಪ ನಿರ್ದೇಶಕರಾದ ಶ್ರೀ ಷಡಕ್ಷರಿಯವರು ತರಬೇತಿಯು ನಮ್ಮ ಗುಣಮಟ್ಟವಾದ ಚಿಂತನೆ ಹೆಚ್ಚಿಸಲು ಸಹಕಾರಿಯಾಗಿರುವುದರಿಂದ ಪ್ರತಿ ಸಹಕಾರಿಗಳು ತರಬೇತಿಗಳಲ್ಲಿ ಭಾಗವಹಿಸಿ, ಅದರ ಲಾಭ ಪಡೆದು ಕೊಳ್ಳಬೇಕೆಂದು ಕರೆ ನೀಡಿದರು. ಸಹಕಾರಿ ಸಂಘಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಗುಣಮಟ್ಟವಾದ ಚಿಂತನೆ ಮಾಡಿ, ತಮ್ಮ ಕರ್ತವ್ಯಗಳನ್ನು ಜವಾಬ್ದಾರಿಯುತವಾಗಿ ನಿರ್ವಹಿಸಿ, ಗುಣಮಟ್ಟದ ಸಹಕಾರ ಸಂಘವನ್ನು ಬೆಳೆಸಿ, ಇತರೆ ಸಂಸ್ಥೆಗಳಿಗೆ ಮಾದರಿಯಾಗಬಹುದು ಎಂದರು. ಶ್ರೀ ಮಹಾಬಲಗಿರಿ, ಸಂಯುಕ್ತ ಸಹಕಾರಿಯ ಸಹ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ, ಶ್ರೀ ವೈ.ವಿ.ಗುಂಡುರಾವ್ ಇವರುಗಳು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದರು.

ಪ್ರಾಸ್ತಾವಿಕ ನುಡಿಯನ್ನು ತರಬೇತಿ ಅಧಿಕಾರಿಯಾದ ಶ್ರೀ ವಿ.ಜೆ.ಕಾರಕೂನ ಹಾಗೂ ಸ್ವಾಗತವನ್ನು ವಿಭಾಗೀಯ ಅಧಿಕಾರಿ ಸೂರ್ಯಕಾಂತ ರ‍್ಯಾಕಲೆ ಮತ್ತು ವಂದನಾರ್ಪಣೆಯನ್ನು ಕಿರಿಯ ಅಧಿಕಾರಿಯಾದ ಶ್ರೀ ವೃಷಭನಾಥ ಪರಪ್ಪನವರ ನೆರವೇರಿಸಿದರು ಹಾಗೂ ಶ್ರೀ ಅನಿಲ ಕುಮಾರ್‌ರವರು ಕಾರ್ಯಕ್ರಮವನ್ನು ನಿರೂಪಿಸಿದರು. ಬೆಂಗಳೂರು ನಗರದ 31 ಸಹಕಾರ ಸಂಘಗಳಿಂದ 47 ಪ್ರತಿನಿಧಿಗಳು ಭಾಗವಹಿಸಿ, ತರಬೇತಿಯ ಲಾಭವನ್ನು ಪಡೆದುಕೊಂಡರು.

## ಬೆಳಗಾವಿ ವಿಭಾಗ

## ಪ್ರವೇಶ ತರಬೇತಿ ಕಾರ್ಯಕ್ರಮಗಳು : ವ್ಯವಸ್ಥಿತ ಆಡಳಿತದಿಂದ ಸಹಕಾರಿಗಳ ಅಭಿವೃದ್ಧಿ ಸಾಧ್ಯ – ಶ್ರೀ ಬಿ.ಎಸ್.ಸುಲ್ತಾನಪುರೆ

**ಬೆಳಗಾವಿ :** ದಿನಾಂಕ 28.06.2017ರಂದು ಬೆಳಗಾವಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊಸದಾಗಿ ನೋಂದಣಿಗೊಂಡ ಸೌಹಾರ್ದ ಸಹಕಾರಿಗಳಿಗಾಗಿ "ಪ್ರವೇಶ ತರಬೇತಿ"ಯನ್ನು ಬೆಳಗಾವಿಯ ಕನ್ನಡ ಸಾಹಿತ್ಯ ಭವನದಲ್ಲಿ ಏರ್ಪಡಿಸಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದ ಶಿವಾ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಳಗಾವಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಎಸ್.ಸುಲ್ತಾನಪುರೆರವರು ಆಡಳಿತ ಮಂಡಲಿ ಹಾಗೂ ಸಿಬ್ಬಂದಿಗಳ ವ್ಯವಸ್ಥಿತ ಆಡಳಿತದಿಂದ ಸಹಕಾರಿಗಳು ಅಭಿವೃದ್ಧಿ ಸಾಧಿಸಲು ಸಾಧ್ಯವಾಗುತ್ತದೆ ಎಂದರು. ಸಂಯುಕ್ತ ಸಹಕಾರಿಯ ಬೆಳಗಾವಿ ವಿಭಾಗೀಯ ಅಧಿಕಾರಿಯಾದ ಶ್ರೀ ಜಿ.ಎಸ್. ಟೋಪಣ್ಣವರ್‌ರವರು ಅಧ್ಯಕ್ಷತೆ ವಹಿಸಿ, ಮಾತನಾಡಿದರು. 34 ಸಹಕಾರಿಗಳಿಂದ 56 ಪ್ರತಿನಿಧಿಗಳು ಭಾಗವಹಿಸಿ, ತರಬೇತಿಯ ಪ್ರಯೋಜನ ಪಡೆದರು.



ಕಾರ್ಯಕ್ರಮವನ್ನು ಸಹಾಯಕರಾದ ಶ್ರೀ ವೆಂಕಟೇಶ ರಾಠೋಡರವರು ಸ್ವಾಗತಿಸಿ, ಪ್ರಾಸ್ತಾವಿಕ ಭಾಷಣ ಮಾಡಿದರು. ಕಿರಿಯ ಅಧಿಕಾರಿ ಶ್ರೀ ಬಸವರಾಜ ಹೊಂಗಲರವರು ವಂದಿಸಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ಓಂಕಾರ ಧರಣೆರವರು ಕಾರ್ಯಕ್ರಮವನ್ನು ನಿರೂಪಿಸಿದರು.

## ಸಹಕಾರಿಗಳು ಸ್ವಾಯತ್ತತೆಯ ಸದುಪಯೋಗ ಮಾಡಿಕೊಳ್ಳಲಿ – ಶ್ರೀ ಎಂ.ಬಿ.ಕಲಾಲ



**ಹುಬ್ಬಳ್ಳಿ :** ದಿನಾಂಕ 29.06.2017ರಂದು ಧಾರವಾಡ, ಗದಗ, ಹಾವೇರಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಹೊಸದಾಗಿ ನೋಂದಣಿಗೊಂಡ ಸೌಹಾರ್ದ ಸಹಕಾರಿಗಳಿಗಾಗಿ "ಪ್ರವೇಶ ತರಬೇತಿ"ಯನ್ನು ಹುಬ್ಬಳ್ಳಿಯ ಹೋಟೆಲ್ ಶ್ರೀಕೃಷ್ಣ ಭವನದಲ್ಲಿ ಏರ್ಪಡಿಸಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಂ.ಬಿ.ಕಲಾಲರವರು ಸಹಕಾರಿಗಳು ಸ್ವಾಯತ್ತತೆಯ ಸದುಪಯೋಗ ಪಡೆದುಕೊಂಡು, ಸಂಸ್ಥೆಯನ್ನು ಅಭಿವೃದ್ಧಿ ಪಥದತ್ತ ಸಾಗಿಸಬೇಕು ಎಂದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿಯವರು ಸಹಕಾರಿಗಳು ಕಾನೂನು, ನಿಯಮ ಹಾಗೂ ಉಪವಿಧಿ ಪ್ರಕಾರ ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಬೇಕು ಎಂದರು. ಅಧ್ಯಕ್ಷತೆ ವಹಿಸಿ, ಮಾತನಾಡಿದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ರವಿ ಯಲಿಗಾರರವರು ಸಹಕಾರಿಗಳು ಸಹಕಾರ ಕ್ಷೇತ್ರದಲ್ಲಿ ನಾನಾ ರೀತಿಯ ಸೇವೆಗಳನ್ನು ಒದಗಿಸಿ, ಜನರ ಸೇವೆ ಮಾಡಲು ಬಹಳ ಅವಕಾಶಗಳಿವೆ ಎಂದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಆರ್.ಎನ್. ದೇಶಪಾಂಡೆರವರು ಆಗಮಿಸಿದ್ದರು. 42 ಸಹಕಾರಿಗಳಿಂದ 75 ಪ್ರತಿನಿಧಿಗಳು ಭಾಗವಹಿಸಿ, ತರಬೇತಿಯ ಪ್ರಯೋಜನ ಪಡೆದರು.

ಕಾರ್ಯಕ್ರಮವನ್ನು ಬೆಳಗಾವಿ ವಿಭಾಗೀಯ ಅಧಿಕಾರಿ ಶ್ರೀ ಜಿ.ಎಸ್. ಟೋಪಣ್ಣವರ್‌ರವರು ಸ್ವಾಗತಿಸಿ, ಪ್ರಾಸ್ತಾವಿಕ ಭಾಷಣ ಮಾಡಿದರು. ಕಿರಿಯ ಸಹಾಯಕರಾದ ಶ್ರೀ ಗಂಗಾರಾಮ ಕೊಳಾಪ್ಪೆರವರು ವಂದಿಸಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ಅಜಯ ಮಾಲಿಪಾಟೀಲರವರು ನಿರೂಪಿಸಿದರು.

## ಜನಸೇವೆಗೆ ಸಹಕಾರ ಕ್ಷೇತ್ರದಲ್ಲಿ ವಿಫುಲ ಅವಕಾಶ – ಶ್ರೀ ಸಂಗಮೇಶ ಬಬಲೇಶ್ವರ

**ವಿಜಯಪುರ :** ದಿನಾಂಕ 30.06.2017ರಂದು ವಿಜಯಪುರ ಹಾಗೂ ಬಾಗಲಕೋಟ ಜಿಲ್ಲೆಗಳಲ್ಲಿ ಕಳೆದ ಎರಡು ವರ್ಷಗಳಲ್ಲಿ ನೋಂದಣಿಗೊಂಡ ಹೊಸ ಸೌಹಾರ್ದ ಸಹಕಾರಿಗಳಿಗಾಗಿ "ಪ್ರವೇಶ ತರಬೇತಿ"ಯನ್ನು ಹೋಟೆಲ್ ಶ್ರೀ ಶುಭಶ್ರಿ ಸಾಗರ, ವಿಜಯಪುರದಲ್ಲಿ ಏರ್ಪಡಿಸಲಾಗಿತ್ತು.



ಕಾರ್ಯಕ್ರಮದಲ್ಲಿ ಬಸವಶ್ರೀ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಸಂಗಮೇಶ ಬಬಲೇಶ್ವರರವರು ಮಾತನಾಡಿ ಜನ ಸೇವೆ ಮಾಡಲು ಸಹಕಾರ ಕ್ಷೇತ್ರದಲ್ಲಿ ವಿಫುಲ ಅವಕಾಶಗಳು ಇವೆ ಎಂದರು. ಉದ್ಘಾಟನೆಯನ್ನು ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರಾದ ಶ್ರೀ ಎಂ.ಜಿ.ಪಾಟೀಲರವರು ನೆರವೇರಿಸಿ, ಸಹಕಾರಿ ಆಡಳಿತ, ಕಾನೂನು ಹಾಗೂ ವ್ಯವಹಾರಗಳ ಬಗ್ಗೆ ಉಪನ್ಯಾಸ ನೀಡಿದರು. ಅಧ್ಯಕ್ಷತೆ ವಹಿಸಿ, ಮಾತನಾಡಿದ ಶ್ರೀ ಸಿದ್ಧೇಶ್ವರ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಸಿದ್ದರಾಮಪ್ಪ ವಿ. ಉಪ್ಪಿನರವರು ಸಹಕಾರಿ ಸಂಸ್ಥೆಗಳು ಜನಸೇವೆ ಮಾಡುವುದರ ಜೊತೆಗೆ ಸಹಕಾರಿಗಳ ಅಭಿವೃದ್ಧಿ ಮಾಡಬೇಕು ಎಂದರು. 60 ಸಹಕಾರಿಗಳಿಂದ 70 ಪ್ರತಿನಿಧಿಗಳು ಭಾಗವಹಿಸಿ, ತರಬೇತಿಯ ಪ್ರಯೋಜನ ಪಡೆದರು. ಕಾರ್ಯಕ್ರಮವನ್ನು ಬೆಳಗಾವಿ ವಿಭಾಗೀಯ ಅಧಿಕಾರಿ ಶ್ರೀ ಜಿ.ಎಸ್.ಟೋಪಣ್ಣವರ್‌ರವರು ಸ್ವಾಗತಿಸಿದರು. ಕಿರಿಯ ಸಹಾಯಕರಾದ ಶ್ರೀ ಗಂಗಾರಾಮ ಕೊಳಾಪ್ಪೆರವರು ವಂದಿಸಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಬಸವರಾಜ ಎಸ್ ರವರು ನಿರೂಪಿಸಿದರು.

## ಯಶಸ್ವಿನಿ ಯೋಜನೆಯ ಅನುಷ್ಠಾನಕ್ಕಾಗಿ ದೇಣಿಗೆ ನೀಡುವ ಕುರಿತು

ಸಹಕಾರಿಗಳ ಉಪನಿಬಂಧಕರು, ಬೆಳಗಾವಿ ಇವರು ಪತ್ರ ಸಂಖ್ಯೆ:ಡಿಆರ್‌ಎಲ್/ಯಶಸ್ವಿನಿ/6/17–18 ದಿನಾಂಕ 22/05/2017ರ ಮೂಲಕ ಯಶಸ್ವಿನಿ ಯೋಜನೆಯ ಅನುಷ್ಠಾನಕ್ಕಾಗಿ ದೇಣಿಗೆ ನೀಡುವ ಕುರಿತು ಪತ್ರವನ್ನು ನೀಡಿದ್ದು, ಸದರಿ ಪತ್ರದಲ್ಲಿ ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಯೋಜನೆಯಡಿ ಪ್ರತಿ ವರ್ಷ ಹೆಚ್ಚು ಹೆಚ್ಚು ಫಲಾನುಭವಿಗಳು ಪ್ರಯೋಜನ ಪಡೆಯುತ್ತಿದ್ದು, ವಂತಿಗೆ ರೂಪದಲ್ಲಿ ಸಂಗ್ರಹವಾಗುತ್ತಿರುವ ಮೊತ್ತಕ್ಕಿಂತ ಅತೀ ಹೆಚ್ಚಿನ ಮೊತ್ತ ಕ್ಲೇಮ್ ಆಗುತ್ತಿರುವ ಕಾರಣ ಸದರಿ ಯೋಜನೆಯನ್ನು ಇನ್ನೂ ವಿಸ್ತಾರಗೊಳಿಸಲು ಸಂಘ ಸಂಸ್ಥೆಗಳಿಂದ ದೇಣಿಗೆ ಸ್ವೀಕರಿಸಲು ತೀರ್ಮಾನಿಸಿರುತ್ತಾರೆ.

ದೇಣಿಗೆ ನೀಡಿದ ಸಂಘ/ ಸಹಕಾರಿಗಳಿಗೆ ಆದಾಯ ತೆರಿಗೆ ಕಾಯ್ದೆ, 1961ರ ಕಲಂ 80ಜಿ ರನ್ವಯ ತೆರಿಗೆ ವಿನಾಯಿತಿ ಇರುವುದಾಗಿ ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಆಸಕ್ತ ಸಂಘ/ ಸಹಕಾರಿಗಳು ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಯೋಜನೆಗೆ ದೇಣಿಗೆ ನೀಡಬಹುದಾಗಿದೆ. ದೇಣಿಗೆ ನೀಡುವ ಕುರಿತಂತೆ ಹೆಚ್ಚಿನ ಮಾಹಿತಿಗಾಗಿ ಯಶಸ್ವಿನಿ ಟ್ರಸ್ಟ್ / ಸಹಕಾರಿಗಳ ಉಪ ನಿಬಂಧಕರನ್ನು ಸಂಪರ್ಕಿಸುವುದು.

## ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯ ಅವಧಿ ದಿನಾಂಕ : 31 ಆಗಸ್ಟ್ 2017ರವರೆಗೆ ವಿಸ್ತರಣೆ

2017–18ನೇ ಸಾಲಿಗೆ ಯಶಸ್ವಿನಿ ಗ್ರಾಮಾಂತರ ಸಹಕಾರ ರೈತರ ಆರೋಗ್ಯ ರಕ್ಷಣಾ ಯೋಜನೆ ಹಾಗೂ ಯಶಸ್ವಿನಿ ನಗರ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆ ಅಡಿಯಲ್ಲಿ ಸದಸ್ಯರ ನೋಂದಣಿಗೆ ನಿಗದಿಪಡಿಸಿದ್ದ ಗುರಿಗಿಂತ ಕಡಿಮೆ ಸಂಖ್ಯೆಯಲ್ಲಿ ಸದಸ್ಯರ ನೋಂದಣಿಯಾಗಿರುತ್ತದೆ.

ನೋಂದಾವಣೆ ಕಾರ್ಯಕ್ರಮದಲ್ಲಿ ಹೆಚ್ಚಿನ ಪ್ರಗತಿ ಆಗದಿರುವ ಹಿನ್ನೆಲೆಯಲ್ಲಿ ರೈತರಿಗೆ ಹೆಚ್ಚಿನ ಅವಕಾಶ ಒದಗಿಸುವ ಹಿನ್ನೆಲೆಯಲ್ಲಿ ಹಾಗೂ ಸಾಲ ವಿತರಣೆ ಈಗಷ್ಟೇ ಪ್ರಾರಂಭವಾಗಿರುವುದರಿಂದ ಮತ್ತು ನಗರ ಸಹಕಾರಿಗಳಿಗೆ ಹೆಚ್ಚಿನ ಅವಕಾಶ ಒದಗಿಸುವ ಹಿನ್ನೆಲೆಯಲ್ಲಿ ಈ ಎರಡೂ ಯೋಜನೆಯಡಿ ಸದಸ್ಯರ ನೋಂದಾವಣೆ ಅವಧಿಯನ್ನು ದಿನಾಂಕ 31.08.2017ರವರೆಗೆ ವಿಸ್ತರಿಸಲಾಗಿದೆ.

ಯಶಸ್ವಿನಿ ನಗರ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆಯು ಸಂಯುಕ್ತ ಸಹಕಾರಿಯ ಕನಸಾಗಿದ್ದು, ಈ ಯೋಜನೆಯಡಿಯಲ್ಲಿ ನಗರದ ಸೌಹಾರ್ದ ಸಹಕಾರಿಗಳಿಗೆ ವಿಸ್ತರಿಸುವಂತೆ ಸಂಯುಕ್ತ ಸಹಕಾರಿಯು ಸಾಕಷ್ಟು ಪ್ರಯತ್ನ ನಡೆಸಿರುತ್ತದೆ. ಈ ಹಿನ್ನೆಲೆಯಲ್ಲಿ ಯಶಸ್ವಿನಿ ನಗರ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆಯಡಿಯಲ್ಲಿ ಹೆಚ್ಚಿನ ಸದಸ್ಯರನ್ನು ನೋಂದಾಯಿಸುವ ಮೂಲಕ ಈ ಯೋಜನೆಯ ಸದುಪಯೋಗ ಪಡಿಸಿಕೊಳ್ಳಲು ಹಾಗೂ ಈ ಎರಡೂ ಯೋಜನೆಯಡಿಯಲ್ಲಿ ಸೌಹಾರ್ದ ಸಹಕಾರಿಗಳು ಸಕ್ರಿಯವಾಗಿ ಭಾಗವಹಿಸಿ, ಸದಸ್ಯರನ್ನು ಹೆಚ್ಚಿನ ಸಂಖ್ಯೆಯಲ್ಲಿ ನೋಂದಾಯಿಸುವ ಮೂಲಕ ಮಹತ್ವದ ಯೋಜನೆಯಲ್ಲಿ ಪಾಲುದಾರರಾಗಲು ತಿಳಿಸಿದೆ.

## ಸರಸ್ವತಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ "ಜಪಾನ್ ತಂತ್ರಜ್ಞಾನದ ಮೂಲಕ ಪರಿಸರ ಕ್ರಾಂತಿ" ಉಪನ್ಯಾಸ ಕಾರ್ಯಕ್ರಮ

**ಪುತ್ತೂರು** : ಪುತ್ತೂರಿನ ಸಹಕಾರಿ ಸಂಸ್ಥೆಯಾದ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಇದರ ಸಹಸಂಸ್ಥೆಯಾದ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ (ರಿ.), ಪುತ್ತೂರು ಇದರ ವತಿಯಿಂದ ಸಾಮಾಜಿಕ ಜಾಗೃತಿಯ ಅಡಿಯಲ್ಲಿ ಜಪಾನ್ ತಂತ್ರಜ್ಞಾನದ ಮೂಲಕ ವಿಶಿಷ್ಟ ರೀತಿಯಲ್ಲಿ ಮರಗಿಡಗಳನ್ನು ಬೆಳೆಸುವ ಕುರಿತು ಉಪನ್ಯಾಸ ಕಾರ್ಯಕ್ರಮವು ಶ್ರೀ ಸರಸ್ವತಿ ಸಹಕಾರಿಯ ತರಬೇತಿ ಕೊಠಡಿಯಲ್ಲಿ ನಡೆಯಿತು.

ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಗುಜರಾತಿನ ಖ್ಯಾತ ಉದ್ಯಮಿಗಳಾದ ಶ್ರೀ ಆರ್.ಕೆ. ನಾಯರ್‌ರವರು ಜಪಾನ್ ಟೆಕ್ನಾಲಜಿಯ ಮೂಲಕ ಗಿಡಮರಗಳನ್ನು ಅತ್ಯಂತ ಶೀಘ್ರವಾಗಿ ಮತ್ತು ಸಮೃದ್ಧವಾಗಿ ಬೆಳೆಸುವ ಸುಲಭ ವಿಧಾನಗಳನ್ನು ವಿವರಿಸಿದರು. ಶ್ರೀಯುತರನ್ನು ಟ್ರಸ್ಟ್‌ನ ವತಿಯಿಂದ ಅಭಿನಂದಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ, ಮಾತನಾಡಿದ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿಯಾಗಿರುವ ಶ್ರೀ ಎಸ್. ಆರ್.ಸತೀಶ್ಚಂದ್ರರವರು ನಮ್ಮ ದೇಶವು ಭವ್ಯ ಪರಂಪರೆಯನ್ನು ಹೊಂದಿದ್ದು, ಪ್ರತಿಯೊಂದು ಕ್ಷೇತ್ರದಲ್ಲೂ ಆದರ್ಶಪ್ರಾಯವಾಗಿದೆ. ವಿದೇಶಿಗರು ಭಾರತ ದೇಶದ ಸಾಹಿತ್ಯ, ಸಂಸ್ಕೃತಿ, ಪರಂಪರೆಯನ್ನು ಅಧ್ಯಯನ ಮಾಡುವುದರೊಂದಿಗೆ ಭಾರತದ ಶ್ರೇಷ್ಠತೆಯನ್ನು ಸಾರುತ್ತಿದ್ದಾರೆ. ಭಾರತವು ಜಗತ್ತಿಗೆ ನಾಯಕನಾಗಿ ತನ್ನ ಸಾಮರ್ಥ್ಯವನ್ನು ಮತ್ತೊಮ್ಮೆ ಸಾಬೀತು ಪಡಿಸುತ್ತಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ನಿರ್ದೇಶಕರು, ಸಿಬ್ಬಂದಿಗಳು, ಶ್ರೀ ಸರಸ್ವತಿ ಮಹಿಳಾ ಮಂಡಳಿಯ ಸದಸ್ಯರು, ಪುತ್ತೂರು ಸ್ವಚ್ಛ ಭಾರತ ಕಾರ್ಯಕ್ರಮದ ಸಂಚಾಲಕರಾದ ಶ್ರೀಕೃಷ್ಣ ಉಪಾಧ್ಯಾಯ, ಸಂತ ಫಿಲೋಮಿನಾ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿ, ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಂಡರು.

ಜೂನ್ 02 ರಂದು ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್‌ನ ವತಿಯಿಂದ ಸಾಮಾಜಿಕ ಜಾಗೃತಿಯ ಅಡಿಯಲ್ಲಿ ಕಡಬದ ವಿದ್ಯಾನಗರದಲ್ಲಿರುವ ವಿವೇಕಾನಂದ ವಿದ್ಯಾವರ್ಧಕ ಸಂಘದ ಸಹ ಸಂಸ್ಥೆಯಾದ "ಶ್ರೀ ಭಾರತಿ ಶಿಶುಮಂದಿರ" ಇಲ್ಲಿಗೆ ವಾಟರ್ ಫಿಲ್ಟರ್ ಅನ್ನು ಕೊಡುಗೆಯಾಗಿ ನೀಡಲಾಯಿತು.

## ಹಂಸ ಚೈತನ್ಯ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಉಡುಪಿ ಇವರಿಂದ ಕೊಳಗೇರಿ ನಿವಾಸಿಗಳಿಗೆ ಸೌರದೀಪ ಸೌಲಭ್ಯ

Hamsa Chaitanya Cooperative Society designed a loan product using a risk guarantee mechanism and flexible collection model based on cash flow and 78 residents now have solar lighting systems.

Sudheesh Nayak, Founder and Chairman of Hamsa Chaitanya, about the project: "It has made us more open to lending to vulnerable customer segments we may have overlooked earlier."

## ಆದಾಯ ತೆರಿಗೆ ಇತ್ತೀಚಿನ ತಿದ್ದುಪಡಿ ಮತ್ತು ನಗದು ವ್ಯವಹಾರದ ಕುರಿತು ತರಬೇತಿ ಕಾರ್ಯಾಗಾರ



**ಉಡುಪಿ :** ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಉಡುಪಿ ಮತ್ತು ಕುಬ್ಸ್ ಸೇಫ್ ಮತ್ತು ಲಾಕರ್ ಪ್ರೈ ಲಿ., ವರಗಡಂ, ಚೆನ್ನೈ ಇವರ ಜಂಟಿ ಆಶ್ರಯದಲ್ಲಿ ಜಿಲ್ಲಾ ಸೌಹಾರ್ದ ಸಹಕಾರಿಗಳಿಗೆ "ಆದಾಯ ತೆರಿಗೆ ಇತ್ತೀಚಿನ ತಿದ್ದುಪಡಿ ಮತ್ತು ನಗದು ವ್ಯವಹಾರ"ದ ಕುರಿತು ತರಬೇತಿ ಕಾರ್ಯಾಗಾರವು ದಿನಾಂಕ 03.06.2017ರಂದು ನೈವೇದ್ಯ ಅನುಗ್ರಹ ಸಭಾಂಗಣದಲ್ಲಿ ಜರುಗಿತು.

ತರಬೇತಿಯ ಉದ್ಘಾಟನೆಯನ್ನು ಸಾಗರದ ಚಾರ್ಟೆರ್ಡ್ ಅಕೌಂಟೆಂಟ್ ಶ್ರೀ ಬಿ.ವಿ.ರವೀಂದ್ರನಾಥ ಇವರು ನೆರವೇರಿಸಿದರು. ಅಧ್ಯಕ್ಷತೆ ವಹಿಸಿ, ಮಾತನಾಡಿದ ಶ್ರೀ ಮಂಜುನಾಥ.ಎಸ್.ಕೆ.ರವರು ಆದಾಯ ತೆರಿಗೆಯ ಇತ್ತೀಚಿನ ತಿದ್ದುಪಡಿಯು ಸಹಕಾರಿಗೆ ಪೂರಕವಾಗಿದ್ದು, ಸಹಕಾರಿಗಳು ಪಾರದರ್ಶಕದಿಂದ ಬಲಿಷ್ಠಗೊಳ್ಳಲಿದೆ ಎಂದು ತಿಳಿಸಿದರು.

ಮುಖ್ಯ ಅತಿಥಿಯಾಗಿ ಕುಬ್ಸ್ ಸೇಫ್ ಮತ್ತು ಲಾಕರ್ ಪ್ರೈ ಲಿ., ಚೆನ್ನೈ ಇದರ ರೀಜಿನಲ್ ಮ್ಯಾನೇಜರ್ ಶ್ರೀ ಶ್ರೀನಿವಾಸ್ ಭಟ್ ಇವರು ಆಗಮಿಸಿದ್ದರು. ತರಬೇತಿಯಲ್ಲಿ 100ಕ್ಕೂ ಅಧಿಕ ಸಹಕಾರಿಗಳು ಭಾಗವಹಿಸಿ, ಪ್ರಯೋಜನ ಪಡೆದರು.

## ಸಹಕಾರಿಯ ಪ್ರಾರಂಭೋತ್ಸವ



**ಹೊಸಪೇಟೆ :** ಪ್ರಗತಿಕೃಷ್ಣ ಸೌಹಾರ್ದ ಪತ್ತಿನ ಸಹಕಾರಿ ನಿ., ಹೊಸಪೇಟೆ ಸಹಕಾರಿಯ ಪ್ರಾರಂಭೋತ್ಸವವನ್ನು ಸಹಕಾರಿಯ ಕಲಬುರಗಿ ಪ್ರಾಂತ್ಯದ ಸಹಕಾರಿಗಳ ಜಂಟಿ ನಿಬಂಧಕರಾದ ಶ್ರೀ ಐ.ಎಸ್.ಗಿರಡ್ಡಿಯವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಬಿ.ಡಿ.ಸಿ.ಸಿ. ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾದ ಶ್ರೀ ಜಿ.ಕುಬೇರಪ್ಪ, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಲ್.ಎಸ್.ಆನಂದ್ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಸಹಕಾರಿಗಳ ಸಹಾಯಕ ನಿಬಂಧಕರಾದ ಶ್ರೀ ಸಾಳೇರು ತಿಮ್ಮಣ್ಣನವರು ಆಗಮಿಸಿದ್ದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಕೃಷ್ಣ ಗುಡಿಯವರು ಅಧ್ಯಕ್ಷತೆ ವಹಿಸಿದ್ದರು.



## ಸಹಕಾರಿಯ ಉದ್ಘಾಟನೆ

**ದಾವಣಗೆರೆ :** ದವನ್ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ನಗರದ ಡೆಂಟಲ್ ಕಾಲೇಜು ಸಮೀಪದಲ್ಲಿ ನೂತನವಾಗಿ ಪ್ರಾರಂಭವಾದ ಸಹಕಾರಿಯನ್ನು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಶಾಮನೂರು ಮಲ್ಲಿಕಾರ್ಜುನ್ ಅವರ ಅನುಪಸ್ಥಿತಿಯಲ್ಲಿ ಅವರ ಧರ್ಮ ಪತ್ನಿ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್‌ರವರು ಉದ್ಘಾಟಿಸಿದರು. ಸಮಾರಂಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ವೀರೇಶ್ ಪಟೇಲ್, ಉಪಾಧ್ಯಕ್ಷರಾದ ಡಾ. ಅಂಜು.ಜಿ.ಎಸ್, ಪ್ರಧಾನ ವ್ಯವಸ್ಥಾಪಕರಾದ ಶ್ರೀ ಕೆ.ಶಿವಪ್ಪ, ಜಂಟಿ ಕಾರ್ಯದರ್ಶಿ ಶ್ರೀಮತಿ ವರ್ಷಾ ಶಮಂತ್, ಸಹಕಾರಿಯ ನಿರ್ದೇಶಕರುಗಳು ಹಾಗೂ ಸಿಬ್ಬಂದಿಗಳು, ಗಣ್ಯವ್ಯಕ್ತಿಗಳು ಮತ್ತು ಸಹಕಾರಿಯ ಹಿತೈಶಿಗಳು ಭಾಗವಹಿಸಿದ್ದರು.

## ಇ-ಸ್ಟ್ಯಾಂಪಿಂಗ್ ಕೇಂದ್ರದ ಉದ್ಘಾಟನೆ



**ಹೂವಿನಹಡಗಲಿ :** ನಿತ್ಯಶ್ರೀ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಸಹಕಾರಿಯ ಇ-ಸ್ಟ್ಯಾಂಪಿಂಗ್ ಕೇಂದ್ರವನ್ನು ಹೂವಿನಹಡಗಲಿಯಲ್ಲಿ ತಾಲ್ಲೂಕು ತಹಶೀಲ್ದಾರರಾದ ಶ್ರೀ ಕೆ.ರಾಘವೇಂದ್ರರಾವ್‌ರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಸಂತೋಷ.ಕೆ, ಗೌರವಾಧ್ಯಕ್ಷರಾದ ಡಾ. ಬಿ.ಟಿ.ಫಣಿರಾಜ, ಪುರಸಭೆ ಮುಖ್ಯಧಿಕಾರಿಯಾದ ಶ್ರೀ ಪ್ರೇಮ್ ಚಾರ್ಲ್ಸ್ ಹಾಗೂ ಸಂಯುಕ್ತ ಕರ್ನಾಟಕ ಪತ್ರಿಕಾ ವರದಿಗಾರರಾದ ಶ್ರೀ ನಿಂಗಪ್ಪ ಎಂ ಉಪಸ್ಥಿತರಿದ್ದರು.

## ಶಾಖೆಯ ಉದ್ಘಾಟನೆ



ಶ್ರೀ ನೀಲಗಿರಿಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಬಾಗಲಕೋಟ ಸಹಕಾರಿಯ ಶಾಖೆಯ ಉದ್ಘಾಟನೆ.



ಶಿವಗಂಗೇಶ್ವರ ಸೌಹಾರ್ದ ಸಹಕಾರಿ ನಿ., ಗೌರಿಬಿದನೂರು ಸಹಕಾರಿಯ ಶಾಖೆಯ ಉದ್ಘಾಟನೆ

## ಸನ್ಮಾನ ಸಮಾರಂಭ



**ಹರಪನಹಳ್ಳಿ :** ಷ॥ಬ್ರ॥ ಶ್ರೀ ಚಂದ್ರಮೌಳೀಶ್ವರ ಶಿವಾಚಾರ್ಯ ಮಹಾಸ್ವಾಮೀಜಿ ಪ್ರತಿಷ್ಠಾನ ಅಭಿವೃದ್ಧಿ ಸೌಹಾರ್ದ ಪತ್ತಿನ ಸಹಕಾರಿ ನಿ., ಹರಪನಹಳ್ಳಿ ಸಹಕಾರಿಯ ಸಂಸ್ಥಾಪನಾ ಆಡಳಿತ ಮಂಡಲಿಯ ಅಧ್ಯಕ್ಷರಿಗೆ ಹಾಗೂ ನಿರ್ದೇಶಕರುಗಳಿಗೆ ಹಾಲಿ ಚುನಾಯಿತ ಆಡಳಿತ ಮಂಡಲಿಯು ಕಾರ್ಯಕಾರಣಿ ಸಭೆಯಲ್ಲಿ ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವು ಶ್ರೀ ತೆಗ್ಗಿನಮಠದ ಪಟ್ಟಾಧ್ಯಕ್ಷರು ಹಾಗೂ ಟಿ.ಎಂ.ಎ.ಇ. ಸಂಸ್ಥೆಯ ಅಧ್ಯಕ್ಷರಾದ ಪರಮ ಪೂಜ್ಯ ಶ್ರೀ ಷ॥ಬ್ರ॥ಶ್ರೀ ವರಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ನಡೆಯಿತು. ಸಹಕಾರಿಯ ಅಧ್ಯಕ್ಷರಾದ ಶ್ರೀ ತೆಗ್ಗಿನಮಠದ ಚನ್ನವೀರಸ್ವಾಮಿ (ಅಜ್ಜಣ್ಣ) ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ಟಿ.ಎಂ.ಎ.ಇ. ಸಂಸ್ಥೆಯ ಕಾರ್ಯದರ್ಶಿಗಳಾದ ವೇದಮೂರ್ತಿ ಶ್ರೀ ಟಿ.ಎಂ.ಚಂದ್ರಶೇಖರಯ್ಯ ಮತ್ತು ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಟಿ.ಎಂ.ಆನಂದಯ್ಯನವರುಗಳು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.




## ಬೀಳ್ಕೊಡುಗೆ ಸಮಾರಂಭ

**ಬೆಲ್ಲದ ಬಾಗೇವಾಡಿ :** ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕಿನ ಸಿಬ್ಬಂದಿಯಾದ ಶ್ರೀ ನಾರಾಯಣ ಕೃಷ್ಣಾ ಗೋಂಧಳಿ ಇವರು ವಯೋ ನಿಮಿತ್ಯ ನಿವೃತ್ತರಾಗುತ್ತಿರುವ ಹಿನ್ನೆಲೆಯಲ್ಲಿ ಬ್ಯಾಂಕಿನ ಆಡಳಿತ ಮಂಡಲಿ, ಸಿಬ್ಬಂದಿ ವರ್ಗ ಮತ್ತು ಸ್ಥಳೀಯ ಸಂಘ ಸಂಸ್ಥೆಗಳ ಪರವಾಗಿ ಬೀಳ್ಕೊಡುಗೆ ಸಮಾರಂಭವನ್ನು ಬ್ಯಾಂಕಿನ ದಿ. ವಿಶ್ವನಾಥ ಮ. ಕತ್ತಿ ಸಭಾ ಭವನದಲ್ಲಿ ಏರ್ಪಡಿಸಲಾಗಿತ್ತು.

## ಶಿವಮೊಗ್ಗದ ಶಾರದಾ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 12ನೇ ವಾರ್ಷಿಕ ಸಾಮಾನ್ಯ ಸಭೆ



**ಶಿವಮೊಗ್ಗ :** ಶಾರದಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ ಸಹಕಾರಿಯ 2016-17ನೇ ಸಾಲಿನ 12ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಶಿವಶಂಕರ್.ಹೆಚ್.ಎಸ್. ಇವರ ಅಧ್ಯಕ್ಷತೆಯಲ್ಲಿ ದಿನಾಂಕ 25.06.2017ರಂದು ಜರುಗಿದ್ದು, ಸದಸ್ಯರಿಗೆ ಶೇ.15ರಂತೆ ಲಾಭಾಂಶ (ಡಿವಿಡೆಂಡ್) ಘೋಷಣೆಯಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಸಹಕಾರಿಯು ರೂ.83,82,162/-ಗಳ ಒಟ್ಟು ಲಾಭ ಗಳಿಸಿ, ಆದಾಯ ತೆರಿಗೆ ಪಾವತಿ ನಂತರ ನಿವ್ವಳ ಲಾಭ ರೂ.75,00,797/-ಗಳಾಗಿರುತ್ತದೆ.

## ನಿಮ್ಮ ಪ್ರಶ್ನೆ




## ನಮ್ಮ ಉತ್ತರ

**ಶ್ರೀಕಾಂತ ಬರುವೆ**
ಸಹಪ್ರಧಾನ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ.

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ

– ಸಂಪಾದಕರು

**ಜಗದೀಶ ಜೋಶಿ, ಹುಬ್ಬಳ್ಳಿ.**

1. **ಸಹಕಾರಿಗಳ ಲೆಕ್ಕಪರಿಶೋಧನಾ ನಿರ್ದೇಶಕರ ಕಛೇರಿಯಿಂದ ಹೊರಡಿಸಿದ ಸುತ್ತೋಲೆ ಸಂಖ್ಯೆ: ಎಡಿಎಫ್/ಎಡಿಸಿ/51–2012–13 ದಿನಾಂಕ : 27 ನವೆಂಬರ್ 2013ರಲ್ಲಿಯ ಮಾರ್ಗಸೂಚಿಯಂತೆ 2016–17ನೇ ಸಾಲಿನ ಲೆಕ್ಕಪರಿಶೋಧಕರ ಸಂಭಾವನೆ ಪಡೆಯಬೇಕೇ? ಅಥವಾ ಈಗಾಗಲೇ ಸಹಕಾರಿಯಿಂದ ನಿಗದಿಪಡಿಸಿದಂತೆ ಸಂಭಾವನೆ ಪಡೆಯಬೇಕೇ?**

**ಉತ್ತರ :** ಸಹಕಾರ ಲೆಕ್ಕಪರಿಶೋಧನಾ ಇಲಾಖೆಯು ದಿನಾಂಕ 27 ನವೆಂಬರ್ 2013ರಂದು ನೀಡಿರುವ ಮಾರ್ಗಸೂಚಿಯು ಕಡ್ಡಾಯ ಸ್ವರೂಪದ್ದಾಗಿರಲಿಲ್ಲ. ಆದರೆ, ಸಹಕಾರ ಲೆಕ್ಕಪರಿಶೋಧನಾ ಇಲಾಖೆಯು ದಿನಾಂಕ 16 ಮಾರ್ಚ್ 2017ರ ಪತ್ರದ ಮೂಲಕ ಸ್ಪಷ್ಟವಾಗುವುದೇನೆಂದರೆ ಸಹಕಾರಿಗಳು ಇನ್ನು ಮುಂದೆ ಲೆಕ್ಕಪರಿಶೋಧಕರ ಸಂಭಾವನೆಯನ್ನು ಸಂಧಾನದ ಮೂಲಕ ನಿಗದಿಪಡಿಸಿಕೊಳ್ಳುವ ಹಕ್ಕು ಇರುವುದಿಲ್ಲ ಮತ್ತು ದಿನಾಂಕ 27 ನವೆಂಬರ್ 2013ರಂದು ನೀಡಿದ ಮಾರ್ಗಸೂಚಿಯನ್ವಯ ಪಾವತಿಸಬೇಕಾಗುತ್ತದೆ. ಈ ಸುತ್ತೋಲೆಯು 2017–18ರ ಲೆಕ್ಕ ಪರಿಶೋಧಕರ ಸಂಭಾವನೆಗೆ ಅನ್ವಯವಾಗುತ್ತದೆ.

2. **ಪಡೆದ ಸಂಭಾವನೆ ಮೇಲಿನ ಸೇವಾ ಶುಲ್ಕ ಯಾರು ಭರಿಸಬೇಕು? ಈ ಜವಾಬ್ದಾರಿ ಯಾರದು?**

**ಉತ್ತರ :** ಲೆಕ್ಕಪರಿಶೋಧಕರಿಗೆ ಪಾವತಿಸುವ ಮೇಲಿನ ಸಂಭಾವನೆ/ ಗೌರವ ಧನದ ಮೇಲಿನ ಸೇವಾ ಶುಲ್ಕವನ್ನು ಸಹಕಾರಿಯು ಭರಿಸಬೇಕಾಗುತ್ತದೆ. ಆದರೆ, ಒಂದು ವೇಳೆ ಸಹಕಾರಿಯು ಈಗಾಗಲೇ ಜಿಎಸ್‌ಟಿ ಅಡಿ ನೋಂದಣಿ ಹೊಂದಿದ್ದು, ಸೇವಾ ತೆರಿಗೆಯನ್ನು ಪಾವತಿಸಿದ್ದರೆ ಇನ್‌ಪುಟ್ ಕ್ರೆಡಿಟ್ ಲಾಭವನ್ನು ಪಡೆದುಕೊಳ್ಳಬಹುದಾಗಿರುತ್ತದೆ.

3. **2015–16ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಮಾದರಿಯನ್ನು ಅನುಸರಿಸಬೇಕೇ? ಅಥವಾ ನವೀಕರಣವಾಗಿದ್ದರೆ ಯಾವ ವರ್ಷದಿಂದ ಪ್ರಾರಂಭಿಸಬೇಕು? ಈಗಾಗಲೇ ಈ ವರ್ಷದ ಲೆಕ್ಕಪರಿಶೋಧನಾ ವರದಿಯನ್ನು ಹಳೆಯ ನಮೂನೆಯಲ್ಲಿ ಮುಗಿಸಿ ಕಳುಹಿಸಿದ್ದಲ್ಲಿ, ಹಳೆಯ ನಮೂನೆಯ ವರದಿಯನ್ನು ಅಂಗೀಕರಿಸಬಹುದೇ?**

**ಉತ್ತರ :** ಸಹಕಾರ ಲೆಕ್ಕಪರಿಶೋಧನಾ ಇಲಾಖೆ ಸೌಹಾರ್ದ ಸಹಕಾರಿಗಳಿಗೆ ಅನ್ವಯವಾಗುವಂತೆ ಲೆಕ್ಕಪರಿಶೋಧನಾ ವರದಿ ನಮೂನೆಯ 'ಸಹಕಾರ ದರ್ಪಣ' ಅಂತರ್ಜಾಲದಲ್ಲಿ ಪ್ರಕಟಿಸಿದ್ದು, 2016–17ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಸಹಕಾರ ಲೆಕ್ಕಪರಿಶೋಧನಾ ಇಲಾಖೆಯು ನಿರ್ದಿಷ್ಟಪಡಿಸಿದ ಮಾದರಿಯಲ್ಲೇ ವರದಿಯನ್ನು ತಯಾರಿಸತಕ್ಕದ್ದು.

4. **ಉಪವಿಧಿಯಲ್ಲಿ ಇಲ್ಲವಾದರೂ ಲಾಭದಲ್ಲಿನ ಹಣವನ್ನು ಸಹಕಾರಿಯ ಭವಿಷ್ಯಕ್ಕಾಗಿ ಹಾಗೂ ಭದ್ರತೆಗಾಗಿ ಕೆಲವು ಮೊತ್ತ ಬೂಡ ಸಾಲದ ನಿಧಿಗೆ ವರ್ಗಾಯಿಸಿ, ಲಾಭದ ಪ್ರಮಾಣ ಕಡಿಮೆ ಮಾಡಬಹುದೇ?**

**ಉತ್ತರ :** ಸಹಕಾರಿಯು ತಾನು ಗಳಿಸುವ ಲಾಭವನ್ನು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 10 (2) (xxi) ರಲ್ಲಿ ತಿಳಿಸಿರುವ ಶಾಸನಬದ್ಧ ನಿಧಿಗಳಿಗೆ ಮೊತ್ತವನ್ನು ವಿಲೇವಾರಿ ಮಾಡತಕ್ಕದ್ದು, ಶಾಸನಬದ್ಧ ವಿಲೇವಾರಿಯ ನಂತರ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದ ವಿಶೇಷ ನಿಧಿಗಳಿಗೆ ಸಾಮಾನ್ಯ ಸಭೆಯು ಅನುಮೋದಿಸಿದ ಆದರೆ, ಉಪವಿಧಿಯಲ್ಲಿ ನಿರ್ದಿಷ್ಟ ಪಡಿಸಿದ ಗರಿಷ್ಠ ಅಂಶಕ್ಕೆ ಹೆಚ್ಚಿಲ್ಲದಷ್ಟು ಮೊತ್ತವನ್ನು ವರ್ಗಾಯಿಸಬಹುದಾಗಿದೆ. ಉಪವಿಧಿಯಲ್ಲಿ ನಿರ್ದಿಷ್ಟಪಡಿಸದ ನಿಧಿಗೆ ಲಾಭಾಂಶದ ಯಾವುದೇ ಮೊತ್ತವನ್ನು ವರ್ಗಾಯಿಸುವಂತಿಲ್ಲ.

## ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆ :

### ಶ್ರೀ ವಾಸವಾಂಬ ಪತ್ತಿನ ಸೌಹಾರ್ದ ಸಹಕಾರಿ ನಿ., ಪಾವಗಡ


ಶ್ರೀ ಸಿ.ಕೆ. ವಿಶ್ವಮೋಹನ್ ಗುಪ್ತ
ಅಧ್ಯಕ್ಷರು


ಶ್ರೀ ಧನಪಾಲ್ ಕೆ.ಎಸ್.
ಉಪಾಧ್ಯಕ್ಷರು

### ದಿ. ಲಕ್ಷ್ಮೀಬಾಯಿ ಕುಂಬಾರ ಮಹಿಳಾ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಚಿಂಚಣಿ


ಶ್ರೀಮತಿ ಸುಮಿತ್ರಾ ಶ್ರೀಪಾಲ ಕುಂಬಾರ, ಅಧ್ಯಕ್ಷರು


ಶ್ರೀಮತಿ ನಾಗವೇಣಿ ಮಲ್ಲಪ್ಪಾ ಮುನ್ನೋಳಿ, ಉಪಾಧ್ಯಕ್ಷರು

### ಶ್ರೀ ತ್ಯಾಗರಾಜನಗರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ತ್ಯಾಗರಾಜನಗರ


ಶ್ರೀ ಟಿ.ಕೃಷ್ಣ
ಅಧ್ಯಕ್ಷರು


ಶ್ರೀ ಸಿ.ದೊಡ್ಡನರಸಯ್ಯ
ಉಪಾಧ್ಯಕ್ಷರು

# ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ನಿರ್ವಹಣೆ ಸೌಹಾರ್ದ ಸಹಕಾರಿಗಳ ಜವಾಬ್ದಾರಿ

ಶ್ರೀಕಾಂತ ಬರುವೆ & ಶ್ರೀಮತಿ ಆರ್ ಶೋಭಾ, ಸಹ ಪ್ರಧಾನ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ.

ದೇಶದ ಅರ್ಥ ವ್ಯವಸ್ಥೆಯ ಚಿತ್ರಣವನ್ನೇ ಅಮೂಲಾಗ್ರವಾಗಿ ಬದಲಿಸಲಿರುವ ಒಂದು ದೇಶ ಒಂದೇ ತೆರಿಗೆ ವ್ಯವಸ್ಥೆಯ ಹಿನ್ನೆಲೆಯಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಜುಲೈ 01 ರಿಂದ ಜಾರಿಗೆ ಬಂದಿದೆ. ದೇಶವನ್ನು ಏಕರೂಪದ ಮಾರುಕಟ್ಟೆಯನ್ನಾಗಿಸುವ ಬಹು ನಿರೀಕ್ಷಿತ ಜಿಎಸ್‌ಟಿ ಕಳೆದ ಒಂದು ದಶಕದಿಂದಲೂ ಚರ್ಚೆಯ ವಿಷಯವಾಗಿದೆ. ಜಿಎಸ್‌ಟಿ ಎಂದರೆ ಸರಕು ಮತ್ತು ಸೇವೆಗಳ ಬಳಕೆಯ ಮೇಲೆ ಗುರಿ-ಆಧಾರಿತ ತೆರಿಗೆ ವ್ಯವಸ್ಥೆ. ಸದ್ಯಕ್ಕೆ ಜಾರಿಯಲ್ಲಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ತೆರಿಗೆಗಳನ್ನೆಲ್ಲಾ ಒಂದೇ ವ್ಯವಸ್ಥೆಯಲ್ಲಿ ವಿಲೀನಗೊಳಿಸುವ ಹೊಸ ತೆರಿಗೆ ವ್ಯವಸ್ಥೆ ಇದಾಗಿದೆ. ಸರಕಿನ ತಯಾರಿಕಾ ಹಂತದಿಂದ ಪ್ರಾರಂಭಿಸಿ ಅಂತಿಮ ಬಳಕೆಯ ಎಲ್ಲಾ ಹಂತಗಳಲ್ಲಿ ಈ ತೆರಿಗೆಯನ್ನು ವಿಧಿಸಲಾಗುವುದು. ಹಿಂದಿನ ಹಂತದಲ್ಲಿ ನೀಡಿದ ತೆರಿಗೆಯನ್ನು ಮುಂದಿನ ಹಂತದಲ್ಲಿ ಮನ್ನಾ ಮಾಡಲಾಗುವುದು.

ಪ್ರಸ್ತುತ ಕೇಂದ್ರ ಸರ್ಕಾರ ವಿಧಿಸುತ್ತಿರುವ ಮತ್ತು ಸಂಗ್ರಹಿಸುತ್ತಿರುವ ಈ ಕೆಳಕಂಡ ಪ್ರಮುಖ ತೆರಿಗೆಗಳ ಬದಲಾಗಿ ಸರಕು ಮತ್ತು ಸೇವಾ ತೆರಿಗೆಯನ್ನು ವಿಧಿಸಲಾಗುತ್ತಿದೆ.

1. ಕೇಂದ್ರ ಅಬಕಾರಿ ಸುಂಕ
2. ಮೌಲ್ಯವರ್ಧಿತ ತೆರಿಗೆ
3. ಕಸ್ಟಂ ಸುಂಕ
4. ಮನೋರಂಜನಾ ತೆರಿಗೆ
5. ಸೆಕ್ಯೂರಿಟಿ ಟ್ರಾನ್ಸಾಸಕ್ಷನ್ ಟ್ಯಾಕ್ಸ್
6. ಡಿವಿಡೆಂಡ್ ಡಿಸ್ಟ್ರಿಬ್ಯೂಷನ್ ಟ್ಯಾಕ್ಸ್
7. ಅಬಕಾರಿ ಸುಂಕಗಳು (ಔಷಧಿ ಹಾಗೂ ಪ್ರಸಾದನ ವಸ್ತುಗಳು)
8. ಹೆಚ್ಚುವರಿ ಅಬಕಾರಿ ಸುಂಕಗಳು (ವಿಶೇಷ ಪ್ರಾಮುಖ್ಯತೆಯ ಸರಕುಗಳು)
9. ಹೆಚ್ಚುವರಿ ಅಬಕಾರಿ ಸುಂಕಗಳು (ಜವಳಿ ಮತ್ತು ಜವಳಿ ಉತ್ಪನ್ನಗಳು)
10. ಹೆಚ್ಚುವರಿ ಅಬಕಾರಿ ಸುಂಕಗಳು (ಸಿವಿಡಿ ಎಂದು ಕರೆಯಲ್ಪಡುವ)
11. ವಿಶೇಷ ಹೆಚ್ಚುವರಿ ಅಬಕಾರಿ ಸುಂಕಗಳು (ಎಸ್‌ಎಡಿ ಎಂದು ಕರೆಯಲ್ಪಡುವ)
12. ಸೇವಾ ತೆರಿಗೆ
13. ಸರಕು ಹಾಗೂ ಸೇವೆಗಳ ಪೂರೈಕೆಗೆ ಸಂಬಂಧಿಸಿದ ಕೇಂದ್ರ ವಿಧಿಸುತ್ತಿರುವ ಸುಂಕಗಳು ಹಾಗೂ ಸರ್ಚಾರ್ಜುಗಳು.

ಸದರಿ ಸರಕು ಮತ್ತು ಸೇವೆಗಳ ತೆರಿಗೆ (ಜಿಎಸ್‌ಟಿ) ದರಗಳನ್ನು ನಾಲ್ಕು ಹಂತದಲ್ಲಿ ಅಂದರೆ 5%, 12%, 18% ಮತ್ತು 28% ರಂತೆ ನಿಗದಿಪಡಿಸಲಾಗಿದೆ. ಜಿಎಸ್‌ಟಿಯು ಪ್ರಸ್ತುತ ದೇಶದ ಸಹಕಾರ ಕ್ಷೇತ್ರಕ್ಕೂ ಅನ್ವಯಿಸುತ್ತದೆ.

**ಸೌಹಾರ್ದ ಸಹಕಾರಿಗಳಿಗೆ ಜಿಎಸ್‌ಟಿ ಅನ್ವಯಿಸುವಿಕೆ :** ದಿನಾಂಕ 01 ಜುಲೈ 2017 ರಿಂದ ಜಾರಿಗೊಂಡಿರುವ ಸರಕು ಮತ್ತು ಸೇವಾ ತೆರಿಗೆಯು ಸೌಹಾರ್ದ ಸಹಕಾರಿಗಳಿಗೂ ಅನ್ವಯಿಸುತ್ತದೆ. ಸೌಹಾರ್ದ ಸಹಕಾರಿಗಳಿಗೆ ಅದು ಹೇಗೆ ಎಂಬುದನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

ಸೌಹಾರ್ದ ಸಹಕಾರಿಗಳು ಕಾನೂನಿನ ಕಣ್ಣಿನಲ್ಲಿ ಕಾನೂನುಬದ್ಧ ವ್ಯಕ್ತಿತ್ವವನ್ನು ಹೊಂದಿರುವ ಸಂಸ್ಥಾರೂಪದ ವ್ಯಕ್ತಿಗಳಾಗಿರುತ್ತವೆ.

**ಸರಕು ಮತ್ತು ಸೇವಾ ತೆರಿಗೆ ಅಧಿನಿಯಮ, 2017ರ ಕಲಂ 2 (84) ರನ್ವಯ 'ವ್ಯಕ್ತಿ' ಶಬ್ಧದ ವ್ಯಾಖ್ಯಾನ ಈ ಕೆಳಕಂಡಂತಿದೆ;**

'ವ್ಯಕ್ತಿ' ಎಂದರೆ - (ಎ) ವೈಯಕ್ತಿಕ ವ್ಯಕ್ತಿ

(ಬಿ) ಹಿಂದೂ ಅವಿಭಕ್ತ ಕುಟುಂಬ

(ಸಿ) ಕಂಪನಿ

(ಡಿ) ಫರ್ಮ್

(ಇ) ನಿಯಮಿತ ಹೊಣೆಗಾರಿಕೆಯ ಕಂಪನಿ

(ಎಫ್) ನೋಂದಾಯಿತ ಅಥವಾ ನೋಂದಾಯಿತವಲ್ಲದ ಭಾರತದ ಒಳಗಿನ ಅಥವಾ ಹೊರಗಿನ ವ್ಯಕ್ತಿಗಳ ಸಂಘಟನೆ ಅಥವಾ ವೈಯಕ್ತಿಕ ವ್ಯಕ್ತಿಗಳ ಗುಂಪು.

(ಜಿ) ಕಂಪನಿ ಅಧಿನಿಯಮ, 2013ರ ಕಲಂ 45 (2)ರಡಿಯ ಕೇಂದ್ರ ಮತ್ತು ರಾಜ್ಯ ಸರ್ಕಾರದ ನಿಗಮಗಳು.

(ಹೆಚ್) ಕಾನೂನಿನ ಅಡಿಯಲ್ಲಿ / ಮೂಲಕ ಸ್ಥಾಪಿತವಾದ ಭಾರತದ ಹೊರಗಿನ ಸಂಸ್ಥೆ

(ಐ) ಯಾವುದೇ ಕಾನೂನಿನಡಿ ನೋಂದಣಿಗೊಂಡಿರುವ ಸಹಕಾರ ಸಂಘಗಳು

(ಜೆ) ಸ್ಥಳೀಯ ಪ್ರಾಧಿಕಾರಗಳು

(ಕೆ) ರಾಜ್ಯ ಮತ್ತು ಕೇಂದ್ರ ಸರ್ಕಾರಗಳು

(ಎಲ್) ಸಂಘಗಳ ಅಧಿನಿಯಮ, 1960ರಡಿ ನೋಂದಣಿಗೊಂಡಿರುವ ಸಂಘ

(ಎಂ) ನ್ಯಾಸ

(ಎನ್) ಮೇಲೆ ತಿಳಿಸಿದ ವ್ಯಾಪ್ತಿಯಲ್ಲಿ ಒಳಗೊಳ್ಳದ ಕೃತಕ ವ್ಯಕ್ತಿಗಳು

ಮೇಲಿನ ಕಲಂ 2(84)ಐ ಮೂಲಕ ಸ್ಪಷ್ಟವಾಗುವುದೇನೆಂದರೆ ಸಹಕಾರ ಸಂಸ್ಥೆಗಳು ವ್ಯಕ್ತಿ ಶಬ್ಧದ ವ್ಯಾಪ್ತಿಯಲ್ಲಿ ಬರುತ್ತವೆ ಮತ್ತು ಈ ಮೇಲಿನ ವ್ಯಕ್ತಿಗಳು ಮಾಡುವ ವ್ಯವಹಾರಕ್ಕೆ ಸರಕು ಮತ್ತು ಸೇವಾ ತೆರಿಗೆ ಅನ್ವಯಿಸುತ್ತದೆ.

ಹಾಗಾದರೆ, ವ್ಯವಹಾರ ಎಂದರೇನು ಎಂಬ ಪ್ರಶ್ನೆ ಉದ್ಭವಿಸುತ್ತದೆ; ಸರಕು ಮತ್ತು ಸೇವಾ ತೆರಿಗೆ ಅಧಿನಿಯಮ, 2017ರ ಕಲಂ 2 (17)ರಲ್ಲಿ 'ವ್ಯವಹಾರದ' ವ್ಯಾಖ್ಯೆಯನ್ನು ನೀಡಲಾಗಿರುತ್ತದೆ, ಅದು ಈ ಕೆಳಗಿನಂತಿದೆ.

(ಎ) 'ವ್ಯವಹಾರ' ಎಂದರೆ ಲಾಭ ಉದ್ದೇಶವನ್ನು ಹೊಂದಿರುವ ಅಥವಾ ಹೊಂದಿರದ ಯಾವುದೇ ವ್ಯಾಪಾರ, ವಾಣಿಜ್ಯ, ಉತ್ಪಾದನೆ, ವೃತ್ತಿ, ಸಾಹಸ, ಬಾಜಿ ಅಥವಾ ಅದೇ ತರಹದ ಚಟುವಟಿಕೆಗಳು.

(ಬಿ) ಮೇಲಿನ ಉಪಬಂಧದಲ್ಲಿ ತಿಳಿಸಿರುವುದವುಗಳಿಗೆ ಸಂಬಂಧಿಸಿದ ಅಥವಾ ಸಂಭವನೀಯ ಅಥವಾ ಪೂರಕವಾದ ಯಾವುದೇ ಚಟುವಟಿಕೆ ಅಥವಾ ವ್ಯವಹಾರ.

(ಸಿ) ಪರಿಮಾಣ, ಪ್ರಮಾಣ, ಆವರ್ತನೆ, ನಿರಂತರತೆ ಅಥವಾ ಕ್ರಮಬದ್ಧತೆ ಇರಲಿ ಅಥವಾ ಇರದಿರಲಿ ಮೇಲೆ (ಎ) ಉಪಬಂಧದಲ್ಲಿ ಉಲ್ಲೇಖಿತವಾದ ಅಂತಹ ಚಟುವಟಿಕೆ ಅಥವಾ ವಹಿವಾಟು.

(ಡಿ) ಬಂಡವಾಳದ ಸರಕು ಮತ್ತು ಸೇವೆಗಳು ಸೇರಿದಂತೆ ವ್ಯವಹಾರದ ಪ್ರಾರಂಭಿಸುವಿಕೆ ಮತ್ತು ಮುಚ್ಚುವಿಕೆಗೆ ಸಂಬಂಧಿಸಿದಂತೆ ವಸ್ತುವಿನ ಪೂರೈಕೆ ಮತ್ತು ವಶಪಡಿಸಿಕೊಳ್ಳುವಿಕೆ.

(ಇ) ಸದಸ್ಯರಿಗೆ ಲಾಭ ಮತ್ತು ಸೌಲಭ್ಯ ಒದಗಿಸುವುದಕ್ಕಾಗಿ ಇರುವ ಕ್ಲಬ್, ಅಸೋಸಿಯೇಷನ್, ಸಂಘಗಳು ಅಥವಾ ಯಾವುದೇ ಸಂಸ್ಥೆಗಳು;

(ಎಫ್) ಪ್ರತಿಫಲದ ಉದ್ದೇಶದಿಂದ ಯಾವುದೇ ವ್ಯಕ್ತಿಗೆ ಆವರಣದಲ್ಲಿ ಪ್ರವೇಶ ನೀಡುವುದು;

(ಜಿ) ಒಬ್ಬ ವ್ಯಕ್ತಿಯು ತನ್ನ ವ್ಯಾಪಾರ, ವೃತ್ತಿ, ಉದ್ಯೋಗವನ್ನು ಮುಂದುವರೆಸುವ ದೃಷ್ಟಿಯಿಂದ ಪೂರೈಸಿದ ಸೇವೆ.

(ಹೆಚ್) ಟೋಟಲೈಸರ್ ಮೂಲಕ ಅಥವಾ ಅದನ್ನು ಬುಕ್ ಮಾಡಲು ಅನುಮತಿ ನೀಡುವ ಮೂಲಕ ರೇಸ್ ಕ್ಲಬ್‌ನಲ್ಲಿ ನೀಡುವ ಸೇವೆ.

(ಐ) ಸ್ಥಳೀಯ ಪ್ರಾಧಿಕಾರವಾಗಿದ್ದು, ಸರ್ಕಾರದ ಪ್ರಾಧಿಕಾರದಂತೆ ಕಾರ್ಯ ನಿರ್ವಹಿಸುತ್ತಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಕೈಗೊಂಡ ಯಾವುದೇ ಚಟುವಟಿಕೆ ಅಥವಾ ವಹಿವಾಟು.

ಮೇಲೆ ತಿಳಿಸಿರುವ ಅಂಶಗಳಲ್ಲಿ (ಇ) ಅಂಶದಲ್ಲಿ ಸಹಕಾರಿಗಳು ಬರುತ್ತವೆ.

ಈ ಮೇಲಿನ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಸೌಹಾರ್ದ ಸಹಕಾರಿಗಳು ಸರಕು ಮತ್ತು ಸೇವಾ ತೆರಿಗೆಯ ವ್ಯಾಪ್ತಿಯೊಳಗೆ ಬರುತ್ತವೆ.

ಯಾವುದೇ ಸಹಕಾರಿಯ ಸರಾಸರಿ ಆದಾಯವು ರೂ.20,00,000/– ಗಳಿದ್ದರೆ ಅಂತಹ ಸಹಕಾರಿಯು ಸರಕು ಮತ್ತು ಸೇವೆಗಳ ಅಧಿನಿಯಮ, 2017ರಡಿ ನೋಂದಣಿ ಹೊಂದಬೇಕಾಗುತ್ತದೆ.

**ಗಮನಿಸಿ :** ಸರಕು ಮತ್ತು ಸೇವೆಗಳ ಅಧಿನಿಯಮ, 2017ರಲ್ಲಿ 'ಸರಾಸರಿ ಆದಾಯ' ಎಂಬ ಶಬ್ಧವನ್ನು ಬಳಸಲಾಗಿರುತ್ತದೆ. ಸರಾಸರಿ ಆದಾಯವೆಂದರೆ ಸಹಕಾರಿಯು ಹೊಂದುವ ಬಡ್ಡಿ ರೂಪದಲ್ಲಿ ಪಡೆಯುವ ಆದಾಯವನ್ನು ಒಳಗೊಂಡಿರುತ್ತದೆ.

ಉದಾ : ಸಹಕಾರಿಯು ಬಡ್ಡಿಯಿಂದ ರೂ. 18,00,000/– ಲಾಭವನ್ನು ಗಳಿಸಿದ್ದು, ಸೇವಾ ಶುಲ್ಕ ರೂ. 2,00,000/–ವನ್ನು ಸಂಗ್ರಹಿಸಿದ್ದರೂ ಸಹ ಸರಕು ಮತ್ತು ಸೇವಾ ತೆರಿಗೆ ಅಧಿನಿಯಮ, 2017ರಡಿ ನೋಂದಣಿ ಹೊಂದಬೇಕಾಗುತ್ತದೆ.

ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಸಹಕಾರಿಯು ಗಳಿಸುವ ಬಡ್ಡಿ ರೂಪದ ಆದಾಯಕ್ಕೆ ಸೇವಾ ತೆರಿಗೆ ಪಾವತಿಸಬೇಕಿರುವುದಿಲ್ಲ. ಆದರೆ, ಸರಕು ಮತ್ತು ಸೇವೆಗಳ ಅಧಿನಿಯಮ, 2017ರಡಿ ಬಡ್ಡಿ ಸೇರಿದಂತೆ ಯಾವುದೇ ರೂಪದ ಸರಾಸರಿ ಆದಾಯ ರೂ.20,00,000/–ಗಳಾದಾಗ ಸರಕು ಮತ್ತು ಸೇವೆಗಳ ಅಧಿನಿಯಮ, 2017ರಡಿ ನೋಂದಣಿ ಹೊಂದಬೇಕಾಗುತ್ತದೆ. ಸಹಕಾರಿಯು ತಾನು ಸಂಗ್ರಹಿಸುವ ಒಟ್ಟು ಸೇವಾ ಶುಲ್ಕವು ರೂ.20,000,00/–ಗಳಾದಾಗ ಶೇ.18ರ ದರದಲ್ಲಿ ಸೇವಾ ತೆರಿಗೆ ಪಾವತಿಸಬೇಕಾಗುತ್ತದೆ.

ಮೇಲೆ ತಿಳಿಸಿದಂತೆ ಸರಕು ಮತ್ತು ಸೇವೆಗಳ ಅಧಿನಿಯಮ, 2017ರ ಕಲಂ 2 (6)ರನ್ವಯ 'ಸರಾಸರಿ ಆದಾಯ' ಎಂದರೆ ಎಲ್ಲಾ ತೆರಿಗೆ ಪೂರೈಕೆಗಳ ಒಟ್ಟು ಮೌಲ್ಯ ಎಂದಿರುತ್ತದೆ. ಆದ್ದರಿಂದ, ಸೌಹಾರ್ದ ಸಹಕಾರಿಗಳು ಸರಕು ಮತ್ತು ಸೇವಾ ಅಧಿನಿಯಮ, 2017ರಡಿ ನೋಂದಣಿ ಹೊಂದುವುದು ಕಡ್ಡಾಯವಾಗಿರುತ್ತದೆ.

ಜಿಎಸ್‌ಟಿ ಅನ್ವಯವಾಗುವ ಸಹಕಾರಿಗಳು ದಿನಾಂಕ 10 ಜುಲೈ 2017ರೊಳಗೆ ಕಡ್ಡಾಯವಾಗಿ ನೋಂದಣಿಯಾಗ ಬೇಕಾಗಿರುತ್ತದೆ.

**ನೋಂದಣಿಯ ಸಮಯದಲ್ಲಿ ಬೇಕಾಗುವ ದಾಖಲೆಗಳು ಮತ್ತು ಕ್ರಮಗಳು :**

1. ಸಂಸ್ಥೆಯ ಪಾನ್ ಕಾರ್ಡ್.
2. ಪಾಲುದಾರಿಕೆ ಸಂಸ್ಥೆಯಾದಲ್ಲಿ ಒಪ್ಪಂದದ ಕರಾರು ಪತ್ರ/ ಪ್ರಮಾಣೀಕೃತ ಪ್ರಮಾಣ ಪತ್ರ.
3. ಬಾಡಿಗೆ ಒಪ್ಪಂದದ ಕರಾರು ಅಥವಾ ವಿದ್ಯುತ್ ಬಿಲ್‌ನಂತಹ ವ್ಯವಹಾರ ಸಂಬಂಧಿ ಪುರಾವೆಗಳು.
4. ಬ್ಯಾಂಕ್ ಖಾತೆದಾರರ ಹೆಸರಿನಲ್ಲಿರುವ ರದ್ದುಗೊಂಡ ಚೆಕ್ ಪ್ರತಿ, MICR ಕೋಡ್, IFSC ಕೋಡ್ ಮತ್ತು ಬ್ಯಾಂಕ್ ಶಾಖೆ ವಿವರಗಳು.
5. ಸಹವರ್ತಿ ಸಹಿದಾರರು ತಮ್ಮ ಗುರುತನ್ನು ಮತ್ತು ಪಾಲುದಾರಿಕೆ ಸಂಸ್ಥೆಯ ಪುರಾವೆಗಳೊಂದಿಗೆ ನಿರ್ದೇಶಕರ ಪಟ್ಟಿಯನ್ನು ಹೊಂದಿದ ಪಾಲುದಾರರ ಪಟ್ಟಿ.

**ನೋಂದಣಿ ಪ್ರಕ್ರಿಯೆ :**

1. ವಾರ್ಷಿಕ ವಹಿವಾಟು 19 ಲಕ್ಷ ಮೀರಿದರೆ ಅರ್ಜಿ ಸಲ್ಲಿಸಬೇಕು.
2. ನೋಂದಣಿ ಬಾಧ್ಯತೆ ಬಂದ 30 ದಿನಗಳೊಳಗಾಗಿ ಅರ್ಜಿ ಸಲ್ಲಿಸಬೇಕು.
3. ವಾರ್ಷಿಕ ವಹಿವಾಟು 20 ಲಕ್ಷ ಮೀರಿದರೆ ನೋಂದಣಿ ಪಡೆಯಬೇಕು
4. ಹೊಸ ನೋಂದಣಿಗೆ ಯಾವುದೇ ಶುಲ್ಕವಿಲ್ಲ.

ಕೇಂದ್ರ ಸರ್ಕಾರವು ನಿರ್ವಹಿಸುವ ಪೋರ್ಟಲ್ ಮೂಲಕ ಜಿ.ಎಸ್.ಟಿ ನೋಂದಣಿ ಪ್ರಕ್ರಿಯೆಯು ಆನ್‌ಲೈನ್ ಆಗಿದ್ದು, ಹೆಚ್ಚಿನ ಮಾಹಿತಿಯನ್ನು https://www.gst.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದು.

ಈಗಾಗಲೇ ವ್ಯಾಟ್ ಅಡಿ ನೋಂದಣಿಯಾಗಿರುವ ಸೌಹಾರ್ದ ಸಹಕಾರಿಗಳೂ ಸಹ ಜಿಎಸ್‌ಟಿಗೆ ಬದಲಾಯಿಸಿ ನೋಂದಣಿಯಾಗಬೇಕು.

## ಸಹಕಾರಿ ನಾಯಕ

**▸▸ ಎಂ.ಬಸಪ್ಪ,** ಸಹಕಾರ ಸಂಘಗಳ ಉಪನಿಬಂಧಕರು (ನಿವೃತ್ತ), ಬೆಂಗಳೂರು.



ಡಿ.ವಿ.ಜಿ.ಯವರ ಪದ್ಯವು ಸಮುದಾಯದ ನಾಯಕನ ಗುರಿ ಹಾಗೂ ಅವನ ಗುರಿಯ ನೆನಪುಗಳಿಗೆ ಸಂಬಂಧಿಸಿದ್ದಾಗಿದೆ. ಯಾರೊಬ್ಬ ಸಾಧಕನೇ ಆಗಿರಲಿ ಆತನು ತನ್ನ ಸಾಧನೆಗೆ ಪೂರ್ವ ಗುರಿಯನ್ನು ಖಚಿತ ಪಡಿಸಿಕೊಳ್ಳಬೇಕು. ಸಾಮಾಜಿಕ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ನಾಯಕರುಗಳ ವಿಷಯವನ್ನು ತೆಗೆದುಕೊಂಡಾಗ ಅವರುಗಳು ವ್ಯಾಪ್ತಿಯ ಜನಸಮುದಾಯವನ್ನು ಗಮನಿಸಿ ತಮ್ಮ ಗುರಿಯನ್ನು ಕರಾರುವಕ್ಕಾಗಿರಿಸಿಕೊಳ್ಳಬೇಕಾಗುತ್ತದೆ. ಇದನ್ನೇ ಸೂಚಿಸುವ ಮಹತ್ವದ ಡಿ.ವಿ.ಜಿ.ಯವರ ಪದ್ಯವನ್ನು ಗಮನಿಸಿರಿ.

**"ದಾರುಣಿಯ ನಡಿಗೆಯಲಿ ಮೇರುವಿನ ಗುರಿಯಿರಲಿ**
**ಮೇರುವನು ಮರೆತಂದೆ ನಾರಕಕೆ ದಾರಿ**
**ದೂರವಾದೊಡದೇನು ಕಾಲು ಕುಂಟಿರಲೇನು**
**ಊರ ನೆನಪೇ ಬಲವೋ ಮಂಕುತಿಮ್ಮ"**

ಭೂಮಿಯ ಮೇಲೆ ನಡೆದಾಡುತ್ತಾ ಇತರ ಜನರಿಗೆ ಉದಾಹರಣಾರ್ಥವಾಗಿ ಬದುಕ ಬಯಸುವ ನಾಯಕನು ಮೇರು ಪರ್ವತವನ್ನು ತಲುಪುವ ಗುರಿಯನ್ನು ಹೊಂದಿರಬೇಕು. ಉನ್ನತದ ಗುರಿಯನ್ನು ಮರೆತಾಗ ಪ್ರಾಪಂಚಿಕ ಹಾಗೂ ಲೌಕಿಕದ ಆಕರ್ಷಣೆಗಳು ಅಂತಹ ನಾಯಕನನ್ನು ನರಕದ ಹೆಬ್ಬಾಗಿಲಿಗೆ ಕೊಂಡ್ಯೊಯ್ದು ಬಿಡುತ್ತದೆ. ಅಂತಹ ಉತ್ಕೃಷ್ಟ ಗುರಿ ಅದೆಷ್ಟೇ ಎತ್ತರ ಅಥವಾ ಮಹತ್ವದ್ದಾಗಿರಲಿ, ಅಂಗವೈಕಲ್ಯವಿದ್ದು ಕಾಲು ಕುಂಟವಾಗಿದ್ದರೂ ಮನದೊಳಗಿನ ಉತ್ಕಟ ಛಲ ಸಾಧನೆಗೆ ಸ್ಫೂರ್ತಿಯಾಗುತ್ತದೆ ಎನ್ನುತ್ತಾರೆ.

ಈ ಪದ್ಯದಲ್ಲಿ ಸಮಾಜ ಸೇವಾ ಗುರಿ ಹಾಗೂ ಆ ಸದ್ಗುರಿಗಳ ನಿರಂತರ ಹಾಗೂ ಅಚ್ಚಳಿಯದ ನೆನಪಿನ ಬಲವನ್ನು ಉದಾಹರಿಸಿದ್ದಾರೆ. ಶತಶತಮಾನಗಳಿಂದ ನಡೆದು ಬಂದಿರುವ ಮನುಕುಲದ ಬದುಕನ್ನು ಅವಲೋಕಿಸಿದಾಗ ಮಹಾತ್ಮರು, ದಾರ್ಶನಿಕರು, ಚಿಂತನಾಶೀಲರು, ತತ್ವಜ್ಞಾನಿಗಳು, ದೇಶಾಭಿಮಾನಿಗಳು ಹಾಗೂ ದೈವಾಂಶ ಸಂಭೂತರು ತಮ್ಮ ಏಕಾಗ್ರ ಸಾಧನೆಗಳ ಮೂಲಕ ಪ್ರಸಿದ್ಧರಾಗಿ ತಮ್ಮ ಜೀವನ ನಿರ್ವಹಣೆಯ ಮೂಲಕ ಅವರದೇ ಆದ ವಿಶಿಷ್ಟ ಸಂದೇಶಗಳನ್ನು ಬಿಟ್ಟುಹೋಗಿದ್ದಾರೆ.

ಸಮಾಜದಲ್ಲಿ ಸಹಕಾರಿ ನಾಯಕನಾದವನಿಗೆ ಜನಸಮುದಾಯದ ಸೇವೆ ಮಾಡಲು ವಿಫುಲ ಅವಕಾಶವಿದೆಯಾದ್ದರಿಂದ ಉದಾತ್ತವಾದ ಗುರಿಗಳನ್ನು ಹಾಕಿಕೊಂಡು ಅವುಗಳ ಸ್ಪಷ್ಟ ನೆನಪನ್ನು ಇರಿಸಿಕೊಂಡು ಛಲ ಬಿಡದ ತ್ರಿವಿಕ್ರಮನಂತೆ ಗುರಿ ಸಾಧನೆಯತ್ತಾ ಸಾಗಲೆಂಬ ಮಹದುದ್ಧೇಶ ಈ ಪದ್ಯದಲ್ಲಿ ಅಡಕವಾಗಿದೆಯೆಂದು ಕೊಳ್ಳೋಣವೇ?



# ಕರ್ನಾಟಕ ಸೌಹಾರ್ದ ಕಾಯಿದೆಯಲ್ಲಿ ಆಡಳಿತ ಮಂಡಲಿಯ ನಿರ್ದೇಶಕರು ನಿರ್ವಹಿಸಬೇಕಾದ/ ತಿಳಿಯಬೇಕಾದ ಹಕ್ಕು ಕರ್ತವ್ಯ ಮತ್ತು ಜವಾಬ್ದಾರಿಗಳು

**ಸಿ.ಎನ್.ಪರಶಿವಮೂರ್ತಿ,** ಅಪರ ನಿಬಂಧಕರು (ನಿ)

...ಹಿಂದಿನ ಸಂಚಿಕೆಯಿಂದ

**ಕಲಂ 32 – ದಾಖಲೆಗಳು, ಲೆಕ್ಕಪತ್ರ ಇತ್ಯಾದಿಗಳನ್ನು ಇಡುವುದು.**

1) ಪ್ರತಿಯೊಂದು ಸಹಕಾರಿಯು ಅದರ ನೋಂದಾಯಿತ ಕಛೇರಿಯಲ್ಲಿ ಈ ಕೆಳಗಿನವುಗಳನ್ನು ಇಟ್ಟುಕೊಂಡು ಬರತಕ್ಕದ್ದು, ಎಂದರೆ –

(ಎ) ಇಂದಿನವರೆಗಿನ ತಿದ್ದುಪಡಿಗಳ ಸಹಿತವಾಗಿರುವ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಪ್ರತಿ;

(ಬಿ) ನೋಂದಣಿ ಪ್ರಮಾಣ ಪತ್ರ ಮತ್ತು ನೋಂದಾಯಿತ ಉಪವಿಧಿಗಳು ಮತ್ತು ಕಾಲಕಾಲಕ್ಕೆ ನೋಂದಣಿಯಾದ ತಿದ್ದುಪಡಿಗಳ ಮೂಲ ಪ್ರತಿಗಳು;

(ಸಿ) ಸಂಯುಕ್ತ ಸಹಕಾರಿ ಮತ್ತು ಅದರ ಪೂರಕ ಸಂಘಗಳು ಯಾವುದಾದರೂ ಇದ್ದರೆ ಅಂಥ ಪ್ರತಿಯೊಂದು ಸಂಘದ ಉಪವಿಧಿಗಳ ಪ್ರತಿ;

(ಡಿ) [ಸಹಕಾರ ವರ್ಷ ಮುಕ್ತಾಯದ] ಮೂವತ್ತು ದಿನಗಳೊಳಗೆ ಪ್ರಸಕ್ತ ವರ್ಷದಲ್ಲಿ ಮತ ನೀಡುವ ಹಕ್ಕುಗಳ ಮತ್ತು ವಿವಿಧ ಸೇವೆಗಳ ಸದಸ್ಯವಾರು ಬಳಕೆಯ ಬಗ್ಗೆ ಇಂದಿನವರೆಗಿನ ವಿವರಗಳನ್ನುಳ್ಳ ಸದಸ್ಯರುಗಳ ರಿಜಿಸ್ಟರು;

(ಇ) ಸಹಕಾರಿ ಮತ್ತು ಅದರ ಶಾಖೆಯೇನಾದರೂ ಇದ್ದಲ್ಲಿ ಅದು ಸ್ವೀಕರಿಸಲಾದ ಮತ್ತು ಖರ್ಚು ಮಾಡಲಾದ ಹಣದ ಎಲ್ಲ ಮೊತ್ತಗಳ ಬಗೆಗಿನ ಲೆಕ್ಕಗಳು ಮತ್ತು ಅದರ ಉದ್ದೇಶಗಳು;

(ಎಫ್) ಸಹಕಾರಿಯು ಮಾಡಿದ ಎಲ್ಲ ಸರಕುಗಳ ಖರೀದಿ ಮತ್ತು ಮಾರಾಟಗಳ ಲೆಕ್ಕಗಳು;

(ಜಿ) ಸಹಕಾರಿಯ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ಲೆಕ್ಕಗಳು;

(ಹೆಚ್) ನಡವಳಿಕೆಗಳ ಪುಸ್ತಕ;

(ಐ) ಮಂಡಲಿಯ ನಿರ್ಣಯದ ಪ್ರತಿಗಳು; ಮತ್ತು

(ಜೆ) ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ ಮತ್ತು ಸಹಕಾರಿಯು ಶಾಖಾ ಕಛೇರಿಯನ್ನು ಹೊಂದಿರುವಲ್ಲಿ ಅಂಥ ಶಾಖೆಗೆ ಸಂಬಂಧಪಟ್ಟ ಲೆಕ್ಕಪತ್ರಗಳು ಮತ್ತು ದಾಖಲೆಗಳು.

[(1ಎ) ಪ್ರತಿಯೊಂದು ಸಹಕಾರಿಯ ಪ್ರತಿ ಸದಸ್ಯನಿಗೆ ಸಂಬಂಧಪಟ್ಟಂತೆ ತನ್ನ ದೈನಂದಿನ ವ್ಯವಹಾರದಲ್ಲಿ ನಿರ್ವಹಿಸುವ ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು, ತತ್ಸಂಬಂಧದ ಮಾಹಿತಿಗಳನ್ನು ನೋಡಲು ಅವಕಾಶ ಕಲ್ಪಿಸತಕ್ಕದ್ದು.]

2) ಮಂಡಲಿಯ ಮತ್ತು ಸಾಮಾನ್ಯ ಸಭೆಗಳಲ್ಲಿನ ನಿರ್ಣಯಗಳು, ಮತದಾರರ ಪಟ್ಟಿ, ಉಪವಿಧಿಗಳು, ವಾರ್ಷಿಕ ಲೆಕ್ಕಪತ್ರಗಳ ವಿವರ ಪತ್ರ ಮತ್ತು ಸದಸ್ಯರಿಗೆ ಸಂಬಂಧಪಟ್ಟಂತ ಲೆಕ್ಕಗಳ ಪ್ರತಿಗಳು, ಸಹಕಾರಿಯು ನಿರ್ಣಯಿಸಬಹುದಾದ ಅವಶ್ಯಕ ಶುಲ್ಕವನ್ನು ಸಂದಾಯ ಮಾಡಿದ ತರುವಾಯ ವ್ಯವಹಾರದ ವೇಳೆಯಲ್ಲಿ ಯಾವನೇ ಸದಸ್ಯನಿಗೆ ಲಭ್ಯವಾಗುವಂತೆ ಮಾಡತಕ್ಕದ್ದು.

3) ಪ್ರತಿಯೊಂದು ಸಹಕಾರಿಯ ಲೆಕ್ಕಗಳ ಪುಸ್ತಕಗಳನ್ನು ಸಮರ್ಥಿಸುವ ದಾಖಲೆಗಳ ಮತ್ತು ವೋಚರುಗಳ ಜೊತೆಗೆ ಮಂಡಲಿಯು ನಿರ್ಧರಿಸಬಹುದಾದಂತ ಅವಧಿಯವರೆಗೆ ಸಂರಕ್ಷಿಸತಕ್ಕದ್ದು.

**ಕಲಂ 33 – ಸಹಕಾರಿಯ ಲೆಕ್ಕಪರಿಶೋಧನೆ.**

1) ಕನಿಷ್ಠ ವರ್ಷಕ್ಕೊಮ್ಮೆ ತನ್ನ ಲೆಕ್ಕ ಪತ್ರಗಳನ್ನು ಸಹಕಾರಿ ವರ್ಷ ಮುಗಿದ ನಂತರ ಸೆಪ್ಟೆಂಬರ್ ಒಂದರೊಳಗೆ ಲೆಕ್ಕ ತಪಾಸಣೆಯು ಲೆಕ್ಕಿಗರ ಪಟ್ಟಿಯಿಂದ ಸಾಮಾನ್ಯ ಸಭೆ ಮಾಡಿದ ವ್ಯಕ್ತಿ/ ಸಂಸ್ಥೆಯಿಂದ ಮಾಡಿಸತಕ್ಕದ್ದು.

2) ಮಂಡಲಿ ಸಹಕಾರಿ ವರ್ಷ ಮುಗಿದ 30 ದಿವಸದೊಳಗೆ ಲೆಕ್ಕ ಪತ್ರಗಳು ಆರ್ಥಿಕ ತಃಖ್ತೆಗಳನ್ನು ತಯಾರಿಸಿ ಲೆಕ್ಕಾಧಿಕಾರಿಗೆ ಒಪ್ಪಿಸುವುದನ್ನು ಖಚಿತ ಪಡಿಸುವುದು.

3) ಸೆಪ್ಟೆಂಬರ್ ಒಂದರೊಳಗೆ ಲೆಕ್ಕ ತಪಾಸಣಾ ವರದಿಯನ್ನು ಪಡೆದು, ನಿಬಂಧಕರಿಗೆ, ಸಂಯುಕ್ತ ಸಹಕಾರಿ ಮತ್ತು ಹಣಕಾಸು ಪೂರೈಸುವ ಸಂಸ್ಥೆಗೆ ನೀಡತಕ್ಕದ್ದು.

4) ವರದಿಯಲ್ಲಿ ಕಂಡ ನ್ಯೂನತೆಗಳ ಮೇಲೆ ಕ್ರಮ ಜರುಗಿಸಿ, ಅನುಪಾಲನಾ ವರದಿ ತಯಾರಿಸಿ ಸಲ್ಲಿಸುವುದು.

5) ವರದಿಯ ನ್ಯೂನತೆ/ ಅಕ್ರಮಗಳ ಬಗ್ಗೆ ಕ್ರಮ ಜರುಗಿಸುವುದು.

**ಕಲಂ 34 – ಮಾಹಿತಿ ಸಲ್ಲಿಸುವುದು.**

1) ಹಿಂದಿನ ಸಹಕಾರಿ ವರ್ಷದ ಕಾರ್ಯ ಚಟುವಟಿಕೆ ಬಗ್ಗೆ ವಾರ್ಷಿಕ ವರದಿ.

2) ಸಾಮಾನ್ಯ ಸಭೆಯಿಂದ ಒಪ್ಪಿಗೆ ಪಡೆದ ಹೆಚ್ಚುವರಿ ವೆಚ್ಚಗಳ ಮಾಹಿತಿ.

3) ಆರ್ಥಿಕ ತಃಖ್ತೆಗಳು – ವರದಿ.

4) ನಿರ್ದೇಶಕರ ಪಟ್ಟಿ ಮತ್ತು ಪದಾವಧಿ.

5) ಉಪವಿಧಿಗಳ ತಿದ್ದುಪಡಿ.

6) ಚುನಾವಣೆ ಬಗ್ಗೆ ತೆಗೆದುಕೊಂಡ ಕ್ರಮಗಳು.

7) ನಿಬಂಧಕರು/ ಸಂಯುಕ್ತ ಸಹಕಾರಿ ನಿಗದಿ ಪಡಿಸಿದ ಇತರ ಮಾಹಿತಿ.

ಸಹಕಾರಿ ವರ್ಷ ಮುಗಿದ ಆರು ತಿಂಗಳಲ್ಲಿ ಈ ಮೇಲ್ಕಂಡ ವರದಿಯನ್ನು ನಿಬಂಧಕರು ಸಂಯುಕ್ತ ಸಹಕಾರಿಗೆ – ರಿಜರ್ವ್ ಬ್ಯಾಂಕಿಗೆ ಸಲ್ಲಿಸುವುದು.

**ಕಲಂ 35 – ವಿಚಾರಣೆ.**

ಒಂದು ಸಹಕಾರಿಯ ರಚನೆ ವ್ಯವಸ್ಥಾಪನೆ, ಕಾರ್ಯನಿರ್ವಹಣೆ ಅಥವಾ ಹಣಕಾಸಿನ ಪರಿಸ್ಥಿತಿಯೇ ಸಂಯುಕ್ತ ಸಹಕಾರಿ ವಿಚಾರಣೆ ನಡೆಸಬಹುದು. ವಿಚಾರಣೆಯನ್ನು ನಡೆಸಲು ಸಂಯುಕ್ತ ಸಹಕಾರಿ ಅಥವಾ ಸಹಕಾರಿ ಮಂಡಲಿಯ 1/3 ರಷ್ಟು ಸದಸ್ಯರ ಮನವಿಯ ಮೇಲೆ ಅಥವಾ ಸಹಕಾರಿಯ ಸದಸ್ಯರ 1/10 ರಷ್ಟು ಸದಸ್ಯರ ಮನೆಯ ಮೇಲೆ ವಿಚಾರಣೆ ನಡೆಸತಕ್ಕದ್ದು. ವಿಚಾರಣೆಗೆ ಆದೇಶಿಸುವ ಅಧಿಕಾರ ನಿಬಂಧಕರಿಗೆ ಇರತಕ್ಕದ್ದು ಮತ್ತು ವರದಿಯನ್ನು ಪಡೆದ ನಂತರ ಒಂದು ಪ್ರತಿಯನ್ನು ಅರ್ಜಿದಾರರಿಗೆ, ಸಂಬಂಧಪಟ್ಟ ಸಹಕಾರಿಗೆ, ಸಂಬಂಧಪಟ್ಟ ಸಾಲಗಾರರಿಗೆ, ಸಂಯುಕ್ತ ಸಹಕಾರಿಗೆ ಮತ್ತು ವಿಚಾರಣೆಗೆ ಒಂದು ಬ್ಯಾಂಕಿಗೆ ಸಂಬಂಧಪಟ್ಟಿದ್ದರೆ ಒಂದು ಪ್ರತಿಯನ್ನು ರಿಜರ್ವ್ ಬ್ಯಾಂಕಿಗೆ ಸಲ್ಲಿಸತಕ್ಕದ್ದು.

**ಕಲಂ 37 – ವಿಚಾರಣೆಯ ವರದಿಯ ಮೇಲೆ ಕ್ರಮ :**

ನಿಬಂಧಕರು ವಿಚಾರಣೆಯ ವರದಿ ಬಂದ ನಂತರ ಪದಾಧಿಕಾರಿಗಳು, ನಿರ್ದೇಶಕರು ಅಥವಾ ಮುಖ್ಯ ಕಾರ್ಯನಿರ್ವಾಹಕ ವೈಯಕ್ತಿಕವಾಗಿ ಅಥವಾ ಜಂಟಿಯಾಗಿ ವಿಶ್ವಾಸದ್ರೋಹದಿಂದ ಅಥವಾ ನಿರ್ಲಕ್ಷದಿಂದ ಸಂದಾಯ ಮಾಡಿದ್ದಾರೆಂದು ವರದಿಸಿದ್ದರೆ ಅದರ ವಸೂಲಾತಿಗಾಗಿ ಸೂಕ್ತ ಕ್ರಮ ಜರುಗಿಸತಕ್ಕದೆಂದು ನಿರ್ದೇಶಿಸಬಹುದು. ಈ ರೀತಿ ವಸೂಲಾಗಬೇಕಾದ ಹಣ, ವಸೂಲಾಗುವ ತನಕವೂ ಜಾರಿಯಲ್ಲಿರತಕ್ಕದ್ದು.

**ಕಲಂ 37ಎ – ಅಧಿಭಾರ ಅರ್ಜಿ :**

ಲೆಕ್ಕಪರಿಶೋಧನೆಯಲ್ಲಿ, ವಿಚಾರಣೆಯಲ್ಲಿ, ಪರಿವೀಕ್ಷಣೆಯಲ್ಲಿ ಅಥವಾ ಸಮಾಪನಾ ವರದಿಯಲ್ಲಿ ಮಂಡಲಿ, ಪದಾಧಿಕಾರಿಗಳು ಮತ್ತು ಸದಸ್ಯರು ಮತ್ತು

24ನೇ ಪುಟಕ್ಕೆ...



# ದಿವಾಳಿತನ ಮತ್ತು ಪಾಪರಿಕೆ ಸಂಹಿತೆ-2016 (Insolvency & Bankruptcy Code-2016) ಒಂದು ಪಕ್ಷಿನೋಟ

▶▶ ಬಿ.ವಿ.ರವೀಂದ್ರನಾಥ್, ಸನ್ನದು ಲೆಕ್ಕಪರಿಶೋಧಕರು, ಸಾಗರ.

2016ರ ಮೇ 05ರಂದು ಲೋಕಸಭೆಯಲ್ಲಿ ಮತ್ತು 2016ರ ಮೇ 11ರಂದು ರಾಜ್ಯ ಸಭೆಯಲ್ಲಿ ಅನುಮೋದನೆಗೊಂಡ ದಿವಾಳಿತನ ಮತ್ತು ಪಾಪರಿಕೆ ಸಂಹಿತೆ–2016 (Insolvency & Bankruptcy Code-2016) ಎಂಬ ಕಾಯ್ದೆಯ ಜಾರಿಯು ಆರ್ಥಿಕ ಅಪರಾಧಗಳ ನಿಯಂತ್ರಣಕ್ಕಾಗಿ ಕೇಂದ್ರ ಸರಕಾರ ತೆಗೆದುಕೊಂಡಿರುವ ಅತ್ಯಂತ ಪ್ರಮುಖ ಹೆಜ್ಜೆಯಾಗಿದೆ ಎನ್ನುವುದರಲ್ಲಿ ಸಂಶಯವಿಲ್ಲ. ಇದರಿಂದಾಗಿ ದೊಡ್ಡ ಮೊತ್ತದ ಸಾಲಗಾರರ ಆರ್ಥಿಕ ವ್ಯವಹಾರಗಳ ಮೇಲೆ ನಿಗಾ ವಹಿಸಲು ಮತ್ತು ಅವರ ಬಾಕಿ ಯಾ ಸುಸ್ತಿದಾರಿಕೆಯ ಪರಿಣಾಮ ಸಾಲ ಸೌಲಭ್ಯ ನೀಡುವ ಸಂಸ್ಥೆಯ ಮೇಲೆ ಗಂಭೀರ ಪರಿಣಾಮ ಬೀರದಂತೆ ನೋಡಿಕೊಳ್ಳಲು ಸರಕಾರಕ್ಕೆ ಯಾ ಆರ್ಥಿಕ ವಹಿವಾಟನ್ನು ನಿಗಾ ನೋಡುವ ಸಂಸ್ಥೆಗಳಿಗೆ ಅನುಕೂಲವಾಗಲಿದೆ.

ನಮ್ಮ ದೇಶದಲ್ಲಿ ಸಾಲ ಬಾಕಿದಾರರು ಮತ್ತು ಸುಸ್ತಿದಾರರ ಮೇಲೆ ಕ್ರಮ ಕೈಗೊಳ್ಳಲು ಈ ಮೊದಲು ಇದ್ದ ಕಾನೂನುಗಳು ಅಂತರರಾಷ್ಟ್ರೀಯ ದರ್ಜೆಯದ್ದಾಗಿರಲಿಲ್ಲ. ಇರುವ ಕಾನೂನುಗಳಡಿಯಲ್ಲಿ ದಾಖಲಿಸಿದ ಪ್ರಕರಣಗಳ ಫಲಿತಾಂಶಗಳು ಹೆಚ್ಚಿನ ಸಾರಿ ನಿರಾಶಾದಾಯಕವಾಗಿದ್ದವು. ಕಾನೂನುಗಳಲ್ಲಿನ ನ್ಯೂನತೆಗಳನ್ನು ಬಳಸಿಕೊಂಡು ಹೆಚ್ಚಿನ ಪ್ರಕರಣಗಳಲ್ಲಿ ವಂಚಕರು ಶಿಕ್ಷೆಯಿಲ್ಲದೇ ಅಥವಾ ಅತಿ ಕಡಿಮೆ ಶಿಕ್ಷೆಯೊಂದಿಗೆ ಪಾರಾಗಿ ಬಿಡುತ್ತಿದ್ದರು. ಇದರಿಂದಾಗಿ ಆರ್ಥಿಕ ಸಂಸ್ಥೆಗಳು ಗಣನೀಯ ಪ್ರಮಾಣದ ನಷ್ಟವನ್ನು ಅನುಭವಿಸುತ್ತಿದ್ದವು. ಸರಕಾರದ ಮತ್ತು ಆರ್ಥಿಕ ಸಂಸ್ಥೆಗಳ ಸವಲತ್ತುಗಳನ್ನು ಉಪಯೋಗಿಸಿಕೊಂಡು ಅವುಗಳಿಗೆ ವಂಚಿಸಿ ಅಕ್ರಮವಾಗಿ ಲಾಭ ಮಾಡಿಕೊಳ್ಳಲೆಂದೇ ಅನೇಕ ಉದ್ಯಮಿಗಳು ಮತ್ತು ಉದ್ದಿಮೆಗಳು ಶುರುವಾಗಲಾರಂಭಿಸಿದ ಸನ್ನಿವೇಶಗಳು ನಮ್ಮೆದುರಿಗಿವೆ. ಇದರಿಂದಾಗಿ ದೊಡ್ಡ ಮೊತ್ತದ ಸಾಲ ನೀಡಲು ಆರ್ಥಿಕ ಸಂಸ್ಥೆಗಳು ಹಿಂದೇಟು ಹಾಕುತ್ತಿದ್ದರು.

ಈ ಕಾಯ್ದೆಯ ಪ್ರಮುಖ ಉದ್ದೇಶ ದೇಶದಲ್ಲಿ ಸಾಲ ನೀಡುವಿಕೆ, ಬಾಕಿ–ಸುಸ್ತಿಗಳ ನಿರ್ವಹಣೆ, ದಿವಾಳಿತನ ನಿರ್ಧಾರ ಹಾಗೂ ನಿಯಂತ್ರಣಗಳಿಗೆ ಹಾಲಿ ಇರುವ ಕಾನೂನುಗಳನ್ನು ಸಮಗ್ರವಾಗಿ ಪರಿಷ್ಕರಿಸಿ, ಅವುಗಳನ್ನು ಮರು ಸಂಘಟಿಸಿ ಏಕರೂಪತೆ ತರುವುದು ಮತ್ತು ಅವುಗಳ ಜಾರಿಯಲ್ಲಿನ ಗೊಂದಲ–ನ್ಯೂನತೆಗಳನ್ನು ನಿವಾರಿಸಿ ದಿವಾಳಿಕೋರರಿಗೆ ಕಾಲಮಿತಿಯಲ್ಲಿ ಶಿಕ್ಷೆಯಾಗುವಂತೆ ನೋಡಿಕೊಳ್ಳುವುದು ಮತ್ತು ಅದರಿಂದಾಗಿ ಎಲ್ಲ ಸಾಲಗಾರರಿಗೆ ಬಲವಾದ ಸಂದೇಶವನ್ನು ನೀಡುವುದಾಗಿರುತ್ತದೆ.

ಇತ್ತೀಚಿನ ದಿನಗಳಲ್ಲಿ ನಿಯಮಿತ ಹೊಣೆಗಾರಿಕೆಯ ಸಂಸ್ಥೆಗಳಾದ ಕಂಪೆನಿಗಳು, ಎಲ್‌ಎಲ್‌ಪಿಗಳು, ಸಹಕಾರಿ ಸಂಸ್ಥೆಗಳು ದುರಾಡಳಿತ, ಆರ್ಥಿಕ ಅವ್ಯವಹಾರಗಳು, ಮೋಸ ವಂಚನೆಗಳಿಂದ ಸಾರ್ವಜನಿಕರಿಗೆ, ಬ್ಯಾಂಕುಗಳಿಗೆ, ಹಣಕಾಸು ಸಂಸ್ಥೆಗಳಿಗೆ ಪಂಗನಾಮ ಹಾಕುತ್ತಿರುವ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಅಂತಹವರ ಮೇಲೆ ಬಿಗಿ ಕ್ರಮಗಳನ್ನು ಕೈಗೊಳ್ಳಲು, ಸಮಯ ಮಿತಿಯೊಳಗೆ ಪ್ರಕರಣಗಳನ್ನು ಇತ್ಯರ್ಥಗೊಳಿಸಲು, ತಪ್ಪಿತಸ್ಥರ ಮೇಲೆ ನಿಷ್ಠುರ ಹಾಗೂ ಗಂಭೀರ ಕ್ರಮಗಳನ್ನು ಕೈಗೊಳ್ಳಲು ಅನುಕೂಲವಾಗುವಂತೆ ಈ ಕಾಯ್ದೆಯನ್ನು ರಚಿಸಲಾಗಿದೆ.

**ಹೊಸ ಕಾನೂನಿನ ವೈಶಿಷ್ಟ್ಯತೆಗಳು ಕೆಳಕಾಣಿಸಿದಂತಿವೆ :**

- ವ್ಯಕ್ತಿಗಳ ವ್ಯಾಜ್ಯಗಳ ನಿರ್ವಹಣೆಗಾಗಿ "ನವಾರಂಭ" ಮತ್ತು "ದಿವಾಳಿ ನಿರ್ಧಾರಣೆ" ಎಂಬ ಎರಡು ನೂತನ ಮಾದರಿಯ ಪ್ರಕ್ರಿಯೆಗಳಿಗೆ ಅವಕಾಶ.
- ಕಂಪೆನಿ, ಪಾಲುದಾರಿಕಾ ಸಂಸ್ಥೆಗಳ ದೊಡ್ಡ ಮೊತ್ತದ ಆರ್ಥಿಕ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸ್ಪಷ್ಟ, ಸುಸಂಬದ್ಧ, ಕ್ಷಿಪ್ರಗತಿಯ ವಿಚಾರಣಾ ನಿಯಮಗಳು, ಕ್ರಮಗಳ ನಿರೂಪಣೆ.
- ಈ ಕಾಯ್ದೆಯನ್ನು ವ್ಯವಸ್ಥಿತವಾಗಿ ಜಾರಿಗೊಳಿಸಲು ಸಾಲ ವಸೂಲಿ ಪ್ರಾಧಿಕಾರ (Debt Recovery Tribunal) ಮತ್ತು ರಾಷ್ಟ್ರೀಯ ಕಂಪನಿ ಕಾನೂನು ಪ್ರಾಧಿಕಾರ (National Company Law Tribunal)ಗಳನ್ನು ಸಕ್ಷಮ ಪ್ರಾಧಿಕಾರಗಳೆಂದು ಹೆಸರಿಸಿ ನಿಯುಕ್ತಿಗೊಳಿಸಲಾಗಿದೆ.
- ಭಾರತೀಯ ದಿವಾಳಿತನ ಮತ್ತು ಪಾಪರಿಕೆ ಮಂಡಳಿ (Insolvency & Bankruptcy Board of India)ಯನ್ನು ಈ ಕಾಯ್ದೆಯಡಿಯಲ್ಲಿ ಬರುವ ದಿವಾಳಿತನ ಸಲಹಾ ವೃತ್ತಿನಿರತರು (Insolvency Professionals) ಮತ್ತು ಪ್ರಾತಿನಿಧಿಕ ಸಂಸ್ಥೆಗಳ (Insolvency Professional Agencies) ಕಾರ್ಯವೈಖರಿಗಳ ಉಸ್ತುವಾರಿ ಮಾಡಲು ಮತ್ತು ಈ ಕಾಯ್ದೆಯ ಬಗ್ಗೆ ಮಾಹಿತಿ ನೀಡಲು ರಚಿಸಲಾಗಿದೆ.
- ದಿವಾಳಿತನ ಸಲಹಾ ವೃತ್ತಿನಿರತರು ದಿವಾಳಿತನ ಘೋಷಣಾ ಪ್ರಕ್ರಿಯೆಯಲ್ಲಿ ಪ್ರಾಧಿಕಾರಗಳಿಗೆ ಅಹವಾಲು ಸಲ್ಲಿಸುವುದರಿಂದ ಮೊದಲ್ಗೊಂಡು ಸಕ್ಷಮ ಪ್ರಾಧಿಕಾರಗಳ ಎದುರು ಹಾಜರಾಗುವುದೂ ಸೇರಿದಂತೆ ದಿವಾಳಿತನ ಘೋಷಣೆಯವರೆಗಿನ ವಿವಿಧ ಹಂತಗಳ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಅಧಿಕಾರ ಹೊಂದಿರುತ್ತಾರೆ.
- ದಿವಾಳಿತನ ಪ್ರಾತಿನಿಧಿಕ ಸಂಸ್ಥೆಯು ವೃತ್ತಿನಿರತರಿಗೆ ಗುಣಮಟ್ಟದ ಖಾತರಿ ಬಗ್ಗೆ ನಿಯಮಗಳು, ವೃತ್ತಿ ನೀತಿ ಸಂಹಿತೆಯ ರಚನೆ, ಮಾರ್ಗಸೂಚಿಗಳು, ಸುತ್ತೋಲೆಗಳನ್ನು ನೀಡುವುದು ಮುಂತಾದ ಜವಾಬ್ದಾರಿಗಳ ಜೊತೆಗೆ ದಿವಾಳಿತನ ವೃತ್ತಿನಿರತರ ಮೇಲೆ ಮೊದಲ ಹಂತದ ನಿಯಂತ್ರಣಾಧಿಕಾರವನ್ನು ಹೊಂದಿರುತ್ತದೆ.
- ಜೊತೆಯಲ್ಲಿ ದಿವಾಳಿತನ ಪ್ರಾತಿನಿಧಿಕ ಸಂಸ್ಥೆಯು ದಿವಾಳಿತನ ಅರ್ಜಿಗೆ ಸಂಬಂಧಿಸಿದಂತೆ ದಿವಾಳಿತನ ಘೋಷಣಾ ಪ್ರಕ್ರಿಯೆಗೆ ಅಗತ್ಯವಿರುವ ಮಾಹಿತಿಗಳನ್ನು ಸಂಗ್ರಹಿಸುವುದು, ಅವುಗಳನ್ನು ಸಂಸ್ಕರಿಸುವುದು, ಸಕ್ಷಮ ಪ್ರಾಧಿಕಾರಗಳಿಗೆ ಸಲ್ಲಿಸುವುದು ಮುಂತಾದ ಪ್ರಕಾರ್ಯಗಳನ್ನು ನಿರ್ವಹಿಸುತ್ತದೆ.
- ಈ ಕಾಯ್ದೆಯು ಗಡಿಯೊಳಗಿನ, ಗಡಿಯಾಚೆಗಿನ ಮತ್ತು ಅಂತರ್ಗಡಿ ದಿವಾಳಿತನ ಘೋಷಣೆಗಳಿಗೆ ಸಂಬಂಧಿಸಿದ ಎಲ್ಲ ಪ್ರಕಾರ್ಯಗಳನ್ನೂ ನಡೆಸಲು ಅಧಿಕಾರ ಹೊಂದಿರುತ್ತದೆ.

ಒಟ್ಟಾರೆಯಾಗಿ ಈ ಹೊಸ ಕಾಯ್ದೆಯು ಹಾಲಿ ಜಾರಿಯಲ್ಲಿರುವ ರೋಗಗ್ರಸ್ತ ಕೈಗಾರಿಕಾ ಕಂಪೆನಿಗಳ ಕಾಯ್ದೆ [The Sick Industrial Companies Act, (SICA)], ಕೈಗಾರಿಕಾ ಮತ್ತು ಆರ್ಥಿಕ ಪುನರ್ನಿರ್ಮಾಣ ಮಂಡಳಿ, [The Board for Industrial and Financial Reconstruction (BIFR)], ಕೈಗಾರಿಕಾ ಮತ್ತು ಆರ್ಥಿಕ ಪುನರ್ನಿರ್ಮಾಣ ಮೇಲ್ಮನವಿ ಪ್ರಾಧಿಕಾರ [The Appellate Authority for Industrial and Financial Reconstruction (AAIFR)] ಮುಂತಾದ ಅನೇಕ ಕಾಯ್ದೆ ಹಾಗೂ ಅವುಗಳ ಪ್ರಕ್ರಿಯೆಗಳಲ್ಲಿನ ನ್ಯೂನತೆಗಳನ್ನು ಪರಿಹರಿಸಲು ಮತ್ತು ಕ್ಷಿಪ್ರಗತಿಯಲ್ಲಿ ವಿಚಾರಣೆ

ನಡೆಸಿ, ತೀರ್ಮಾನ ಪ್ರಕಟಿಸಲು, ನೀಡಿದ ಆದೇಶವನ್ನು ಜಾರಿಗೊಳಿಸಲು ರಚನೆಯಾಗಿದೆ ಎಂದರೆ ತಪ್ಪಾಗಲಿಕ್ಕಿಲ್ಲ.

ಈ ಕಾಯ್ದೆಯನ್ನು ಪೂರ್ಣವಾಗಿ ಅವಲೋಕಿಸಿದಾಗ ಸರಕಾರ ಮತ್ತು ಆರ್ಥಿಕ ಸಂಸ್ಥೆಗಳು ನೀಡುವ ಸಹಾಯ ಧನ, ವಿನಾಯಿತಿ, ಸವಲತ್ತುಗಳನ್ನು ದುರುಪಯೋಗಿಸಿಕೊಂಡು ನಂತರದ ಕಾನೂನು ಕ್ರಮಗಳಿಂದ ನುಣುಚಿಕೊಳ್ಳಲು ರೋಗಗ್ರಸ್ತ ಎಂಬ ಹಣೆಪಟ್ಟಿಯನ್ನು ಅಂಟಿಸಿಕೊಳ್ಳುವುದನ್ನು ತಡೆಗಟ್ಟುವುದು, ಆ ರೀತಿ ಪ್ರಯತ್ನಿಸುವವರಿಗೆ ಸೂಕ್ತ ಪಾಠ ಕಲಿಸಿ ಅಂತಹ ಪರಿಪಾಠಗಳಿಂದ ದೂರವಿರುವಂತೆ ಮಾಡುವುದು, ಅಂತಹ ಪ್ರಕರಣಗಳು ಘಟಿಸದಂತೆ ಮಾಡುವುದು ಈ ಕಾಯ್ದೆಯನ್ನು ಜಾರಿಗೊಳಿಸಿರುವುದರ ಹಿಂದಿನ ಮೂಲ ಉದ್ದೇಶ ಎಂಬುದು ಸುಸ್ಪಷ್ಟವಾಗುತ್ತದೆ.

ಉದ್ಯೋಗಶೀಲತೆ ಮತ್ತು ಆವಿಷ್ಕಾರಗಳನ್ನು ಪ್ರೋತ್ಸಾಹಿಸುವುದರ ಜೊತೆಗೆ ಸಕಾರಣಗಳಿಗಾಗಿ ವಿಫಲವಾಗುವ ಘಟಕಗಳನ್ನು ಗುರುತಿಸಿ ಅವುಗಳನ್ನು ಅತಿ ಶೀಘ್ರವಾಗಿ ಸರಿದಾರಿಗೆ ತರಲು ಬೇಕಾಗುವ ಮಾರ್ಗದರ್ಶನಗಳನ್ನು, ಸವಲತ್ತುಗಳನ್ನು ಒದಗಿಸುವುದು ಹೊಸ ಕಾಯ್ದೆಯ ದೃಷ್ಟಿಕೋನವಾಗಿರುತ್ತದೆ. ಇದರಿಂದಾಗಿ ಉದ್ಯಮಿಗಳು, ಆರ್ಥಿಕ ಸಂಸ್ಥೆಗಳ ನಡುವಿನ ಸಂಘರ್ಷವನ್ನು ಕಡಿಮೆ ಮಾಡುವುದು, ಇದರಿಂದಾಗಿ ದೇಶದ ಪ್ರಗತಿಯಲ್ಲಿ ಎಲ್ಲರೂ ಪಾಲ್ಗೊಳ್ಳುವಂತೆ ಮಾಡಲು ಎಲ್ಲರಿಗೂ ವಿನ್–ವಿನ್ ಪರಿಸ್ಥಿತಿಯನ್ನು ಕಲ್ಪಿಸಿಕೊಡುವುದು ಈ ಕಾಯ್ದೆಯ ಆಶಯ.

**ಈ ಹೊಸ ಕಾಯ್ದೆಯ ಹೊಸ ಆವಿಷ್ಕಾರವೆಂದರೆ ಸಾಂಸ್ಥಿಕ ಮೂಲ ಸೌಕರ್ಯದ ನಾಲ್ಕು ಕಂಬಗಳು :**

**1. ದಿವಾಳಿತನ ಸಲಹಾ ವೃತ್ತಿನಿರತರು (Insolvency Professionals):** ಇವರು ಆಯಾ ಕ್ಷೇತ್ರ ಪರಿಣಿತರಾಗಿದ್ದು ಅನುಭವವನ್ನು ಹೊಂದಿದವರಾಗಿರುತ್ತಾರೆ. ಪ್ರಾಧಿಕಾರದ ಮಾರ್ಗಸೂಚಿಗಳಿಗನುಗುಣವಾಗಿ ಕಾರ್ಯನಿರ್ವಹಿಸುವ ಇವರು ಸಕ್ಷಮ ದಿವಾಳಿತನ ಪ್ರಾತಿನಿಧಿಕ ಸಂಸ್ಥೆಗಳ (Insolvency Professional Agencies) ನಿಯಂತ್ರಣಕ್ಕೊಳಪಟ್ಟಿರುತ್ತಾರೆ.

**2. ಮಾಹಿತಿ ಉಪಯುಕ್ತತೆಗಳು (Information Utilities):** ಇವುಗಳು ಮಾಹಿತಿ ತಂತ್ರಜ್ಞಾನದ ಸಹಾಯದಿಂದ ಉದ್ದಿಮೆದಾರರು, ಉದ್ದಿಮೆಗಳು, ಉದ್ಯಮಗಳು, ಆರ್ಥಿಕ ಸಂಸ್ಥೆಗಳು, ಆರ್ಥಿಕ ವ್ಯವಹಾರಗಳ ದತ್ತಾಂಶಗಳನ್ನು ಬ್ಯಾಂಕುಗಳು, ಪರವಾನಗಿ ಪ್ರಾಧಿಕಾರಗಳು, ಸರಕಾರಿ ಮಾಹಿತಿ ಕೋಶಗಳು, ಮೊದಲಾದವರಿಂದ ಅಂಕಿ ಅಂಶಗಳನ್ನು ಸಂಗ್ರಹಿಸಿ, ಸಂಸ್ಕರಿಸಿ, ಬೇಕಾದವರಿಗೆ ಬೇಕಾದ ರೀತಿಯಲ್ಲಿ ಒದಗಿಸುವ ಹೊಣೆಗಾರಿಕೆಯನ್ನು ಹೊಂದಿರುತ್ತವೆ.

**3. ಸಾಲ ವಸೂಲಿ ಪ್ರಾಧಿಕಾರ (Debt Recovery Tribunal) ಮತ್ತು ರಾಷ್ಟ್ರೀಯ ಕಂಪನಿ ಕಾನೂನು ಪ್ರಾಧಿಕಾರ (National Company Law Tribunal) :** ಈ ಕಾಯ್ದೆಯನ್ನು ವ್ಯವಸ್ಥಿತವಾಗಿ ಜಾರಿಗೊಳಿಸಲು ಸಕ್ಷಮ ಪ್ರಾಧಿಕಾರಗಳೆಂದು ಹೆಸರಿಸಿ ನಿಯುಕ್ತಿಗೊಳಿಸಲಾದ ಈ ಪ್ರಾಧಿಕಾರಗಳು ಜಾಗತಿಕ ಗುಣಮಟ್ಟ ಹೊಂದಿದ್ದು, ಕ್ಷಿಪ್ರವಾಗಿ ಪ್ರಕ್ರಿಯೆಯನ್ನು ಮುಗಿಸಿ, ತೀರ್ಮಾನಿಸಿ, ಆದೇಶ ನೀಡಿ, ಜಾರಿಗೊಳಿಸುವ ಹೊಣೆಗಾರಿಕೆಯನ್ನು ಹೊಂದಿರುತ್ತವೆ.

**4. ಭಾರತೀಯ ದಿವಾಳಿತನ ಮತ್ತು ಪಾಪರಿಕೆ ಮಂಡಳಿ (Insolvency & Bankruptcy Board of India) :** ಈ ಕಾಯ್ದೆಯಡಿಯಲ್ಲಿ ಬರುವ ದಿವಾಳಿತನ ಸಲಹಾ ವೃತ್ತಿನಿರತರು (Insolvency Professionals) ಮತ್ತು ಪ್ರಾತಿನಿಧಿಕ ಸಂಸ್ಥೆಗಳು (Insolvency Professional Agencies), ಮಾಹಿತಿ ಉಪಯುಕ್ತತೆಗಳ (Information Utilities) ಕಾರ್ಯವೈಖರಿಗಳ ಉಸ್ತುವಾರಿ ಮಾಡಲು ಮತ್ತು ಈ ಕಾಯ್ದೆಯ ಬಗ್ಗೆ ಮಾಹಿತಿ ನೀಡಲು ರಚಿಸಲಾಗಿದೆ.

ಹೀಗೆ ಈ ದಿವಾಳಿತನ ಮತ್ತು ಪಾಪರಿಕೆ ಸಂಹಿತೆ (Insolvency & Bankruptcy Code-2016) ಇದು ಒಂದು ಸಮಗ್ರ ಮತ್ತು ವ್ಯವಸ್ಥಿತ ಸುಧಾರಣಾ ಕ್ರಮವಾಗಿದ್ದು, ಭಾರತದ ಪತ್ತಿನ ಮಾರುಕಟ್ಟೆಯ ನಿರ್ವಹಣೆ ಹಾಗೂ ನಿಯಂತ್ರಣದಲ್ಲಿ ಮೈಲುಗಲ್ಲಾಗಿ ಪರಿಗಣಿಸಲ್ಪಡುತ್ತಿದೆ. ಇದು ಭಾರತವನ್ನು ಜಾಗತಿಕ ಆರ್ಥಿಕ ಮಾರುಕಟ್ಟೆಯಲ್ಲಿ ಅತ್ಯಂತ ಸುರಕ್ಷಿತ ತಾಣವಾಗಿ ಗುರುತಿಸಿಕೊಳ್ಳಲು ಬೇಕಾದ ಪೂರಕ ವಾತಾವರಣವನ್ನು ಸೃಜಿಸುವುದು ಎಂಬ ಬಲವಾದ ನಂಬಿಕೆಯಿದೆ.

## ಕರ್ನಾಟಕ ಸೌಹಾರ್ದ ಕಾಯಿದೆಯಲ್ಲಿ ಆಡಳಿತ ಮಂಡಳಿಯ ನಿರ್ದೇಶಕರು ನಿರ್ವಹಿಸಬೇಕಾದ/ ತಿಳಿಯಬೇಕಾದ ಹಕ್ಕು ಕರ್ತವ್ಯ ಮತ್ತು ಜವಾಬ್ದಾರಿಗಳು

...22ನೇ ಪುಟದಿಂದ

ಅಧಿಕಾರಿಗಳ ಜವಾಬ್ದಾರಿಯನ್ನು ನಿಗದಿ ಪಡಿಸಿದ್ದರೆ, ಅದರ ವಸೂಲಾತಿಗಾಗಿ ಅಧಿಭಾರ ಅರ್ಜಿಯನ್ನು ದಾಖಲಿಸತಕ್ಕದ್ದು.

**ಕಲಂ 38 – ಮಂಡಲಿಯನ್ನು ತೆಗೆದು ಹಾಕುವುದು/ ಅಮಾನತ್ತು –**

ಎ) ಒಂದು ಸಹಕಾರಿಯು ಕಾಯಿದೆ, ನಿಯಮ ಅಥವಾ ಉಪವಿಧಿಗಳಲ್ಲಿ ನಿಗದಿ ಪಡಿಸಿ ಕರ್ತವ್ಯವನ್ನು ನಿರ್ವಹಿಸದಿದ್ದರೆ.

ಬಿ) ಸಹಕಾರಿ ಅಥವಾ ಸದಸ್ಯರ ಹಿತಾಸಕ್ತಿಗೆ ಪ್ರತಿಕೂಲ ಕಾರ್ಯ ನಿರ್ವಹಿಸಿದ್ದರೆ.

ಸಿ) ಮಂಡಲಿ ನಡೆಸಲು ಕೋರಂ ಇಲ್ಲದಿದ್ದರೆ.

ಡಿ) ವಾರ್ಷಿಕ ಮಹಾಸಭೆಯನ್ನು ಮಾಡದಿದ್ದರೆ.

ಇ) ಆರ್ಥಿಕ ವ್ಯವಹಾರ ಅಥವಾ ವಂಚನೆ ಮಾಡಿದ್ದರೆ.

ಎಫ್) ಕೆಲಸ ಕಾರ್ಯನಿರ್ವಹಿಸಲು ಇಕ್ಕಟಿನ ಪರಿಸ್ಥಿತಿ.

ಜಿ) ಚುನಾವಣಾ ಪ್ರಾಧಿಕಾರಕ್ಕೆ ಚುನಾವಣೆ ನಡೆಸಲು ನೆರವು ನೀಡದಿದ್ದರೆ ಅಥವಾ ಚುನಾವಣೆ ನಡೆಯದಿದ್ದರೆ.

ಹೆಚ್) ವಾರ್ಷಿಕ ವರದಿಯನ್ನು ಸೆಪ್ಟೆಂಬರ್ 1ನೇ ತಾರೀಖಿನೊಳಗೆ ಲೆಕ್ಕಪರಿಶೋಧನೆ ಮಾಡದೇ ಮಹಾಸಭೆಗೆ ಮಂಡಿಸದಿದ್ದರೆ.

ಸಂಯುಕ್ತ ಸಹಕಾರಿಯು ನೋಟೀಸ್ ಜಾರಿ ಮಾಡಿ ಮಂಡಲಿಯನ್ನು ರದ್ದುಪಡಿಸಬಹುದು ಅಥವಾ ಅಮಾನತ್ತಿನಲಿಡಬಹುದು ಮತ್ತು 6 ತಿಂಗಳ ಅವಧಿಗೆ ಆಡಳಿತಾಧಿಕಾರಿಯನ್ನು ನೇಮಿಸತಕ್ಕದ್ದು. ಈ ಆದೇಶ ಹೊರಡಿಸಿದ ನಂತರ ಮಂಡಲಿಯ ನಿರ್ದೇಶಕರು ತಮ್ಮ ಹುದ್ದೆಯನ್ನು ತೆರವುಗೊಳಿಸಿದಂತೆ ಮತ್ತು ಆಡಳಿತಾಧಿಕಾರಿ ಅಧಿಕಾರ ವಹಿಸಿಕೊಂಡಿದ್ದಾನೆ ಎಂದು ಭಾವಿಸತಕ್ಕದ್ದು.

**ಕಲಂ 38ಎ – ವಿಶೇಷಾಧಿಕಾರಿ ನೇಮಕ :**

ನಿರ್ದೇಶಕರ ಅನರ್ಹತೆ, ರಾಜೀನಾಮೆ, ಮರಣ ಅಥವಾ ತೆಗೆದು ಹಾಕಿದರಿಂದ ಸದಸ್ಯರ ಸಂಖ್ಯೆ ಕೋರಂ ಸಂಖ್ಯೆಗಿಂತ ಕಡಿಮೆ ಇದೆ ಎಂದಾದರೆ ಅಥವಾ ಅಂತಹ ಮಂಡಲಿ ಅವಧಿ ಮುಕ್ತಾಯವಾಗಿದ್ದು, ನೂತನ ಮಂಡಲಿ ರಚನೆಯಾಗಿಲ್ಲದಿದ್ದಲ್ಲಿ 6 ತಿಂಗಳ ಮೀರದ ಅವಧಿಗೆ, ವಿಶೇಷಾಧಿಕಾರಿಯನ್ನು ಸಂಯುಕ್ತ ಸಹಕಾರಿ ನೇಮಕ ಮಾಡತಕ್ಕದ್ದು.

**ಕಲಂ 39 ರಿಂದ 46 – ಸಹಕಾರಿಗೆ ಸಂಬಂಧಪಟ್ಟಂತೆ ದಾವಾ ಪ್ರಕರಣಗಳನ್ನು ದಾಖಲಿಸಲು ಇರುವ ಕ್ರಮಗಳ ಅವಶ್ಯಕ, ಇದಕ್ಕೆ ಮಂಡಲಿಯು ಪ್ರಕರಣ ದಾಖಲಿಸಲು ಅವಶ್ಯಕ ಕ್ರಮ ಜರುಗಿಸತಕ್ಕದ್ದು.**

**ಕಲಂ 47 ರಿಂದ 52 – ಸಹಕಾರಿಯ ಸಮಾಪನೆಗೆ ಇರುವ ಅವಕಾಶಗಳು.**

ಸಹಕಾರಿ 1/5 ಕ್ಕಿಂತ ಸಂಖ್ಯೆ ಸದಸ್ಯರು ಸಹಕಾರಿಯನ್ನು ಸ್ವಯಂ ಪೂರ್ತಿಯಿಂದ ಸಮಾಪನೆಗೊಳಿಸಲು ಅರ್ಜಿಸಬಹುದು. ಸಾಮಾನ್ಯ ಸಭೆ ಹಾಜರಿದ್ದ ಮತ ನೀಡುವ ಹಕ್ಕುಳ್ಳ ಸದಸ್ಯರ ಪೈಕಿ 2/3 ರಷ್ಟು ಸಮಾಪನೆ ಮಾಡುವ ಮತ್ತು ಸಮಾಪಕನ್ನು ನೀಡುವ ನಿರ್ಣಯ ಅಂಗೀಕರಿಸಬಹುದು.

# E-stamping Guidelines for ACC


**DO's :**

1. ACC's have to Operate in the same address where the approval is sought.
2. ACCs must have Display boards displaying their name, address, phone number.
3. Article list has to be displayed for the convenience of the citizen.
4. ACC user should always type the website address in the browser to access the site.
5. ACC user should always click on the SECURE LOGIN button from the website.
6. Citizens should be advised to use only the approved application format.
7. E-Stamp Certificates should be issued only against receipt of duly filled in application form.
8. ACCs are always required to maintain following hardware infrastructure for ensuring smooth operational continuity of the e-Stamping system.
   i) A PC or any desktop computer running Microsoft XP
   ii) A dedicated Laser jet printer with exclusive technical specifications as given by Stock Holding.
   iii) An Internet connection - broadband or a dedicated internet connection
   iv) A 2 Dimensional Hand held Bar-code scanner (optional)
   v) A UPS system [Un-interrupted Power Supply] as power back-up
9. Service Charges to be collected from the public strictly as per Govt Order & a receipt needs to be given to every customer.(Stamp duty amount Rs.1 to 100/- Service charge to be collected is Rs 10, Stamp duty amount of Rs 101/- to Rs5000/- Service charges is Rs 15/-. above Rs 5000/- no service charges to be collected) any counter found to be collecting excess service charge from the public will be liable for suspension.
10. Duly signed application forms are to be accepted. Users must verify all the information on the application form and cross-check/clarify the details with the client if in doubt.
11. ACCs are always required to click once on mouse for hyperlinks and buttons and not to use double click.
12. Close all pop-up Help windows after usage.
13. In case of receipt of time out messages due to no user interaction for a specific period of time. ACCs are required to logout and take fresh re-login in the application.
14. ACC users should always Logout of the application once the work is done. It is un-secure to just close the browser window since the session can still be on if another user is using the same computer.
15. ACC must have two users deployed in handling e-Stamping operation as it is safe to have at least two users having web admin user rights.
16. ACC users must take prints of all the reports which might be required for future use from time to time.
17. Database back up must be taken at least once a day.
18. Separate requisition form should be used for each transaction related to stamp duty payment.
19. Stamp paper must contain names of both the parties, except for Affidavit.
20. ACC user should always take a Preview of the e-Stamp specifically in case of high-value transactions and show it to the client for approval. Signature of the client also should be obtained on the preview as a mode of his approval.
21. Preview signature & the signature on the requisition form should preferably match.
22. User and Supervisor has to write the request no on the client requisition.
23. Supervisor/Authorised person has to sign with seal on the e-stamp certificate before handing over the same to the client.
24. User must use 85-100 GSM quality Bond Paper for printing e-stamp certificate.
25. No manual correction of details should be carried out on the e-stamp certificate after issuance.
26. In case of transfer of the users user ids will be deactivated and new requests have be made for new password.
27. ACC s operating on "Notional imprest' must remit the collected stamp duty by 11 AM of the next day of collection, to the designated account of Stock Holding.
28. ACC Users should always contact the CRA Admin in case of problems with e-Stamp generation or print.
29. ACC should always deliver the e-Stamp to the client within the prescribed time frame. E-Stamp certificate should be issued upfront in case of cash receipt from the citizen. For payment made in the form of cheques/demand drafts/NEFT/RTGS/net banking e-Stamp certificate should be issued on receipt of clear funds.
30. Two separate dedicated computers are to be used for e-stamping (One system for User and one for Supervisor).
31. Only prescribed model printer are required to be used.
32. User must ensure Java and Post script drivers are installed on e-stamping systems.
33. Test print should be taken every day morning before start of the operations.
34. If the Word " COPY " is getting highlighted , then kindly change the cartridge, service the printer and ensure the printer scanner is clean.
35. Always keep enough spare Toners and Papers in the centers.

**DON'T's :**

1. Do not connect the Printer and System to RAW power.
2. Please do not use refilled/refurbished/remanufactured or compatible Catridges.
3. Please do not use the Economode options.
4. Please do not share your User Id and Password with anyone.
5. Logout from e-stamping website if the system is idle for long.
6. Please do not keep the Printer USB port under power saver mode.
7. e-Stamping printers are dedicated printers and should not be used for other regular print jobs.
8. ACCs must ensure that no 'Help Windows' are left open in the background.
9. ACC users should not press the BACK button of the browser. Instead they may use the hyperlinks to navigate from one page to the other .If the animation of the Internet Explorer icon on the top right hand corner of the browser is in motion, this indicates that the application is still processing, and the user must wait for the completion of the process before starting a new process.
10. Users should never close the applet print window while printing the e-Stamp.
11. The live system should not be used for user testing rather the CRA user team should be requested for separate test login ids.
12. ACC users should never verify certificate details requested by a third party without an e-Stamp. They may be directed to the website.
13. ACC users should never access the e-Stamping site from 'Favourites list' in the browser.
14. ACC users are advised not to write down their passwords in dairies or post it notes etc.
15. As a Privacy Policy ACC should never write down or reveal details about an e-Stamp generated for a client.
16. ACC should never generate & print an e-Stamp till the stamp duty paid by the citizen is credited in the account.
17. ACC users should not attempt to compute and provide stamp duty amount to the client.
18. ACC should not sublet the agency or outsource the contract to some other entity or allow franchisee establishments to run the ACC centers. ■

# RBI NEWS - JUNE 2017



K. Vittal Shetty, Banking Consultant, kohimavittal@Hotmail.com, Mobile : 9845699904

**Second Bi-monthly Monetary Policy Statement, 2017-18 Resolution of the Monetary Policy Committee (MPC), Reserve Bank of India**

Based on an assessment of the current and evolving macroeconomic situation at its meeting june 07,2017, the Monetary Policy Committee (MPC) decided to:

• keep the policy repo rate under the liquidity adjustment facility (LAF) unchanged at 6.25 per cent.

Consequently, the reverse repo rate under the LAF remains at 6.0 per cent, and the marginal standing facility (MSF) rate and the Bank Rate at 6.50 per cent.

The decision of the MPC is consistent with a neutral stance of monetary policy in consonance with the objective of achieving the medium-term target for consumer price index (CPI) inflation of 4 per cent within a band of +/- 2 per cent, while supporting growth.

| The next meeting of the MPC is scheduled on August 1 and 2, 2017. | |
|---|---|
| Policy Rates with effect from 06 APRIL 2017 | % |
| POLICY REPO RATE | 6.25% |
| REVERSE REPO RATE | 6.00% |
| MARGINAL STANDING FACILITY RATE | 6.50% |
| BANK RATE | 6.50% |
| Reserve Ratios | % |
| Cash Reserve Ratio | 4.00% |
| Statutory Reserve Ratio WEF 24 JUNE 2017 | 20.00% |

**Scheduled Banks' Statement of Position in India as on Friday, June 09, 2017** (Amount in Billions of Rs.)

| | | SCHEDULED COMMERCIAL BANKS (Including RRBs) | | | ALL SCHEDULED BANKS | | |
|---|---|---|---|---|---|---|---|
| | | **10-JUN-2016** | **26-MAY-2017 *** | **09-JUN-2017 *** | **10-JUN-2016** | **26-MAY-2017 *** | **09-JUN-2017 *** |
| I | a) Deposits | **95131.48** | 105538.89 | 105779.47 | 97731.4 | 107503.86 | **107750.57** |
| | i) Demand | **8599.73** | 10873.43 | 10735.75 | 8815.04 | 11049.96 | **10913** |
| | ii) Time | **86531.75** | 94665.48 | 95043.66 | 88916.36 | 96453.92 | **96837.51** |
| II | CASH | **621.29** | 649.8 | 619.07 | 633.55 | 667.7 | **635.93** |
| III | WITH R.B.I. | **3860.91** | 4329.5 | 4424.95 | 3970.8 | 4454.36 | **4546.38** |
| IV | INVESTMENTS | **27460** | 32258.62 | 32505.68 | 28510.87 | 32863.44 | **33116.07** |
| V | BANK CREDIT | **72229.39** | 75984.78 | 76582.12 | 74466.69 | 77222.33 | **77829.12** |

**IMPORTANT NEWS**

**Regulatory requirements for issue of Pre-Paid Payment Instruments by Co-operative Banks**

Please refer to circular UBD.CO.BPD.PCB.Cir.No.65/ 09.69.000/ 2013-14 dated May 27, 2014 permitting the UCBs which have installed ATMs and issued ATM cum Debit cards to introduce semi-closed Prepaid Payment Instruments (PPIs) for payment of utility bills / essential services up to a limit of Rs.10,000/-.

2. The matter has been revisited and it has now been decided to permit all licenced co-operative banks having their own ATM network to issue semi-closed PPIs, provided there are no restrictions on acceptance or repayment of deposits. This is subject to the compliance with eligibility criteria and other guidelines as prescribed by Department of Payment and Settlement Systems (DPSS), Reserve Bank of India (RBI) from time to time.

3. Further, it has also been decided to permit co-operative banks satisfying the above criteria to issue Open System PPIs. The banks should comply with the following additional regulatory requirements for this purpose:

a) The bank should be CBS compliant;

b) CRAR should not be less than 10% in the current and preceding financial year;

c) Gross NPAs should be less than 7% and net NPAs should not be more than 3% in the current and preceding financial year;

d) Assessed net-worth should be more than Rs.25 crore as per the last RBI inspection;

e) There should not be any default in the maintenance of CRR/SLR during the current and preceding financial year;

f) The bank should have made a net profit in the preceding financial year;

g) Presence of two professional directors on the Board of the bank and prevalence of systems and control as under:

i. internal inspection / audit system for all the branches and the Head Office

ii. concurrent audit system in all major branches

h) Satisfactory adherence to KYC / AML / Combating Financing of Terrorism guidelines issued by the Reserve Bank from time to time;

i) No monetary penalty should have been imposed on the bank in last two financial years and during the year of submitting the application;

j) The bank shall have satisfactorily implemented a comprehensive Board approved policy on Customer grievance

redressal mechanism which includes escalation matrix for resolution of customer complaints.

4. The issuance and operation of prepaid instruments shall also be guided by the instructions issued in this regard by DPSS, RBI from time to time. Eligible co-operative banks, as indicated in para 2 and 3 above, desirous to issue PPIs are required to obtain a No Objection Certificate from the respective Regional Office of Department of Co-operative Bank Supervision concerned before applying to DPSS, Central Office, Mumbai for authorization.

**Shri S. Ganesh Kumar as New Executive Director**

As Executive Director, Shri Ganesh Kumar will look after Department of Information Technology, Department of Payment and Settlement Systems and Department of External Investments and Operations.

**Section 24 and Section 56 of the Banking Regulation Act, 1949 - Maintenance of Statutory Liquidity Ratio (SLR)**

Maintenance of Statutory Liquidity Ratio under Section 24 and Section 56 of the Banking Regulation Act, 1949.

2. As announced in the Second Bi-Monthly Monetary Policy Statement 2017-18 of the Reserve Bank of India today, it has been decided to reduce the Statutory Liquidity Ratio (SLR) of commercial banks, primary (urban) co-operative banks (UCBs), state co-operative banks and central co-operative banks from 20.5 per cent of their Net Demand and Time Liabilities (NDTL) to 20.00 per cent from the fortnight commencing June 24, 2017. A copy of the relative notification DBR.No.Ret. BC.73/12.02.001/2016-17 dated June 7, 2017, applicable to the banks is enclosed

**Statement on Developmental and Regulatory Policies, Reserve Bank of India**

**I. Reduction of Statutory Liquidity Ratio (SLR)**

As per the existing roadmap, commercial banks have to reach the minimum Liquidity Coverage Ratio (LCR) of 100 percent on January 1, 2019. Government securities held by banks in excess of the minimum SLR requirement, Facility to Avail Liquidity for Liquidity Coverage Ratio (FALLCR) and Marginal Standing Facility (MSF) are included in the stock of High Quality Liquid Assets (HQLAs).

In order to give greater flexibility to banks to comply with the LCR requirement in an efficient manner, it has been decided to reduce the SLR from 20.5 per cent of NDTL to 20.0 per cent of NDTL with effect from the fortnight beginning June 24, 2017. The other prescriptions in respect of FALLCR and MSF carve out from SLR for LCR purposes remain unchanged.

Since currently the SLR requirement is uniform across banks, Primary (Urban) Cooperative Banks, State and Central Cooperative Banks shall also maintain SLR at 20.0 per cent of NDTL with effect from the fortnight beginning June 24, 2017.

**Aligning roadmap for unbanked villages having population more than 5000 with revised guidelines on Branch Authorisation Policy**

SLBCs were advised to identify villages with population above 5000 without a bank branch of a scheduled commercial bank in their State and allot these villages among scheduled commercial banks (including Regional Rural Banks) for opening brick and mortar branches.

2. In this connection, we draw your attention to the circular DBR.No.BAPD.BC.69/22.01.001/2016-17 dated May 18, 2017 on 'Rationalisation of Branch Authorisation Policy - Revision of Guidelines' wherein final guidelines on 'Banking Outlets' have been issued with a view to facilitate financial inclusion as also to provide flexibility to banks on the choice of delivery channel.

3. In the circumstances, SLBC Convenor banks are advised to review and identify the unbanked rural centres (URCs) in villages with population above 5000, in light of the revised guidelines on rationalisation of branch authorisation policy and ensure that such unbanked rural centres in villages with population above 5000, if any, are banked forthwith by opening of CBS enabled banking outlet.

A confirmation stating that all unbanked rural centres in villages with population above 5000 have been banked, may be furnished to the respective Regional Office of Financial Inclusion and Development Department of Reserve Bank of India latest by December 31, 2017.

**Issue of Rs. 500 banknotes with inset letter 'A'**

In continuation of issuing of Rs. 500 denomination banknotes in Mahatma Gandhi (new) series from time to time which are currently legal tender, a new batch of banknotes with inset letter "A" in both the number panels, bearing the signature of Dr. Urjit R. Patel Governor, Reserve Bank of India; with the year of printing '2017' on the reverse, are being issued.

The design of these notes is similar in all respects to the Rs. 500 banknotes in Mahatma Gandhi (New) Series which were first notified through the Press Release: 2016-2017/1146 dated November 8, 2016.

• The size is 66mm x150mm
• The colour is stone grey
• Red Fort-an image of Indian heritage site with Indian flag on the reverse

**Issue of Rs. 10 coin to commemorate the occasion of "150th Birth Anniversary of Shrimad Rajchandra"**

The Government of India has minted the above mentioned coin which the Reserve Bank of India will shortly put into circulation. The coin has been released by the Hon'ble Prime Minister of India.

**FINO Payments Bank Limited commences operations**

FINO Payments Bank Limited has commenced operations as a payments bank with effect from June 30, 2017. The Reserve Bank has issued a licence to the bank under Section 22 (1) of the Banking Regulation Act, 1949 to carry on the business of payments bank in India.

Source: www.rbi.org.in

Swabhimani Sahakari, Monthly, Publishing Date 5th, Posting Day 8th.
Posted at Bangalore PSO, Mysore Road, Bangalore 560026
Registered No. KA/BGW/1744/2017-19. RNI No. KARBIL - 2004/18001/Pages 28




ಅಮರ ಬಾಪು ಚಿಂತನ

ಗಾಂಧಿ ದರ್ಪಣ ಕನ್ನಡ ಮತ್ತು ಆಂಗ್ಲ ದ್ವೈಮಾಸಿಕ ಪತ್ರಿಕೆ

5ನೇ ವರ್ಷದ ಸಂಭ್ರಮ

AMARA BAAPU CHINTANA


Mirror of Gandhi Kannada & English Bi-Monthly

**Regd. Office : Gandhi Bhavana, Kumara Park East, Bangalore-560 001**

ಪ್ರಪಂಚದ ಮಹಾನ್ ಮಾನವತಾವಾದಿ ನಾಯಕರಾದ ಮಾರ್ಟಿನ್ ಲೂಥರ್ ಕಿಂಗ್, ನೆಲ್ಸನ್ ಮಂಡೇಲಾ, ಬರಾಕ್ ಒಬಮಾ ಮುಂತಾದವರು ಗಾಂಧೀಜಿಯವರ ಆದರ್ಶ ವಿಚಾರಗಳಿಂದ ಪ್ರೇರಿತರಾಗಿ ವಿಶ್ವಮಾನ್ಯರೆನಿಸಿದ್ದಾರೆ. ಸ್ವಾತಂತ್ರ್ಯ ನಂತರ ಈ ವಿಚಾರಗಳನ್ನು ಭಾರತೀಯರು ಮರೆತಿದ್ದರಿಂದ ದೇಶದ ಇಂದಿನ ದುರಾವಸ್ಥೆಗೆ ಕಾರಣವೆನ್ನಬಹುದು.

ಮುಂದಿನ ಯುವ ಪೀಳಿಗೆಗೆ ಗಾಂಧಿ ವಿಚಾರಗಳನ್ನು ತಿಳಿಸುವ ಸಲುವಾಗಿ ಕಳೆದ ಐದು ವರ್ಷಗಳಿಂದ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ "ಅಮರ ಬಾಪು ಚಿಂತನ" ದ್ವೈಮಾಸಿಕ ಪತ್ರಿಕೆಯನ್ನು ಹೊರತರಲಾಗುತ್ತಿದೆ. ನಾಡಿನಾದ್ಯಂತ ಪ್ರಮುಖ ಶಿಕ್ಷಣ ಸಂಸ್ಥೆಗಳು, ಗ್ರಂಥಾಲಯಗಳು ಮತ್ತು ಸರ್ಕಾರಿ/ಸರ್ಕಾರೇತರ ಸಂಸ್ಥೆಗಳಿಗೆ ನಿರಂತರವಾಗಿ ತಲುಪುತ್ತಿದೆ.






Gandhian thoughts have strongly influenced the great leaders of the world like Martin Luther King, Nelson Mandela and Barack Obama & others. Mahatmaji's all pervading thoughts are most relevant today and are absolutely needed in the present day.

"Amara Baapu Chintana" a bilingual Bi-Monthly magazine in circulation since five years, is an endeavor to propagate and popularize Gandhian thoughts among the Indians in general and youth in particular, will reach to major educational institutions, public libraries, govt departments / NGO's and subscribers to their doorsteps.

"ಅಮರ ಬಾಪು ಚಿಂತನ"
ಕನ್ನಡ ಮತ್ತು ಆಂಗ್ಲ ದ್ವೈಮಾಸಿಕ ಪತ್ರಿಕೆಗೆ
ಇಂದೇ
ಚಂದಾದಾರರಾಗಿ !




Editor-in-Chief :
JEERIGE LOKESH

Advisory Board
- Dr. Wooday P. Krishna
- Prof. Mallepuram G.Venkatesh
- H. Krishna

FREE

ಉಚಿತ





Send Subscription Amount through Cheque / DD / Money order or NEFT in favour of 'AMARA BAAPU CHINTANA'

Name of the Bank :
ALLAHABAD BANK
Branch : Malleshwaram, 6th Cross, Bangalore-560003
Account No : 50323011980
IFSC Code : ALLA0212729

| ಚಂದಾ ವಿವರ | | Subscription Details |
|---|---|---|
| ಮೂರು ವರ್ಷದ ಚಂದಾ<br>500 ಪುಟಗಳ ಗಾಂಧಿ ಆತ್ಮಕಥೆ ಪುಸ್ತಕ ಉಚಿತ | ₹ 600/- | For 3 Years<br>Avail 500 Pages Gandhi Autobiography Book Free |
| ಐದು ವರ್ಷದ ಚಂದಾ<br>(500 ಪುಟಗಳ ಗಾಂಧಿ ಆತ್ಮಕಥೆ ಪುಸ್ತಕ ಮತ್ತು ಸುಂದರವಾದ ಚರಕದ ಸ್ಮರಣಿಕೆ ಉಚಿತ | ₹ 1000/- | For 5 Years<br>Avail 500 Pages Gandhi Autobiography & Charaka Momento Free |

For Details Contact : 94480 42653, 98800 60354 For Advertisement : 90536 18076

amarabaapuchintana@gmail.com facebook.com/amarabaapuchintana www.amarabaapuchintana.com


ಕೇಂದ್ರ ಕಛೇರಿ : ದೂರವಾಣಿ ಸಂಖ್ಯೆಗಳು : 080-23378375-80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ : ನಂ.246, 17 & 18ನೇ ಕ್ರಾಸ್ ಮಧ್ಯ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055. ದೂ : 080-23449933/34.
ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್, 1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1-ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010. ದೂ : 080 23525546
ಮೈಸೂರು ವಿಭಾಗೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು - 570004. ದೂ: 0821 2332299
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂ : 0831-2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1-4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ - 585102. ದೂ: 08472-270222.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010